ಡಿಸೆಂಬರ್ 31 | ಧೈರ್ಯಗೆಡುವದಿಲ್ಲ! | ಬೆಳಿಗ್ಗೆ : ಮಲಾಕಿ 1,2,3,4 ಸಂಜೆ : ಪ್ರಕ 22

**'ಆದುದರಿಂದ, ನಿಮ್ಮ ನಿಮಿತ್ತ ನನಗೆ ಉಂಟಾದ ಕಷ್ಟಗಳನ್ನು ನೋಡಿ, ನೀವು ಧೈರ್ಯಗೆಡಬಾರದೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ. ಈ ಕಷ್ಟಗಳು ನಿಮಗೆ ಘನವನ್ನು ಉಂಟುಮಾಡುತ್ತವಷ್ಟೆ' (ಎಫೆ 3:13).**

ಪ್ರಾರಂಭದಲ್ಲಿ ಒಂದು ದೇವದಾರು ಮರದ ಬೀಜದಿಂದ ಚಿಕ್ಕ ಸಸಿ ಬಲಹೀನವಾಗಿ ಮೊಳೆತು ಮೇಲೆ ಎದ್ದೇಳಬಹುದು. ಅದರ ಸುತ್ತಲೂ ಇತರ ಗಿಡಬಳ್ಳಿಗಳು ಅದನ್ನು ತಾಕುವವು, ಮಳೆಗಾಳಿ, ಬಿಸಿಲು ಅದನ್ನು ಸೋತುಹೋಗುವಂತೆ ಮಾಡುವದು. ಆದರೆ ಅದು ಸೋತುಹೋಗದೆ, ಪ್ರಯತ್ನಿಸುತ್ತಾ, ಎತ್ತರವಾಗಿ ಬೆಳೆಯುವದು. ಸಾವಿರಾರು ಪಕ್ಷಿಗಳು ಆ ಮರದಲ್ಲಿ ಗೂಡುಕಟ್ಟಿ ಸಂತೋಷದಿಂದ ವಾಸಿಸುವವು. ಮನೆಗಳಿಗೆ ಉಪಕರಣಗಳನ್ನಾಗಿ ಆ ಮರವನ್ನು ಉಪಯೋಗಿಸುವರು. ನೀವೂ ಸಹ ಕರ್ತನಿಗಾಗಿ ನೆಡಲ್ಪಟ್ಟ ದೇವದಾರು ಮರಗಳಾಗಿರುವಿರಿ. ಕರ್ತನು ಕೆಲವರನ್ನು ಉಪಯೋಗಿಸಲು, ಜವಾಬ್ದಾರಿಗಳನ್ನು ಕೊಡುವಾಗ, ಅದನ್ನು ತೆಗೆದುಕೊಳ್ಳಲು ಹಿಂಜರಿಯುವರು "ಅಯ್ಯೋ ನನಗೆ ಸೋಲಿನ ಬಗ್ಗೆ ಭಯವಿರುವದು, ನನಗೆ ಅಭ್ಯಾಸವಿಲ್ಲ. ಎಂದೆಲ್ಲಾ ನೆವ ಹೇಳುವರು" ಹಾಗೆಯೇ, ಪ್ರವಾದಿಯಾದ ಯೆರೆಮೀಯನು "ಅಯ್ಯೋ, ಕರ್ತನಾದ ಯೆಹೋವನೇ, ನಾನು ಮಾತು ಬಲ್ಲವನಲ್ಲ, ಬಾಲಕನು" ಅಂದನು (ಯೆರೆ 1:6). ಆದರೆ ಕರ್ತನು – "ಬಾಲಕನೆನ್ನಬೇಡ, ... ನಾನು ಆಜ್ಞಾಪಿಸಿದ್ದನ್ನೆಲ್ಲಾ ನುಡಿಯಲೇ ನುಡಿಯುವಿ. ಅವರಿಗೆ ಅಂಜಬೇಡ; ನಿನ್ನನ್ನುದ್ಧರಿಸಲು ನಾನೇ ನಿನ್ನೊಂದಿಗಿರುವೆನು" ಎಂದು ಹೇಳಿದನು (ಯೆರೆ 1:7,8).

ವಿಜ್ಞಾನಿಯಾದ ಥಾಮಸ್ ಆಲ್ವ ಎಡಿಸನ್ ವಿದ್ಯುಚ್ಛಕ್ತಿ ಬಲ್ಬನ್ನು ಕಂಡುಹಿಡಿದನು. ವಿದ್ಯುಚ್ಛಕ್ತಿ ಬಲ್ಬನಲ್ಲಿ ಪ್ರಕಾಶವಾಗಿ ಉರಿಯುವಂತೆ ಮಾಡುವಲ್ಲಿ, ಅನೇಕ ಬಾರಿ ಪ್ರಯತ್ನಿಸಿ ವಿಫಲನಾದರೂ, ತನ್ನ ಪ್ರಯತ್ನವನ್ನು ಬಿಡದೆ ಮುಂದುವರೆಸಿ, ಕೊನೆಗೂ ತನ್ನ ಪ್ರಯತ್ನದಲ್ಲಿ ಸಫಲಗೊಂಡನು. ಆತನು ಹೀಗೆ ಹೇಳುತ್ತಾನೆ "ಅನೇಕರು ಪೂರ್ಣಗೊಳ್ಳುವ ಸಮಯದಲ್ಲಿ ತಮ್ಮ ಪ್ರಯತ್ನವನ್ನು ಬಿಟ್ಟುಬಿಡುವರು. ಬೇಸರಗೊಳ್ಳದೆ, ಧೈರ್ಯಗೆಡದೆ ಕೊನೆಯವರೆಗೂ ಪ್ರಯತ್ನಿಸುವವರಿಗೆ ನಿಶ್ಚಯವಾಗಿ ಜಯ ದೊರಕುವದು" ಎಂದು. ಆಫ್ರಿಕಾ ಸರ್ಕಾರ ವಜ್ರದ ಗಣಿ ತೋಡಲು ಒಬ್ಬ ಕಂಟ್ರಾಕ್ಟರಿಗೆ ಕೆಲಸವನ್ನು ಒಪ್ಪಿಸಿದರು. ಅವನು 1700 ಅಡಿ ಆಳದವರೆಗೂ ಹೋಗಿ, ಬೇಸತ್ತು ತನ್ನ ಪ್ರಯತ್ನವನ್ನು ಬಿಟ್ಟುಬಿಟ್ಟನು. ನಂತರ ಸರ್ಕಾರ ಮತ್ತೊಬ್ಬ ಕಂಟ್ರಾಕ್ಟರನ್ನು ಆ ಕೆಲಸಕ್ಕೆ ನೇಮಿಸಿತು. ಅವನು ಬೇರೆ ಜಾಗವನ್ನು ಆಯ್ಕೆ ಮಾಡಿಕೊಳ್ಳದೆ, ದೇವರನ್ನು ಪ್ರಾರ್ಥಿಸಿ ಅದೇ ಜಾಗದಲ್ಲಿ ಇನ್ನೂ ನೂರು ಅಡಿ ಆಳಕ್ಕೆ ಹೋಗಲು ಅನೇಕ ವಜ್ರದ ಕಲ್ಲುಗಳನ್ನು ಕಂಡನು.

ದೇವಮಕ್ಕಳೇ, ನಿಮ್ಮ ಪ್ರಯತ್ನಗಳನ್ನು ಕೈಬಿಡದೆ, ಪರಿಶುದ್ಧತೆಯ ಕಡೆಗೂ, ಪರಲೋಕದ ಕಡೆಗೂ ನೋಡುತ್ತಾ ಮುಂದೆ ಸಾಗಿರಿ.

**ನೆನಪಿಗೆ : 'ಇಗೋ ಬೇಗನೆ ಬರುತ್ತೇನೆ; ಅವನವನ ನಡತೆಯ ಪ್ರಕಾರ ಕೊಡತಕ್ಕ ಪ್ರತಿಫಲವು ನನ್ನ ಕೈಯಲ್ಲಿ ಇದೆ' (ಪ್ರಕ 22:12).**




# ಅನುದಿನದ ಆಹಾರ
Anudhinada Ahara

ಡಿಸೆಂಬರ್ 2017 DECEMBER

ಮರ 18 ಹಣ್ಣು 12 Tree 18 Fruit 12


## ಆ ಬಾಲಕನು

ಚಕ್ರವರ್ತಿಯಾದ ನೆಪೋಲಿಯನ್ನನಿಗೆ ಎಂಥ ಮಗು ಹುಟ್ಟುವದೋ ಎಂದು ಇಡೀ ಫ್ರಾನ್ಸ್ ದೇಶದ ಜನ ಆತುರದಿಂದ ಕಾಯುತ್ತಿದ್ದರು. ಹೆಣ್ಣು ಮಗು ಹುಟ್ಟಿದರೆ 22 ಗುಂಡುಗಳನ್ನು ಹಾರಿಸಬೇಕೆಂದೂ ಗಂಡು ಮಗು ಹುಟ್ಟಿದರೆ 100 ಗುಂಡುಗಳನ್ನು ಹಾರಿಸಬೇಕೆಂತಲೂ ರಾಜಾಜ್ಞೆಯಾಗಿತ್ತು. ಫಿರಂಗಿ ಗುಂಡಿನ ಶಬ್ದವನ್ನು ಕೇಳಲು ಜನರು ಕಾತುರದಿಂದ ಕಾಯುತ್ತಿದ್ದರು. ಮೊದಲನೆಯ ಗುಂಡಿನ ಶಬ್ದ ಕೇಳಿಸಿತು. ಎಲ್ಲರೂ ಎಣಿಸಲು ಆರಂಭಿಸಿದರು. 21 ಗುಂಡುಗಳು ಹಾರಿದ ನಂತರ ಸ್ವಲ್ಪ ನಿಶ್ಯಬ್ದ. ಅಯ್ಯೋ ಹೆಣ್ಣು ಮಗು ಎಂದು ನೆನಸುತ್ತಿರುವಾಗಲೇ 22ನೆಯ ಗುಂಡಿನ ಶಬ್ದ ಕೇಳಿಸಿತು. ಎಲ್ಲರೂ ಹರ್ಷ ಉಲ್ಲಾಸದಿಂದ ಕುಣಿದಾಡಿದರು. 100 ರವರೆಗೂ ಗುಂಡು ಹಾರಿತು. ಜನರ ಉಲ್ಲಾಸಕ್ಕೆ ಪಾರವೇ ಇಲ್ಲ. ಆದರೆ ಇಂದು ನೆಪೋಲಿಯನ್ನನ ಮಗನ ಕುರಿತಾದ ವಿವರ ಚರಿತ್ರೆಯಲಿಲ್ಲ. ಕೆಲವು ವರ್ಷಗಳ ಹಿಂದೆ ನೆಪೋಲಿಯನ್ನನು ಸೆರೆಯಲ್ಲಿ ಹಾಕಲ್ಪಟ್ಟನು. ನಂತರ ಅವನ ಮಗನ ಕುರಿತು ಯಾವ ಸಂಗತಿಯೂ ಇಲ್ಲ.

### 1. ಪ್ರಸಿದ್ಧನಾದ ಬಾಲಕ

ನಾವು ನಮ್ಮ ಯೋಚನೆಯನ್ನು 2000 ವರ್ಷಗಳ ಹಿಂದೆ ಬೇತ್ಲೆಹೇಮಿನಲ್ಲಿ ಕೊಟ್ಟಿಗೆಯಲ್ಲಿ ಹುಟ್ಟಿದ ಬಾಲಕನ ಕಡೆಗೆ ತಿರುಗಿಸೋಣ. ಸಾಧಾರಣ ಸ್ಥಿತಿ, ಯಾವ ಆರ್ಭಟವಿಲ್ಲ, ಆಡಂಬರವೂ ಇಲ್ಲ. ಶಾಂತ ಸ್ಥಳ, ಮರಿಯಳು ತನ್ನ ಬಳಿಯಲ್ಲಿದ್ದ ಚಿಕ್ಕ ತುಂಡು ಬಟ್ಟೆಗಳಿಂದ ಮಗುವನ್ನು ಸುತ್ತಿದ್ದಾಳೆ. ಆ ಪುಟ್ಟ ಮಗುವು ತನ್ನ ಮುದ್ದಾದ ಕೈಕಾಲುಗಳನ್ನು ಆಡಿಸುತ್ತಾ ಆಟವಾಡುತ್ತಿದೆ. ಚರಿತ್ರೆಯನ್ನೇ ಮಾರ್ಪಡಿಸಿದವನು. ಸೈತಾನನ ತಲೆಯನ್ನು ಜಜ್ಜಿಹಾಕಿದವನು. ಸಮಾಧಿಯನ್ನು ತೆರೆದು ಜೀವಿಸುವವನಾಗಿ ಎದ್ದು ಬರುವವನು. ಅವನೇ ಈ ಬಾಲಕ. ಅಲ್ಲಿರುವ ಅಜ್ಜಿಯರು ಮಾತನಾಡಿಕೊಳ್ಳುತ್ತಿದ್ದಾರೆ. ಇವನು ಯಾರ ಹಾಗಿದ್ದಾನೆ? ತಾಯಿಯಂತೆಯೂ ಇಲ್ಲ. ಯೋಸೇಫನಂತೆಯೂ ಇಲ್ಲ. ಈ ಬಾಲಕ ರೂಪವು ದೇವರ ಪ್ರತಿರೂಪದಂತಿದೆ. 'ಈತನು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ನನ್ನ ಶಕ್ತಿಯ ವಾಕ್ಯದಿಂದ ಸಮಸ್ತಕ್ಕೆ ಆಧಾರವೂ ಆಗಿದ್ದಾನೆ' (ಇಬ್ರಿ 1:3). ಎಷ್ಟು ಪ್ರಸಿದ್ಧಿ ಪಡೆದ ಬಾಲಕನು ಇವನು. ಆತನ ವಿಷಯವಾಗಿ ಧ್ಯಾನಿಸುವುದು ಬಹಳ ಸೊಗಸಾಗಿರುವುದು.

## 2. ಹೆಸರಿನೊಂದಿಗೆ ಹುಟ್ಟಿದ ಬಾಲಕನು

ಆ ಬಾಲಕನು ಹುಟ್ಟುವ ಮೊದಲೇ ಯೆಶಾಯ ಪ್ರವಾದಿಯ ಮೂಲಕ ದೇವರು 'ಇಮ್ಮಾನುವೇಲ' ನೆಂಬ ಹೆಸರನ್ನು ಸೂಚಿಸಿದ್ದನು. ಹೆಸರಿನೊಂದಿಗೆ ಹುಟ್ಟಿದ ಈ ರಕ್ಷಕನ ಹೆಸರಿನಲ್ಲಿ ಆಳವಾದ ಅರ್ಥಗಳಿವೆ. ಆದರಣೆಯ ಸಂದೇಶಗಳಿವೆ. ಇಮ್ಮಾನುವೇಲನೆಂದರೆ ದೇವರು ನಮ್ಮ ಕೂಡ ಇದ್ದಾನೆಂದು ಅರ್ಥ. ಯೇಸು ಎಂದರೆ ಆತನು ತನ್ನ ಜನರನ್ನು ಪಾಪದಿಂದ ಬಿಡಿಸಿ ಕಾಯುವವನು ಎಂದರ್ಥ. ಕ್ರಿಸ್ತನು ಎಂದರೆ ಅಭಿಷೇಕಿಸಲ್ಪಟ್ಟವನು ಎಂದು ಅರ್ಥ. ಆತನ ಹೆಸರಿನ ಆಳವನ್ನು ಅರ್ಥ ಮಾಡಿಕೊಂಡರೆ ಮಾತ್ರ ಸಾಲದು. ಅದನ್ನು ನಾವು ನಮ್ಮ ಸ್ವಂತವಾಗಿ ಮಾಡಿಕೊಳ್ಳಬೇಕಲ್ಲವೇ? ನಾವು ಆತನ ಹೆಸರನ್ನು ಧರಿಸಿದ ಆತನ ಜನರಲ್ಲವೇ? ಆತನ ಹೆಸರಿನಲ್ಲಿ ಶಕ್ತಿಯುಂಟು. ಈ ಕಾರಣದಿಂದ 'ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ' (ಫಿಲಿ 2:9–12). ಆತನ ಹೆಸರನ್ನು ಹೇಳಿದರೆ ಸಾಕು. ದುರಾತ್ಮಗಳು ಓಡಿಹೋಗುತ್ತವೆ. ವ್ಯಾಧಿಗಳು ಗುಣವಾಗುತ್ತವೆ. ಆತನ ಹೆಸರಿನಲ್ಲಿ ಏನು ಬೇಡಿದರೂ ಹೊಂದಿಕೊಳ್ಳುತ್ತೇವೆ. ಈ ಬಾಲಕನು ಹೆಸರಿನೊಂದಿಗೆ ಹುಟ್ಟಿದುದು ಮಾತ್ರವಲ್ಲ. ನಮ್ಮ ಹೆಸರನ್ನೂ ಕೂಡ ಜೀವಭಾಧ್ಯರ ಪಟ್ಟಿಯಲ್ಲಿ ಬರೆಯುವಂಥವನೂ ಆಗಿದ್ದಾನೆ. ದೇವಮಗುವೇ, ಯೇಸುಕ್ರಿಸ್ತನಲ್ಲಿ ಜಯಹೊಂದಿ ಬಾಳಬೇಕು. ಹೊಸ ಹೆಸರನ್ನು ಧರಿಸಿಕೊಳ್ಳುವವನಾಗಬೇಕು (ಪ್ರಕ 2:17).

## 3. ಮಾರ್ಗದರ್ಶಿಯಾದ ಬಾಲಕ

ಈ ಬಾಲಕನು ಮಾರ್ಗ ತೋರಿಸಲು ಹುಟ್ಟಿದ್ದಾನೆ. ಕ್ರಿಸ್ತನನ್ನು ತೋರಿಸಲು ನಕ್ಷತ್ರವು ಮುನ್ನಡೆಯಿತು. ಹೇಗೆ ಶಾಸ್ತ್ರಿಗಳನ್ನೂ, ಕುರುಬರನ್ನೂ ಜೋಯಿಸರನ್ನೂ ಕಲ್ಲುಮುಳ್ಳುಗಳ ದಾರಿಯಲ್ಲಿ ನಡೆಸಿ ಬಾಲಕನಿದ್ದ ಸ್ಥಳಕ್ಕೆ ಕರೆತಂದಿತೋ ಹಾಗೆಯೇ ಕ್ರಿಸ್ತನೂ ಕೂಡ ನಮ್ಮನ್ನು ಅರಣ್ಯ ಮಾರ್ಗದಲ್ಲಿ ನಡೆಸಿಯೇ ಪರಮ ಕಾನಾನಿಗೆ ಸೇರಿಸುವುದಕ್ಕಾಗಿಯೇ ಬಾಲಕನಾಗಿ ಹುಟ್ಟಿದನು. ಯೇಸು ಕ್ರಿಸ್ತನೂ ಸಹ ಒಂದು ನಕ್ಷತ್ರವೇ. ಹೌದು ಆತನು ಉದಯ ಸೂಚಕ ನಕ್ಷತ್ರ. ಆ ಯೇಸು ನಮ್ಮನ್ನು ನಿತ್ಯಜೀವದ ದಾರಿಯಲ್ಲಿ ನಡೆಸುತ್ತಾನೆ. ಹಲ್ಲೆಲೂಯ!

## 4. ತ್ಯಾಗಮಾಡಲು ಬಂದ ಬಾಲಕ

ಎಲ್ಲಾ ಮಕ್ಕಳೂ ಬಾಳಿ ಬದುಕುವದಕ್ಕಾಗಿಯೇ ಹುಟ್ಟುತ್ತಾರೆ. ಆದರೆ ಯೇಸು ಬಾಲಕನು ಸಾಯುವದಕ್ಕಾಗಿ ಹುಟ್ಟಿದನು. ಆತನ ಜೀವನವೆಲ್ಲಾ ಆದಿಯಿಂದ ಅಂತ್ಯದವರೆಗೂ ತ್ಯಾಗಮಯವಾಗಿಯೇ ಇತ್ತು. ಹೆರೋದನು ಅವನ ವಿರೋಧಿಯಾದನು. ಅಲ್ಲಿಂದ ಪ್ರಾರಂಭವಾಗಿ ಕಲ್ವಾರಿ ಶಿಲುಬೆಯವರೆಗೂ ಮರಣದ ನೆರಳು ಆತನನ್ನು ಹಿಂಬಾಲಿಸಿತು. ಇದನ್ನು ಕುರಿತು ಅಪೊಸ್ತಲನಾದ ಪೇತ್ರನು ಬರೆಯುವಾಗ "ನಮ್ಮನ್ನು ದೇವರ ಬಳಿಗೆ ಸೇರಿಸುವುದಕ್ಕಾಗಿ ಒಂದೇ ಸಾರಿ



ಪಾಪ ನಿವಾರಣಕ್ಕೋಸ್ಕರ ಬಾಧೆಪಟ್ಟು ಸತ್ತನು" (1ಪೇತ್ರ 3:18). ಆತನು ಎಲ್ಲರ ವಿಮೋಚನಾರ್ಥವಾಗಿ ಸತ್ತನು ಎಂದು (1ತಿಮೊ 2:6) ರಲ್ಲಿ ಬರೆಯುತ್ತಾನೆ. ಯೇಸುವಿನ ತಂದೆ ತಾಯಿಗಳಿಗೇ ಆತನು ಹುಟ್ಟಿದ ಉದ್ದೇಶ ತಿಳಿದಿರಲಿಲ್ಲ. ಆತನ ಕೈಕಾಲುಗಳಿಗೆ ಮೊಳೆ ಹೊಡೆಯಲ್ಪಡುತ್ತದೆಂದು ಅವರಿಗೆ ತಿಳಿದಿರಲಿಲ್ಲ. ಈ ಬಾಲಕನು ಮುಂದೆ ಲೋಕದ ಮಾನವರ ಬಿಡುಗಡೆಗಾಗಿ ತನ್ನ ಪ್ರಾಣವನ್ನೇ ಕೊಡುತ್ತಾನೆಂದು ಅವರಿಗೆ ತಿಳಿದಿರಲೇ ಇಲ್ಲ. ತನ್ನ ಜೀವಿತದ ಉದ್ದೇಶವನ್ನು ತಿಳಿದಿದ್ದ ಯೇಸು ತನ್ನನ್ನು ಕುರಿತು "ಮನುಷ್ಯ ಕುಮಾರನು ಸೇವೆ ಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ. ಸೇವೆ ಮಾಡುವದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವದಕ್ಕಾಗಿ ತನ್ನ ಪ್ರಾಣವನ್ನು ಈಡುಕೊಡುವದಕ್ಕಾಗಿಯೂ ಬಂದನು" ಎಂದು ಹೇಳಿದನು (ಮತ್ತಾ 20:28).

## 5. ಎದುರುನೋಡಲ್ಪಟ್ಟಂತಹ ಬಾಲಕ

ಲೋಕದಲ್ಲಿ ಹುಟ್ಟಿದ ಯಾವ ಬಾಲಕನೂ ಸಹ ಯೇಸುವಿನಂತೆ ಎದುರುನೋಡಲ್ಪಟ್ಟ ಬಾಲಕರಲ್ಲ. ಯೇಸು ಲೋಕ ಉಂಟಾಗುವದಕ್ಕಿಂತ ಮುಂಚಿನಿಂದಲೂ ಸೂಚಿತನಾದ ಬಾಲಕ. ಯೇಸು ಕ್ರಿಸ್ತನು ಹುಟ್ಟುವ 4000 ವರ್ಷಗಳ ಮೊದಲೇ ಆದಾಮ ಹವ್ವಳಿಗೆ ವಾಗ್ದಾನವಾಗಿತ್ತು. ಅಂದು ಯಾಕೋಬನು ಆಕಾಶಕ್ಕೂ ಭೂಮಿಗೂ ನಡುವೆ ಒಂದು ನಿಚ್ಚಣಿಕೆ ಇರುವುದನ್ನು ಸ್ವಪ್ನದಲ್ಲಿ ಕಂಡಿದ್ದನು. ಕರ್ತನು ಯಾವಾಗಲೂ ಈ ಏಣಿಯ ಮೂಲಕ ಕೆಳಗಿಳಿದು ಬರುವನೆಂದು ಯಾಕೋಬನು ನಂಬಿದ್ದನು. ಸಮಾಧಾನ ಕರ್ತನು ಬರುತ್ತಾನೆಂದು ನಂಬಿ ತನ್ನ ಮಗನಾದ ಯೆಹೂದನನ್ನು ಆಶೀರ್ವದಿಸಿದ್ದನು. ಈ ಬಾಲಕನೇ ಬೆತ್ಲೆಹೇಮಿನಲ್ಲಿ ಹುಟ್ಟಿದ ಬಾಲಕ.

ದೇವಮಗುವೇ, ಕ್ರಿಸ್ತನು ನಿನಗಾಗಿಯೇ ಅರಸನಾಗಿ ಹುಟ್ಟಿದ್ದಾನೆ ಎಂಬುದನ್ನು ನೀನು ತಿಳಿದುಕೊಂಡಿದ್ದರೆ ನನ್ನ ದೇವರಾಗಿ ನನ್ನ ಹೃದಯವನ್ನೆಲ್ಲಾ ನೀನೇ ಆವರಿಸಿಕೋ ನನ್ನೊಳಗೆ ನೀನೇ ಎಂದೆಂದಿಗೂ ವಾಸಮಾಡು ಎಂದು ಪ್ರೀತಿಯಿಂದ ಕರೆಯುವಿಯಾ? ನಿನ್ನ ಪ್ರೀತಿಗಾಗಿಯೇ ಆತನು ತವಕಿಸುತ್ತಿದ್ದಾನೆ. ಆತನನ್ನು ಪ್ರೀತಿಸುವೆಯಾ? ಅಂಗೀಕರಿಸಿಕೊಳ್ಳುವೆಯಾ?.

**ವಾಗ್ದಾನ ವಚನ : ಯೆಶಾಯ 9:6**

**ಒಂದು ಮಗು ನಮಗಾಗಿ ಹುಟ್ಟಿದೆಯಷ್ಟೆ, ವರದ ಮಗನು ನಮಗೆ ದೊರೆತನು. ಆಡಳಿತವು ಅವನ ಬಾಹುವಿನ ಮೇಲಿರುವದು; ಅದ್ಭುತಸ್ವರೂಪನು, ಆಲೋಚನಾ ಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂಬವು ಅವನ ಹೆಸರು.**

## ಒಬ್ಬ ಯೌವನಸ್ಥನಿಗಾಗಿ 20,000 ಪ್ರಾರ್ಥನೆ!

ಡಿ.ಎಲ್. ಮೂಡಿ ಎಂಬ ದೇವಸೇವಕರು ಒಂದು ಸಾರಿ ಲಂಡನ್ ನಗರದಲ್ಲಿ ಒಂದು ಕೂಟವನ್ನು ನಡೆಸಲು ಹೋಗಿದ್ದರು. ಆ ಕೂಟದಲ್ಲಿ 20,000 ಜನರು ಸೇರಿದ್ದರು. ಆ ಕೂಟದಲ್ಲಿ ಭಾಗವಹಿಸಿದ್ದ ಬಹಳ ವೇದನೆಯಿಂದ ತುಂಬಿದ್ದ ಒಬ್ಬ ತಂದೆ ತಾಯಿಗಳು ಮನೆ ಬಿಟ್ಟು ಓಡಿಹೋದ ತಮ್ಮ ಮಗನಿಗಾಗಿ ಪ್ರಾರ್ಥಿಸುವಂತೆ ಕೇಳಿಕೊಂಡರು. ಅಲ್ಲಿ ಕೂಡಿ ಬಂದಿದ್ದ 20,000 ಜನರೂ ಸೇರಿ ಆತ್ಮಭಾರದಿಂದ ಆ ಹುಡುಗನಿಗಾಗಿ ಪ್ರಾರ್ಥಿಸಿದರು. ಓಡಿಹೋದ ಆ ಯೌವನಸ್ಥನು ಆಸ್ಟ್ರೇಲಿಯಾದ ಅರಣ್ಯ ಮಾರ್ಗದಲ್ಲಿ ಒಂದು ಕುದುರೆ ಗಾಡಿಯಲ್ಲಿ ಕುಳಿತು ಹೋಗುತ್ತಿದ್ದನು. ಅವನಿಗಾಗಿ ಲಂಡನ್ನಿನಲ್ಲಿ ಪ್ರಾರ್ಥಿಸುತ್ತಿದ್ದ ಸಮಯ ಆಸ್ಟ್ರೇಲಿಯಾದಲ್ಲಿದ್ದ ಅವನಿಗೆ ಮನೆಯ ನೆನಪು ಬಂದಿತು. ತಾನು ಪಶ್ಚಾತ್ತಾಪ ಪಟ್ಟಿರುವುದಾಗಿಯೂ ನನ್ನನ್ನು ಕ್ಷಮಿಸಿ ಮನೆಗೆ ಸೇರಿಸಿಕೊಳ್ಳುವಂತೆಯೂ ಕೇಳಿಕೊಂಡಿದ್ದನು. ಮನೆಗೆ ಬರುವಂತೆ ತಂದೆ ತಾಯಿಗಳು ಸುದ್ದಿಕೊಟ್ಟರು. ದೇವರು ದೂರ ಹೋಗಿದ್ದ ಆ ಮಗನು ತಿರುಗಿ ಮನೆಗೆ ಹಿಂತಿರುಗುವಂತೆ ಮಾಡಿದ್ದನು.

ಒಂದೊಂದು ಸಭೆಯ ಆರಾಧನೆಯಲ್ಲಿಯೂ ಪಾಪದಲ್ಲಿ ಜೀವಿಸುತ್ತಿರುವ ಒಬ್ಬರಿಗಾಗಿಯಾದರೂ ಎಲ್ಲರೂ ನೆನಪು ಮಾಡಿಕೊಂಡು ಪ್ರಾರ್ಥಿಸಿದರೆ ಎಷ್ಟು ಒಳ್ಳೆಯದು ಅಲ್ಲವೇ!.

## ದೇವರ ಸ್ವರವನ್ನು ಕೇಳುವ ಕೆಲವು ಆಲೋಚನೆಗಳು

- ✍ ನಿಮ್ಮ ಒಪ್ಪಿಸಿ ಕೊಡುವಿಕೆಯನ್ನು ಪ್ರತಿದಿನವೂ ಕಾಯ್ದುಕೊಂಡು ಪವಿತ್ರಾತ್ಮನಿಂದ ತುಂಬಿದವರಾಗಿರಿ.
- ✍ ನೀವೇ ಮಾತಾಡುತ್ತಿದ್ದರೆ, ಆತನೊಂದಿಗೆ ಸಂಭಾಷಿಸಲಾಗುವದಿಲ್ಲ ಆತನ ಸ್ವರವನ್ನು ಕೇಳಲು ಆತನನ್ನು ಬೇಡಿಕೊಳ್ಳಿರಿ.
- ✍ ಪ್ರತಿದಿನವನ್ನು ಪ್ರಾರಂಭಿಸುವಾಗ ಪ್ರತಿಯೊಂದು ಕಾರ್ಯದಲ್ಲೂ ಕರ್ತನ ಸ್ವರವನ್ನು ಕೇಳುವಂತೆ ಬೇಡಿಕೊಳ್ಳಿರಿ.
- ✍ ಸತ್ಯವೇದವನ್ನು ಓದುವಾಗ, ಆತನು ನಿಮ್ಮ ಅಂತರ್ಯದಲ್ಲಿ ಮಾತಾಡುವಂತೆ ಅಪೇಕ್ಷಿಸಿರಿ.
- ✍ ಪ್ರತಿಯೊಂದು ಚಿಕ್ಕಪುಟ್ಟ ಕಾರ್ಯಗಳಲ್ಲೂ ಕರ್ತನು ನಿಮ್ಮನ್ನು ನಡಿಸುವಂತೆ ಕೇಳಿಕೊಳ್ಳಿರಿ.



## ಕರ್ತನನ್ನು ಹೇಗೆ ಸ್ತುತಿಸುವದು?

ಇತರರಿಗೆ ತಿಳಿಯದಂತೆ ನಿಮ್ಮ ಆಂತರ್ಯದಲ್ಲಿ ನೀವು ಏಕಾಂತವಾಗಿ ಕರ್ತನನ್ನು ಸ್ತುತಿಸಬಹುದು. ನಿಮ್ಮ ಉದ್ಯೋಗ ಸ್ಥಳದಲ್ಲಿ ಮೌನವಾದ ಸ್ತುತಿಯೊಂದಿಗೆ ನಿಮ್ಮ ಕೆಲಸದಲ್ಲಿ ತೊಡಗ ಬಹುದು. ಒಂದು ಮನೆಯೊಳಗೆ ಸುವಾರ್ತೆಯನ್ನು ಸಾರುವದಕ್ಕಾಗಿ ಪ್ರವೇಶಿಸುವಿರಾದರೆ ಹೃದಯದಲ್ಲಿ ಸ್ತುತಿಸುತ್ತಲೇ ಹೋಗಿರಿ. ನಿಮ್ಮ ಮುಂಭಾಗದಲ್ಲಿ ಒಬ್ಬ ವ್ಯಕ್ತಿಗೆ ತಕ್ಕ ಬುದ್ಧಿವಾದಗಳನ್ನು ಹೇಳುತ್ತಿರುವದಾದರೆ, ನೀವು ಮೌನವಾಗಿ ಕರ್ತನನ್ನು ಸ್ತುತಿಸಿರಿ. ಒಬ್ಬ ವ್ಯಾಧಿಯುಳ್ಳವನ ಸಮೀಪದಲ್ಲಿ ನೀವು ಇರುವಾಗ ದೇವಮಹಿಮೆಯನ್ನು ಗ್ರಹಿಸುವವರೆಗೆ ಮೌನವಾಗಿ ಹೃದಯದಲ್ಲಿ ಸ್ತುತಿಸುತ್ತಲೇ ಇರಿ.

ಕರ್ತನನ್ನು ಸ್ತುತಿಸಿ ನಿಮ್ಮೊಳಗೆ ನೀವು ಆನಂದಿಸುತ್ತಿದ್ದಾಗ್ಯೂ ಜನರ ಮುಂಭಾಗದಲ್ಲಿ ಕರ್ತನನ್ನು ಸ್ತುತಿಸಬೇಕು (ಕೀರ್ತ 35:18). ಕೀರ್ತನೆಯೊಂದಿಗೆ, ಮಹಾಸ್ವರವೆತ್ತಿ ಸ್ತುತಿಸಬೇಕು. "ನಾನು ಯೆಹೋವನನ್ನು ಎಡೆಬಿಡದೆ ಕೊಂಡಾಡುವೆನು; ಆತನ ಸ್ತೋತ್ರವು ಯಾವಾಗಲೂ ನನ್ನ ಬಾಯಲ್ಲಿ ಇರುವದು" (ಕೀರ್ತ 34:1). "ಆತನ ಮೂಲಕವಾಗಿಯೇ ದೇವರಿಗೆ ಸ್ತೋತ್ರಯಜ್ಞವನ್ನು ಎಡೆಬಿಡದೆ ಸಮರ್ಪಿಸೋಣ. ಆತನು ಕರ್ತನೆಂದು ಬಾಯಿಂದ ಪ್ರತಿಜ್ಞೆ ಮಾಡುವದೇ ನಾವು ಅರ್ಪಿಸುವ ಯಜ್ಞವಾಗಿದೆ" (ಇಬ್ರಿ 13:15).

## ಪವಿತ್ರಾತ್ಮನು ನಮ್ಮ ಪ್ರಾರ್ಥನೆಯಲ್ಲಿ ನೆನಪಿಸುವ ಅಂಶಗಳು

1. ಪ್ರಾರ್ಥನೆಯಲ್ಲಿ ನಿಮಗಿರುವ ಆಸಕ್ತಿಯನ್ನು ಪವಿತ್ರಾತ್ಮನು ಹೆಚ್ಚಿಸುವನು.
2. ನೀವು ಪ್ರಾರ್ಥಿಸುವಾಗ ಪವಿತ್ರಾತ್ಮನು ವಾಕ್ಯಗಳನ್ನು ನೆನಪಿಗೆ ತರುವನು.
3. ಆತ್ಮೀಕ ಉದ್ದೇಶಗಳನ್ನು ಪವಿತ್ರಾತ್ಮನು ನಿಮ್ಮ ಗಮನಕ್ಕೆ ತರುವನು.
4. ಇತರರ ಅಗತ್ಯತೆಗಳನ್ನು ಪವಿತ್ರಾತ್ಮನು ನಿಮ್ಮ ಗಮನಕ್ಕೆ ತರುವನು.
5. ಪ್ರಾರ್ಥನೆಯ ಭಾರವನ್ನು ಪವಿತ್ರಾತ್ಮನು ನಿಮಗೆ ಕೊಡುವನು.
6. ಕಷ್ಟಕರವಾದ ಪರಿಸ್ಥಿತಿಯಲ್ಲಿ ಪ್ರಾರ್ಥಿಸುವಂತೆ ಪವಿತ್ರಾತ್ಮನು ಪ್ರೇರಿಸುವನು.
7. ನಿಮ್ಮ ಪ್ರಾರ್ಥನೆಯಲ್ಲಿ ಆಸಕ್ತಿಯನ್ನು ಮಹಿಮಾ ಬಲವನ್ನು ನಂಬಿಕೆಯನ್ನು ಪವಿತ್ರಾತ್ಮನು ಹೆಚ್ಚಿಸುವನು.
8. ಪ್ರಪಂಚದಾದ್ಯಂತ ನೀವು ಪ್ರಾರ್ಥನಾ ಸೇವೆಯನ್ನು ಮಾಡಬೇಕೆಂದು ಪವಿತ್ರಾತ್ಮನು ಅಪೇಕ್ಷಿಸುತ್ತಾನೆ.

## ಪ್ರಾರ್ಥನೆಯ ಮೂಲಕ ದೇವರ ಸಿಂಹಾಸನವನ್ನು ಮುಟ್ಟುವದು

ಪ್ರಾರ್ಥನೆಗೆ ಒಂದು ಉದ್ದವಾದ ಹಸ್ತವುಂಟು ಅದು ಪರಲೋಕವನ್ನು ಮುಟ್ಟಬಲ್ಲದು. "ಪರಲೋಕದಲ್ಲಿರುವ ದೇವರ ಕಡೆಗೆ ನಮ್ಮ ಕೈಗಳೊಡನೆ ನಮ್ಮ ಮನಸ್ಸನ್ನೂ ಎತ್ತಿಕೊಳ್ಳುವ" (ಪ್ರಲಾ 3:41) ಎಂದು ಸತ್ಯವೇದವು ಹೇಳುತ್ತದೆ.

ಇದಕ್ಕೆ ಮೊದಲ ಉದಾಹರಣೆಯಾಗಿ ಹಳೇ ಒಡಂಬಡಿಕೆಯಲ್ಲಿನ ಒಂದು ಸಂಭವವನ್ನು ನೋಡುತ್ತೇವೆ. ಅಮಾಲೇಕ್ಯರೊಡನೆ ಯುದ್ಧಕ್ಕೆ ಹೋಗುವಂತೆ ಯೆಹೋಶುವನಿಗೆ ಹೇಳಿದ ಮೋಶೆ "ತನ್ನ ಕೈಗಳನ್ನು ಮೇಲಕ್ಕೆ ಎತ್ತಿರುವಾಗ ಇಸ್ರಾಯೇಲ್ಯರು ಬಲವಾಗುವರು ಇಳಿಸುವಾಗ ಅಮಾಲೇಕ್ಯರು ಬಲವಾಗುವರು" ಎಂದು (ವಿಮೋ 12:11–14)ರಲ್ಲಿ ಓದುತ್ತೇವೆ.

ನಮ್ಮ ಕೈಗಳು ಎತ್ತಲ್ಪಡುವಾಗ ಅವು ದೇವಾಧಿದೇವನ ಸಿಂಹಾಸನವನ್ನು ಮುಟ್ಟುವದು. ಕೆಲವು ಸಮಯಗಳಲ್ಲಿ ನಮ್ಮ ಪ್ರಾರ್ಥನೆಯು ನಮ್ಮ ತಲೆಗೆ ಮೇಲೆ ಹೋಗಲಾರದೂ. ಆದರೆ ಯೇಸುವಿನ ಹೆಸರಿನಲ್ಲಿ, ದೇವಚಿತ್ತದಂತೆ, ಆತ್ಮನಲ್ಲಿ ಪ್ರಾರ್ಥಿಸುವಿರಾದರೆ. ಅದು ಖಂಡಿತವಾಗಿಯೂ ಪರಲೋಕದಲ್ಲಿ ದೇವರ ಸಿಂಹಾಸನವನ್ನು ಮುಟ್ಟುವದು.

## ನಂಬಿಗಸ್ತ ಸಾಕ್ಷಿಗಳು

- **ಮೋಶೆ** : ನನ್ನ ಸೇವಕನಾದ ಮೋಶೆ ಅಂಥವನಲ್ಲ ಅವನು ನನ್ನ ಮನೆಯಲ್ಲೆಲ್ಲಾ ನಂಬಿಗಸ್ತನು (ಅರಣ್ಯ 12:7).
- **ದಾನಿಯೇಲ** : ಅವನು ನಂಬಿಗಸ್ತನೇ ಆಗಿದ್ದನು. ಅವನಲ್ಲಿ ಆಲಸ್ಯವಾಗಲಿ ಅಕ್ರಮವಾಗಲಿ ಸಿಕ್ಕಲಿಲ್ಲ (ದಾನಿಯೇಲ 6:4).
- **ಪೌಲನು** : ಆತನು ನಂಬಿಗಸ್ತನೆಂದು ಎಣಿಸಿ ತನ್ನ ಸೇವೆಗೆ ನೇಮಿಸಿ ಕೊಂಡದ್ದಕ್ಕಾಗಿ ನಾನು ಆತನಿಗೆ ಸ್ತೋತ್ರ ಸಲ್ಲಿಸುತ್ತೇನೆ (1ತಿಮೊ 1:13)
- **ತಿಮೊಥೆಯನು** : ನನ್ನ ಮಗನಾದ ತಿಮೊಥೆಯನನ್ನು ನಿಮ್ಮ ಬಳಿಗೆ ಕಳುಹಿಸಿ ಕೊಟ್ಟಿದ್ದೇನೆ ಅವನು ನನಗೆ ಪ್ರಿಯನೂ ನಂಬಿಗಸ್ತನೂ ಆಗಿದ್ದಾನೆ (1ಕೊರಿ 4:17).
- **ತುಖಿಕನು** : ಕರ್ತನಲ್ಲಿ ನಂಬಿಗಸ್ತನಾದ ಸೇವಕನೂ ಆಗಿರುವ ತುಖಿಕನು ನಿಮಗೆ ಎಲ್ಲವನ್ನೂ ತಿಳಿಸುವನು (ಎಫೆಸ 6:21).
- **ಅಂತಿಪನು**: ನನಗೆ ನಂಬಿಗಸ್ತನೂ ಸಾಕ್ಷಿಯೂ ಆದ ಅಂತಿಪನ ಕೊಲ್ಲಲ್ಪಟ ದಿನ ಗಳಲ್ಲಿ ಯಾದರೂ... ನಂಬಿಕೆಯನ್ನು ನೀನು ಮರೆಮಾಡಲಿಲ್ಲ (ಪ್ರಕ 2:13)
- **ಯೇಸುಸ್ವಾಮಿ** : ಯೇಸುವೂ ತನ್ನನ್ನು ನೇಮಿಸಿದಾತನಿಗೆ ನಂಬಿಗಸ್ತನಾಗಿದ್ದಾನೆ (ಇಬ್ರಿ 3:2).




## ಮರಿಯಳ ಗರ್ಭವೆಂಬ ಛತ್ರ

ಹತ್ತು ತಿಂಗಳು ಮರಿಯಳ ಗರ್ಭದಲ್ಲಿ ಯೇಸು ಕ್ರಿಸ್ತನು ವಾಸವಾಗಿದ್ದನು. "ಒಂದು ದೇಹವನ್ನು ನನಗೆ ಸಿದ್ಧ ಮಾಡಿಕೊಟ್ಟೆ" (ಇಬ್ರಿಯ 10:5). ಎಂದು ಯೆರೆಮಿಾಯನು ಹೇಳಿದಂತೆ ಮರಿಯಳ ಗರ್ಭದಲ್ಲಿ ಯೇಸುಕ್ರಿಸ್ತನು ತಂಗಿದ್ದನು. ಯೇಸುಕ್ರಿಸ್ತನನ್ನು ನೋಡಿದ ಒಬ್ಬ ಸ್ತ್ರೀಯು ಹೀಗೆ ಕೂಗಿಕೊಂಡಳು. "ನಿನ್ನನ್ನು ಹೊತ್ತ ಗರ್ಭವು ಭಾಗ್ಯಕರವು" ನಿಜವೇ ಆದರೆ ಇದರಿಂದ ಮರಿಯಳು ಅನುಭವಿಸಿದ ನಿಂದೆ ಅವಮಾನಗಳೆಷ್ಟು? ಪುರುಷನನ್ನರಿಯದೆ ಗರ್ಭವತಿ ಯಾದರೆ ಅವಳಿಗಾಗುವ ಅವಮಾನವೆಷ್ಟು? ಇಸ್ರಾಯೇಲ್ಯರಲ್ಲಿ ಇಂಥ ಕಾರ್ಯವನ್ನು ಮಾಡಿದವರಿಗೆ ಕಲ್ಲೆಸೆದು ಕೊಲ್ಲುವ ಶಿಕ್ಷೆಯನ್ನೇ ವಿಧಿಸುತ್ತಿದ್ದರು. ಮದುವೆಯಾಗಲಿರುವ ಗಂಡು ಅವಳ ಬಗ್ಗೆ ಏನೆಂದು ಯೋಚಿಸುವನು? ಅಂದು ಯೆಹೂದನು ತನ್ನ ಸೊಸೆಯು ಬಸುರಾಗಿದ್ದಾಳೆಂದು ತಿಳಿದೊಡನೆ ಅವಳನ್ನು ಹೊರಗೆ ತನ್ನಿರಿ ಸುಡಬೇಕಾಗಿದೆ ಎಂದು ಕೂಗಾಡಿದನಲ್ಲವೇ? (ಆದಿ 38:24) ಆದರೆ ಮರಿಯಳು ತನ್ನ ಗರ್ಭದಲ್ಲಿ ಯೇಸುಕ್ರಿಸ್ತನಿಗೆ ಸ್ಥಳ ಕೊಟ್ಟಳು.

ದೇವಮಗುವೇ ನೀನೂ ಕೂಡ ಒಂದು ವೇಳೆ ಯೇಸುಕ್ರಿಸ್ತನಿಗೆ ಸ್ಥಳ ಕೊಟ್ಟರೆ ನಿನ್ನ ಕುಟುಂಬದಲ್ಲಿ ಹೋರಾಟಗಳು, ನಿಂದೆ ಅವಮಾನಗಳು ಹಲವಾರು ರೀತಿಯ ಹಿಂಸೆ ಸಂಕಟಗಳು, ಸಮಸ್ಯೆಗಳು ಬರಬಹುದು. ಆದಾಗ್ಯೂ ನೀನು ಕಳವಳಪಡಬೇಡ. ನೀನು ಧನ್ಯನು, ಮಾತ್ರವಲ್ಲ ಕ್ರಿಸ್ತನು ಅನೇಕರಲ್ಲಿ ಹುಟ್ಟುವ ಹಾಗೆ ನಿನ್ನ ಮೂಲಕ ಕಾರ್ಯಮಾಡುವನು. ಪೌಲನಂತೆ ಪ್ರಸವ ವೇದನೆಯ ಪ್ರಾರ್ಥನೆ ಮಾಡಿ ಸೇವೆ ಮಾಡಿರಿ.

## ಕಲಿತುಕೊಳ್ಳುವ ಅಂಶಗಳು

- **ಭಯಭಕ್ತಿಯನ್ನು** : ನನಗೆ ಭಯಭಕ್ತಿಯಿಂದಿರುವದಕ್ಕೆ ಕಲಿತುಕೊಂಡು ತಮ್ಮ ಮಕ್ಕಳಿಗೂ ಕಲಿಸಿಕೊಡುವಂತೆ .... ವಿಷಯಗಳೇ (ಧರ್ಮೋ 4:10).
- **ದಿನಗಳ ಎಣಿಕೆ** : ನಮ್ಮ ದಿನಗಳು ಕೊಂಚವೇ ಎಂದು ಎಣಿಸಿಕೊಳ್ಳುವ ಹಾಗೆ ನಮಗೆ ಕಲಿಸು (ಕೀರ್ತ 90:12).
- **ಕರುಣೆಯ ಕುರಿತು** : ನನಗೆ ಯಜ್ಞವು ಬೇಡ, ಕರುಣೆಯೇ ಬೇಕು ಎಂಬ ಮಾತಿನ ಅರ್ಥವನ್ನು ಕಲಿತುಕೊಳ್ಳಿರಿ (ಮತ್ತಾ 9:13).
- **ಮಿಾರಿ ಹೋಗದಿರುವದು** : ಶಾಸ್ತ್ರದಲ್ಲಿ ಬರೆದಿರುವದನ್ನು ಮಿಾರಿ ಹೋಗ ಬಾರದೆಂಬದನ್ನೂ ನಿಮ್ಮಲ್ಲಿ ಯಾರೂ .... ಕಲಿತುಕೊಳ್ಳಬೇಕು (1ಕೊರಿ 4:6).
- **ಪರೋಪಕಾರವನ್ನು** : ನಮ್ಮ ಜನರು ಸತ್ಕ್ರಿಯಾಹೀನರಾಗದಂತೆ ಅವರೂ ಸಹೋದರರಿಗೆ .... ಪರೋಪಕಾರವನ್ನು ಕಲಿತುಕೊಳ್ಳಲಿ (ತೀತ 3:14).



# ನಮ್ಮ ದೇಶದ ಸುದ್ದಿಗಳು
# (INDIA NEWS)

1. **ಕುಟುಂಬ ಒಡೆತನದ ಉದ್ದಿಮೆ ಮೂರನೇ ಸ್ಥಾನದಲ್ಲಿ ಭಾರತ :** ದೇಶಿ ಷೇರುಪೇಟೆಯಲ್ಲಿ ವಹಿವಾಟು ನಡೆಸುವ ಉದ್ದಿಮೆಗಳ ಪೈಕಿ 108 ಕಾರ್ಪೊರೇಟ್‌ಗಳು ಕುಟುಂಬದ ಒಡೆತನದಲ್ಲಿ ಇವೆ. ಈ ವಿಷಯದಲ್ಲಿ ಭಾರತ ವಿಶ್ವದಲ್ಲಿ ಮೂರನೇ ಸ್ಥಾನದಲ್ಲಿ ಇದೆ. ಇಂತಹ 167 ಉದ್ದಿಮೆಗಳನ್ನು ಹೊಂದಿರುವ ಚೀನಾ ಮೊದಲ ಸ್ಥಾನದಲ್ಲಿ ಮತ್ತು ಅಮೆರಿಕ (121) ಎರಡನೆಯ ಸ್ಥಾನದಲ್ಲಿ ಇವೆ ಎಂದು ತಿಳಿದು ಬಂದಿದೆ.

2. **ಸಾಹಿತ್ಯ ಸಮ್ಮೇಳನಕ್ಕೆ ರೂ.2 ಕೋಟಿ ಹೆಚ್ಚುವರಿ ಅನುದಾನ :** 83ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ರಾಜ್ಯ ಸರ್ಕಾರ ರೂ.2 ಕೋಟಿ ಹೆಚ್ಚುವರಿ ಅನುದಾನ ನೀಡಿದೆ. ಇದರಿಂದ ಸಾಹಿತ್ಯ ಜಾತ್ರೆಗೆ ಒಟ್ಟು ರೂ.8 ಕೋಟಿ ಲಭ್ಯವಾಗಿದೆ. ರೂ.10 ಕೋಟಿ ಅನುದಾನಕ್ಕೆ ಕೋರಿಕೆ ಸಲ್ಲಿಸಲಾಗಿತ್ತು. ಇದರಲ್ಲಿ ರೂ.6 ಕೋಟಿಯನ್ನು ಈಗಾಗಲೆ ಬಿಡುಗಡೆ ಮಾಡಲಾಗಿದೆ ಎಂದು ತಿಳಿದು ಬಂದಿದೆ.

3. **ಬಹುಚಕ್ರ ವಾಹನ ಚಾಲನೆ ಮೈಸೂರು ಬಾಲಕಿ ದಾಖಲೆ :** 7 ವರ್ಷದ ಬಾಲಕಿಯೊಬ್ಬಳು ಬಹುಚಕ್ರ ವಾಹನಗಳನ್ನು ಚಾಲನೆ ಮಾಡುವ ಮೂಲಕ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ದಾಖಲೆ ನಿರ್ಮಿಸಿದಳು. ಸಂತ ಫಿಲೊಮಿನಾ ಶಾಲೆಯಲ್ಲಿ 2ನೇ ತರಗತಿ ಓದುತ್ತಿರುವ ರಿಫಾ ತಸ್ಕೀನ್ ಈ ದಾಖಲೆ ನಿರ್ಮಿಸಿದ್ದು. 10 ಚಕ್ರದ ಲಾರಿಯ ಸ್ಟೇರಿಂಗ್ ಹಿಡಿದು ಕುಳಿತ ಅವಳು, ದೂಳೆಬ್ಬಿಸುತ್ತ ವೇಗವಾಗಿ ಈದ್ಗಾ ಮೈದಾನದಲ್ಲಿ ಹಲವು ಸುತ್ತುಗಳನ್ನು ಹಾಕುವ ಮೂಲಕ ಅಚ್ಚರಿ ಉಂಟು ಮಾಡಿದಳು ಎಂದು ತಿಳಿದು ಬಂದಿದೆ.

4. **ಮೇಲ್ದರ್ಜೆಗೆ 6,433 ಕಿ.ಮೀ ಹೆದ್ದಾರಿ :** 6,433 ಕಿ.ಮೀ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಉನ್ನತೀಕರಿಸಲು ಕೇಂದ್ರ ಸರ್ಕಾರ ತಾತ್ವಿಕ ಒಪ್ಪಿಗೆ ನೀಡಿದೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ. ಭಾರತೀಯ ರಸ್ತೆ ಕಾಂಗ್ರೆಸ್‌ನ 78ನೇ ವಾರ್ಷಿಕ ಅಧಿವೇಶನ ಉದ್ಘಾಟಿಸಿ ಮಾತನಾಡಿದರು. ರಾಜ್ಯದಲ್ಲಿ ಈಗಾಗಲೇ 1.854 ಕಿ.ಮೀ ಹೊಸ ರಾಷ್ಟ್ರೀಯ ಹೆದ್ದಾರಿ ನಿರ್ಮಿಸಲಾಗಿದೆ. ಅದರ ಜತೆಗೆ 6,433 ರಾಜ್ಯ ಹೆದ್ದಾರಿ ಉನ್ನತೀಕರಣಗೊಂಡರೆ ರಾಜ್ಯ 8,287 ಕಿ.ಮೀ ಹೊಸ ರಾಷ್ಟ್ರೀಯ ಹೆದ್ದಾರಿ ಜಾಲ ಹೊಂದಲಿದೆ ಎಂದು ಮಾತನಾಡಿದರು.

5. **ಗಾಯಾಳುಗಳ ನೆರವಿಗೆ ಬಸ್ ಮಿತ್ರ :** ಅಪಘಾತ ಸಂಭವಿಸಿದಾಗ ತಕ್ಷಣವೇ ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಬೇಕೆಂಬ ಮಾನವೀಯತೆ ಕಡಿಮೆಯಾಗುತ್ತಿರುವ ಹಿನ್ನೆಲೆ ಕೂಡಲೇ ಸ್ಥಳಕ್ಕೆ ಧಾವಿಸಿ ಪ್ರಥಮ ಚಿಕಿತ್ಸೆ ನೀಡಲು 'ಬಸ್ ಮಿತ್ರ' ಎಂಬ ನೂತನ ಯೋಜನೆಗೆ ಕೆಎಸ್‌ಆರ್‌ಟಿಸಿ ಚಾಲನೆ ನೀಡಿದೆ. ಕೆಎಸ್‌ಆರ್‌ಟಿಸಿ ಕೇಂದ್ರಿಯ ವಿಭಾಗದ 4ನೇ ಘಟಕದಲ್ಲಿ ಸಾರಿಗೆ ಸಚಿವರು 45 ಬಸ್ ಮಿತ್ರ ಜೀಪ್‌ಗಳಿಗೆ ಹಸಿರುನಿಶಾನೆ ತೋರಿದರು ಎಂದು ತಿಳಿದು ಬಂದಿದೆ.





# ಹೊರ ದೇಶದ ಸುದ್ದಿಗಳು
# (FOREIGN NEWS)

1. **ಮುಂಗಾರು ಮಾಹಿತಿಗೆ ಹೊಸ ತಂತ್ರ :** ಭಾರತದಲ್ಲಿನ ಮುಂಗಾರು ಮುನ್ಸೂಚನೆಯನ್ನು ನಿಖರವಾಗಿ ತಿಳಿದುಕೊಳ್ಳಲು ವಿಜ್ಞಾನಿಗಳು ಹೊಸ ವಿಧಾನಗಳನ್ನು ಕಂಡುಕೊಂಡಿದ್ದಾರೆ. 105 ವರ್ಷಗಳ ಮಳೆ ಪ್ರಮಾಣದ ವರದಿಗಳನ್ನು ಬಳಸಿಕೊಂಡು ಭಾರತದಲ್ಲಿನ ಮುಂಗಾರು ಕುರಿತು ಅಮೆರಿಕದ ಫ್ಲಾರಿಡಾ ವಿಶ್ವವಿದ್ಯಾಲಯದ ಸಂಶೋಧಕರು ಈ ವಿಧಾನಗಳನ್ನು ರೂಪಿಸಿದ್ದಾರೆ.

2. **ಭೂಕಂಪ ಮುನ್ಸೂಚನೆಗೆ ಕೃತಕ ಬುದ್ಧಿಮತ್ತೆ :** ಸಂಭವನೀಯ ಭೂಕಂಪದ ಮುನ್ಸೂಚನೆ ನೀಡುವ ಸಾಮರ್ಥ್ಯ ಹೊಂದಿರುವ ಕೃತಕ ಬುದ್ಧಿಮತ್ತೆ ವ್ಯವಸ್ಥೆಯನ್ನು ವಿಜ್ಞಾನಿಗಳು ಅಭಿವೃದ್ಧಿ ಪಡಿಸಿದ್ದಾರೆ. ಪ್ರಾಕೃತಿಕ ವಿಪತ್ತುಗಳನ್ನು ಎದುರಿಸುವಲ್ಲಿ ಸಿದ್ಧರಾಗಲು ಹಾಗೂ ಸಾಕಷ್ಟು ಜೀವಗಳನ್ನು ಉಳಿಸಲು ಈ ಕೃತಕ ಬುದ್ಧಿಮತ್ತೆ ವ್ಯವಸ್ಥೆ ನೆರವಾಗುವ ಸಾಧ್ಯತೆ ಇದೆ ಎಂದು ತಿಳಿಸಲಾಗಿದೆ.

3. **ಭಾರತಕ್ಕೆ ಎಫ್–16 ಯುದ್ಧ ವಿಮಾನ :** ಭಾರತಕ್ಕೆ ಎಫ್–16 ಹಾಗೂ ಎಫ್–18 ಯುದ್ಧ ವಿಮಾನಗಳನ್ನು ಮಾರಾಟ ಮಾಡಲು ಹಾಗೂ ವರ್ಗೀಕೃತ ದಾಖಲೆಗಳನ್ನು ಹಂಚಿಕೊಳ್ಳಲು ಅಗತ್ಯವಿರುವ ರಕ್ಷಣಾ ಒಪ್ಪಂದಗಳನ್ನು ಪೂರ್ಣಗೊಳಿಸಲು ಅಮೆರಿಕ ಆಸಕ್ತಿ ತೋರಿಸಿದೆ. ದಕ್ಷಿಣ ಮತ್ತು ಮಧ್ಯಪ್ರಾಚ್ಯ ವ್ಯವಹಾರಗಳ ಸಹಾಯಕ ಕಾರ್ಯದರ್ಶಿ ಈ ಒಪ್ಪಂದಗಳ ಪೂರೈಕೆಯಿಂದ ಉಭಯ ದೇಶಗಳ ನಡುವೆ ರಕ್ಷಣಾ ತಂತ್ರಜ್ಞಾನ ಸಹಭಾಗಿತ್ವ ಸೃಷ್ಟಿಯಾಗುತ್ತದೆ ಎಂದಿದ್ದಾರೆ.

4. **ಕ್ಯಾನ್ಸರ್ ಪತ್ತೆಗೆ ಉಪಕರಣ :** ಮನೆಯಲ್ಲಿಯೇ ಕ್ಯಾನ್ಸರ್ ಪತ್ತೆ ಮಾಡಿಕೊಳ್ಳಲು ಸಾಧ್ಯವಾಗಬಹುದಾದ ರೀತಿಯ ಸ್ಮಾರ್ಟ್‌ಫೋನ್ ಆಧರಿತ ವಿನೂತನ ಶಬ್ದಾತೀತ ಉಪಕರಣವೊಂದನ್ನು ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ. ಅಮೆರಿಕದ ನವೋದ್ಯಮ ಬಟರ್‌ಫ್ಲೈ ನೆಟ್‌ವರ್ಕ್‌ನ ಸಂಶೋಧಕರು 'ಬಟರ್‌ಫ್ಲೈ ಐಕ್ಯು' ಎನ್ನುವ ಈ ಉಪಕರಣ ಅಭಿವೃದ್ಧಿ ಪಡಿಸಿದ್ದು, ಇದು ಎಲೆಕ್ಟ್ರಿಕ್ ರೇಜರ್‌ನ ಆಕಾರ ಮತ್ತು ಗಾತ್ರದಲ್ಲಿದೆ ಎಂದು ತಿಳಿಸಿದ್ದಾರೆ.

5. **ಹಸಿರು ಪರಿಸರದಿಂದ ಮಕ್ಕಳ ಗ್ರಹಿಕಾ ಸಾಮರ್ಥ್ಯ ಹೆಚ್ಚಳ :** ಉದ್ಯಾನ ಅಥವಾ ಗಿಡಮರಗಳು ಹೆಚ್ಚಾಗಿ ಇರುವಂತಹ ಪ್ರದೇಶಗಳ ಸಮೀಪ ಬೆಳೆಯುವ ಮಕ್ಕಳ ಗ್ರಹಿಕಾ ಸಾಮರ್ಥ್ಯ ಉತ್ತಮವಾಗಿ ಇರುತ್ತದೆ ಎನ್ನುವ ಅಂಶವನ್ನು ಅಧ್ಯಯನವೊಂದು ಬಹಿರಂಗಪಡಿಸಿದೆ. ಸ್ಪೇನ್‌ನ ಬಾರ್ಸಿಲೋನಾ ಜಾಗತಿಕ ಆರೋಗ್ಯ ಸಂಸ್ಥೆಯ (ಐಎಸ್ ಗ್ಲೋಬಲ್) ಸಂಶೋಧಕರು 1500 ಮಕ್ಕಳನ್ನು ಅಧ್ಯಯನಕ್ಕೆ ಒಳಪಡಿಸಿ ಈ ವರದಿ ಸಿದ್ಧಿಪಡಿಸಿದ್ದಾರೆ.

ಡಿಸೆಂಬರ್ 01

## ಪ್ರಯತ್ನವನ್ನು ಬಿಡಬೇಡ!

ಬೆಳಗ್ಗೆ : ಯೆಶ 40,41
ಸಂಜೆ : 2ಪೇತ್ರ 3

**'ಸರ್ವವಿಧದಲ್ಲಿಯೂ ನಮಗೆ ಇಕ್ಕಟ್ಟು ಇದ್ದರೂ ನಾವು ಅತಿ ಸಂಕಟ ಪಡುವವರಲ್ಲ; ನಾವು ದಿಕ್ಕು ಕಾಣದವರಾಗಿದ್ದರೂ....ಪ್ರಾಣನಷ್ಟಪಡುವವರಲ್ಲ' (2ಕೊರಿ 4:8,9).**

ಅಪೊ.ಪೌಲನು ತನ್ನನ್ನು ಸಾಕ್ಷಿಯಾಗಿ ನಿಲ್ಲಿಸಿ, ಹೇಳುವ ಮಾತೇನೆಂದರೆ, ಪ್ರಯತ್ನವನ್ನು ಬಿಡಬೇಡ. ಈ ವೇದಭಾಗದಲ್ಲಿ; ಅವನು ನಾಲ್ಕು ವಿಷಯಗಳ ಕುರಿತಾಗಿ ಹೇಳುತ್ತಾನೆ – 1. ಇಕ್ಕಟ್ಟಿದ್ದರೂ 2. ಸಂಕಟಕ್ಕೆ ಒಳಗಾದರೂ 3. ದಿಕ್ಕು ಕಾಣದೆ ಹೋದರೂ 4. ಹಿಂಸೆಗೆ ಒಳಗಾದರೂ. ಒಬ್ಬ ಮನುಷ್ಯನನ್ನು ಸೋತು ಹೋಗುವಂತೆ ಸೈತಾನನು ಈ ನಾಲ್ಕು ಆಯುಧಗಳನ್ನು ಉಪಯೋಗಿಸುವನು.

ಅಪೊ.ಪೌಲನು ಆ ಆಯುಧಗಳನ್ನು ಹೇಗೆ ಮುರಿದನು? ಹೇಗೆ ಜಯಗಳಿಸಿದನು? ಹೇಗೆ ತನ್ನ ಪ್ರಯತ್ನವನ್ನು ಬಿಡದೆ, ಕೊನೆಯವರೆಗೆ ಸ್ಥಿರವಾಗಿ ನಿಂತನು? ಹೌದು, ಅವನೊಳಗೆ ಒಂದು ಸ್ಥಿರವಾದ ತೀರ್ಮಾನ, ದೃಢವಾದ ಮನಸ್ಸು ಇತ್ತು. ನಾನು ಮನಗುಂದಿ ಹೋಗುವದಿಲ್ಲ, ನಾನು ಕೈ ಬಿಡಲ್ಪಡುವದಿಲ್ಲ, ಮರಣ ಹೊಂದುವದಿಲ್ಲ ಎಂಬ ದೃಢನಿರ್ಧಾರ, ನಂಬಿಕೆ ಅವನಲ್ಲಿತ್ತು.

ನೀವು ಅಂತ್ಯದವರೆಗೆ ಕೈಬಿಡದೆ, ದೃಢವಾಗಿ ನಿಲ್ಲಬೇಕೆಂದರೆ, ನಿಮ್ಮೊಳಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕು. ವಿಶ್ವಾಸವನ್ನು ಅರಿಕೆ ಮಾಡಬೇಕು. ಇಲ್ಲದಿದ್ದರೆ, ಶೋಧನೆಯೆಂಬ ಬಿರುಗಾಳಿ ಬೀಸುವಾಗ, ಮನಸ್ಸು ದುರ್ಬಲವಾಗುವದು. ಅಪೊ.ಪೌಲನಿಗೆ ಬಂದ ಶೋಧನೆಗಳು, ಕಷ್ಟಗಳು ಅಷ್ಟಿಷ್ಟಲ್ಲ. ಅದನ್ನು ಕೊರಿಂಥ ಸಭೆಯವರಿಗೆ ಬರೆಯುವಾಗ "ನಾವು ಸಂಕಟಗಳಲ್ಲಿಯೂ ಇಕ್ಕಟ್ಟುಗಳಲ್ಲಿಯೂ, ಪೆಟ್ಟುಗಳಲ್ಲಿಯೂ, ಸೆರೆಮನೆಗಳಲ್ಲಿಯೂ .. ಉಪವಾಸಗಳಲ್ಲಿಯೂ ಬಹು ತಾಳ್ಮೆಯನ್ನು ತೋರಿಸುತ್ತೇವೆ" (2ಕೊರಿ 6:4,5) ಎಂದು ಹೇಳುತ್ತಾನೆ. ಕ್ರಿಸ್ತನ ಸೇವೆಯಲ್ಲಿ ಅವರಿಗಿಂತ ಹೆಚ್ಚಾಗಿ ಪ್ರಯಾಸಪಟ್ಟೆನು. ಮಿತಿಮೀರಿ ಪೆಟ್ಟುಗಳನ್ನು ತಿಂದೆನು. ಅನೇಕ ಸಾರಿ ಮರಣದ ಬಾಯಿಗೆ ಸಿಕ್ಕಿದೆನು ಎಂದೆಲ್ಲಾ 2ಕೊರಿ 11:23–28 ರಲ್ಲಿ ವಿವರಿಸುತ್ತಾನೆ. ಕೆಲವು ಕಷ್ಟ ಸಂಕಟಗಳು ಆತ್ಮದಲ್ಲಿ ಉಂಟಾದರೆ, ಕೆಲವು ಸಂಕಟಗಳು ಶರೀರದಲ್ಲಿ ಉಂಟಾಯಿತು. ಆದರೂ, ಪೌಲನು ಕರ್ತನನ್ನು ಹಿಂಬಾಲಿಸುವದನ್ನು ಬಿಡಲಿಲ್ಲ "ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು? ಕಷ್ಟವೋ ಸಂಕಟವೋ ಹಿಂಸೆಯೋ ಅನ್ನವಿಲ್ಲದಿರುವದೋ ವಸ್ತ್ರವಿಲ್ಲದಿರುವದೋ ಗಂಡಾಂತರವೋ ಖಡ್ಗವೋ?... ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ನಾವು ಈ ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಗಳಾಗುತ್ತೇವೆ" ಎಂದು ಹೇಳುತ್ತಾನೆ (ರೋಮಾ 8:35–37).

ದೇವಮಕ್ಕಳೇ, ಅಪೊ.ಪೌಲನಂತೆ ಕ್ರಿಸ್ತನನ್ನು ಹಿಂಬಾಲಿಸಲು, ಇಂದೇ ಒಂದು ದೃಢವಾದ ತೀರ್ಮಾನವನ್ನು ತೆಗೆದುಕೊಳ್ಳುವಿರಾ?

**ನೆನಪಿಗೆ : 'ನಾನು ಹಿಂದಿನ ಸಂಗತಿಗಳನ್ನು ಮರೆತುಬಿಟ್ಟು ಮುಂದಿನವುಗಳನ್ನು ಹಿಡಿಯುವದಕ್ಕೆ ಎದೆ ಬೊಗ್ಗಿದವನಾಗಿ ದೇವರು ಕ್ರಿಸ್ತನ ಮೂಲಕವಾಗಿ.... ಬಿರುದನ್ನು ಗುರಿಮಾಡಿಕೊಂಡು ಓಡುತ್ತಾ ಇದ್ದೇನೆ' (ಫಿಲಿ 3:13,14).**



ಡಿಸೆಂಬರ್ 02

## ಜಯಹೊಂದಿ!

ಬೆಳಗ್ಗೆ : ಯೆಶ 42,43,44
ಸಂಜೆ : 1ಯೋಹಾನ 1

**'ಜಯಹೊಂದುವವನನ್ನು ನನ್ನೊಡನೆ ಸಿಂಹಾಸನದಲ್ಲಿ ಕುಳಿತುಕೊಳ್ಳುವಂತೆ ಮಾಡುವೆನು' (ಪ್ರಕ 3:21).**

ಪ್ರಯತ್ನವನ್ನು ಕೈ ಬಿಡಬೇಡಿರಿ ಅಂತ್ಯದವರೆಗೆ ಕ್ರಿಸ್ತ ನಂಬಿಕೆಯಲ್ಲಿ ದೃಢವಾಗಿ ನಿಲ್ಲಲು ಒಂದು ಮಾರ್ಗವಿರುವದು. ಅದು ಯಾವ ಮಾರ್ಗ? ನಿಮ್ಮ ಗುರಿಯ ಮೇಲೆ ನಿಮ್ಮ ದೃಷ್ಟಿಯನ್ನು ಇಡಿರಿ. ಜೀವಾಂತ್ಯದಲ್ಲಿ ಪ್ರಕಟವಾಗುವ ಮಹಿಮೆಯನ್ನು ನಿಮ್ಮ ಕಣ್ಣುಗಳು ನಿರೀಕ್ಷಿಸುತ್ತಿರಲಿ. " ... ಈಗಿನ ಕಾಲದ ಕಷ್ಟಗಳು ಅಲ್ಪವೇ ಸರಿ ಎಂದೆಣಿಸುತ್ತೇನೆ" (ರೋಮಾ 8:18) ಎಂದು ಅಪೊ.ಪೌಲನು ಹೇಳುತ್ತಾನೆ.

ಯೇಸುಕ್ರಿಸ್ತನು ಈ ಪ್ರಪಂಚದ ಜೀವಿತದಲ್ಲಿ ಸೋತು ಹೋಗಲಿಲ್ಲ. ಆತನು ನಾಲ್ವತ್ತು ದಿನಗಳು ಉಪವಾಸವಿದ್ದಾಗ, ಸೈತಾನನು ಭಯಂಕರವಾಗಿ ಶೋಧಿಸಿದನು. ಫರಿಸಾಯರು, ಸದ್ದುಕಾಯರು, ಶಾಸ್ತ್ರಿಗಳು, ಮಹಾಯಾಜಕರು ಆತನ ಮೇಲೆ ತಪ್ಪು ಹೊರಿಸಬೇಕೆಂದು ಎಷ್ಟೋ ಪ್ರಯತ್ನ ಪಟ್ಟರು. ಆತನನ್ನು ಕೊಲ್ಲಲು ಸಂಚುಮಾಡಿದರು, ಆತನ ಶಿಷ್ಯನಾದ ಇಸ್ಕರಿಯೋತ ಯೂದನನ್ನು ತಮ್ಮ ಕಡೆ ಸೆಳೆದುಕೊಂಡರು. ಇಷ್ಟೆಲ್ಲಾ ಸಂಭವಿಸಿದಾಗ್ಯೂ, ಕ್ರಿಸ್ತನು ಮನಗುಂದಿ ಹೋಗಲಿಲ್ಲ, ಸೋತುಹೋಗಲಿಲ್ಲ, ತಂದೆ ದೇವರು ತನ್ನನ್ನು ಯಾವ ಉದ್ದೇಶದಿಂದ ಈ ಭೂಮಿಗೆ ಕಳುಹಿಸಿದನೋ, ಅದನ್ನು ನೆರವೇರಿಸಿದನು. "ನಾನು ಜಯಹೊಂದಿ ನನ್ನ ತಂದೆಯೊಡನೆ ಸಿಂಹಾಸನದಲ್ಲಿ ಕುಳಿತುಕೊಳ್ಳುವೆನು" ಎಂಬುದೇ, ಕ್ರಿಸ್ತನ ಗುರಿಯಾಗಿದ್ದಿತು ಉದ್ದೇಶವಾಗಿತ್ತು. ಸೋಲಿನ ಚಿಂತೆಯನ್ನು ಮಾಡಲೇ ಇಲ್ಲ. "ನಾನು ಕಡೆಯವರೆಗೂ ಸ್ಥಿರವಾಗಿದ್ದು ಓಟವನ್ನು ಮುಗಿಸುವೆನು" ಎಂಬುದೇ ಆತನ ಧ್ಯೆಯವಾಗಿತ್ತು.

ಯೇಸುಕ್ರಿಸ್ತನು ನಮ್ಮಂತೆ ರಕ್ತ ಮಾಂಸಗಳುಳ್ಳವನಾಗಿದ್ದನು. ನಮ್ಮ ಹಾಗೆ ಎಲ್ಲಾ ರೀತಿಯಲ್ಲೂ ಶೋಧನೆಗೆ ಗುರಿಯಾದರೂ, ಆತನು ಪಾಪಕ್ಕೆ ಒಳಗಾಗಲಿಲ್ಲ, ಪಾಪದ ಮೇಲೆ, ಲೋಕದ ಮೇಲೆ ಜಯಗಳಿಸಿದನು. ಆತನಿಗೂ ಆತ್ಮವ್ಯಾಕುಲವಿತ್ತು ಹೇಗೆ ಆರು ಘಂಟೆಗಳ ಕಾಲ ಶಿಲುಬೆಯ ಮೇಲೆ ತೂಗಾಡುವದು, ನೋವನ್ನು ಸಹಿಸಿಕೊಳ್ಳುವದು ನಿಂದನೆ, ಅವಮಾನ ಛಡಿ ಏಟುಗಳನ್ನು ಸಹಿಸಿಕೊಳ್ಳುವದು ಎಂಬ ಚಿಂತೆ ಯೋಚನೆ ಆತನ ಆತ್ಮವನ್ನು ಮರಣವೇದನೆಗೆ ಒಳಪಡಿಸಿತು. ದೇವರೇ ನಿನ್ನ ಚಿತ್ತವಿದ್ದರೆ, ಈ ಪಾತ್ರೆಯನ್ನು ನನ್ನಿಂದ ತೊಲಗಿಸು ಎಂದು ಪ್ರಾರ್ಥಿಸಿದನು. ಆದರೆ ಆತನು ಅದನ್ನೆಲ್ಲಾ ಪವಿತ್ರಾತ್ಮನ ಸಹಾಯದಿಂದ ಸಹಿಸಿಕೊಂಡನು. ನಿತ್ಯಾತ್ಮನಿಂದ ತನ್ನನ್ನು ತಾನೇ ನಿರ್ದೋಷಿಯನ್ನಾಗಿ ದೇವರಿಗೆ ಸಮರ್ಪಿಸಿಕೊಂಡನು (ಇಬ್ರಿ 9:14).

ದೇವಮಕ್ಕಳೇ, ನೀವೂ ಪವಿತ್ರಾತ್ಮನನ್ನೇ ಆಶ್ರಯಿಸಿರಿ. ಕಷ್ಟ ದುಃಖ, ಸಂಕಟಗಳಿಂದ ತುಂಬಿರುವ ಈ ಪ್ರಪಂಚದಲ್ಲಿ ಆತನೇ ನಿಮಗೆ ಉನ್ನತ ಬಲವನ್ನು ನೀಡಿ ಕಷ್ಟಗಳನ್ನು ಸಹಿಸಿಕೊಳ್ಳುವ ಕೃಪೆಯನ್ನೂ ನಿಶ್ಚಯವಾಗಿ ಕೊಡುವನು.

**ನೆನಪಿಗೆ: ನಿಮ್ಮ ಶಕ್ತಿಯನ್ನು ಮೀರುವ ಶೋಧನೆಯನ್ನು ನಿಮಗೆ ಬರಗೊಡಿಸದೆ ನೀವು ಅದನ್ನು ಸಹಿಸುವದಕ್ಕೆ ಶಕ್ತರಾಗುವಂತೆ ... ಮಾರ್ಗವನ್ನು ಸಿದ್ಧ ಮಾಡುವನು' (1ಕೊರಿ 10:13).**

ಡಿಸೆಂಬರ್ 03

## ಶಿಷ್ಟನು ಬಿದ್ದರೂ!

ಬೆಳಿಗ್ಗೆ : ಯೆಹೆ 45,46
ಸಂಜೆ : 1ಯೋಹಾ 2

**‘ಶಿಷ್ಟನು ಏಳು ಸಾರಿ ಬಿದ್ದರೂ ಮತ್ತೆ ಏಳುವನು, ದುಷ್ಟನು ಕೇಡಿನಿಂದ ಬಿದ್ದೇ ಹೋಗುವನು’ (ಜ್ಞಾನೋ 24:16).**

ಪ್ರಾಪಂಚಿಕರು ಅಥವಾ ಲೌಕೀಕರು ಕಷ್ಟಗಳು ಬರುವಾಗ ಸೋತುಹೋಗಬಹುದು, ತಮ್ಮ ಪ್ರಯತ್ನವನ್ನು ಕೈಬಿಡಬಹುದು. ಆದರೆ ದೇವಮಕ್ಕಳು, ಹಾಗೆ ಇರಬಾರದು, ಕಷ್ಟ ಸಂಕಟಗಳ ವೇಳೆಗಳಲ್ಲಿ, ನಿಮಗೆ ಆಶ್ರಯಿಸಲು ಕರ್ತನಿರುವನು. ಪವಿತ್ರಾತ್ಮನು ನಿಮ್ಮ ಜೊತೆ ನಿಲ್ಲುವನು. ಊಳಿಗದ ಆತ್ಮಗಳಾದ ದೇವದೂತರಿರುವರು, ಕ್ರಿಸ್ತನ ಕುಟುಂಬದಲ್ಲಿ ನಿಮಗೆ ಇರುವ ಭಾಗ್ಯವನ್ನು ಒಮ್ಮೆ ಯೋಚಿಸಿ ನೋಡಿರಿ.

ಅರಸನಾದ ದಾವೀದನು ಹೇಳುತ್ತಾನೆ, "ನಿನ್ನ ಚಿಂತಾಭಾರವನ್ನು ಯೆಹೋವನ ಮೇಲೆ ಹಾಕು, ಆತನು ನಿನ್ನನ್ನು ಉದ್ಧಾರ ಮಾಡುವನು; ನೀತಿವಂತನನ್ನು ಎಂದಿಗೂ ಕದಲಗೊಡಿಸುವದಿಲ್ಲ" (ಕೀರ್ತ 55:22). ಅಪೊ.ಪೌಲನು ಬರೆಯುತ್ತಾನೆ – ನಿಮ್ಮ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕಿರಿ, ಆತನು ನಿಮಗೋಸ್ಕರ ಚಿಂತಿಸುತ್ತಾನೆ" (1ಪೇತ್ರ 5:7). ನಿಮ್ಮ ಭಾರಗಳನ್ನು ಚಿಂತೆಗಳನ್ನು ಕರ್ತನ ಮೇಲೆ ಹಾಕಿರಿ, ವಿಶ್ರಮಿಸಲು ಕಲಿತುಕೊಳ್ಳುವರಾದರೆ, ನೀವು ಸೋತುಹೋಗುವದಿಲ್ಲ, ಪ್ರಯತ್ನವನ್ನು ಕೈಬಿಡಲಾರಿರಿ.

ಎರಡು ಕಪ್ಪೆಗಳು, ಒಮ್ಮೆ ಒಂದು ಮೊಸರಿನ ಗಡಿಗೆಯಲ್ಲಿ ಬಿದ್ದವು, ಅದರೊಳಗಿಂದ ಹೊರಗೆ ಬರಲು ಬಹಳ ಹೊತ್ತು ಕಾಲುಗಳನ್ನು ಬಡಿಯುತ್ತಾ ಪ್ರಯತ್ನಪಟ್ಟರೂ, ಸಾಧ್ಯವಾಗಲಿಲ್ಲ. ಒಂದು ಕಪ್ಪೆಯಂತೂ ಸೋತು ತನ್ನ ಪ್ರಯತ್ನವನ್ನು ನಿಲ್ಲಿಸಿ ಮೊಸರಿನಲ್ಲಿ ಮುಳುಗಿ ಸತ್ತು ಹೋಯಿತು. ಆದರೆ ಇನ್ನೊಂದು ಕಪ್ಪೆ ತನ್ನ ಪ್ರಯತ್ನವನ್ನು ನಿಲ್ಲಿಸದೆ ಕಾಲುಗಳನ್ನು ಬಡಿಯುತ್ತಲೇ ಇತ್ತು, ಸ್ವಲ್ಪ ಹೊತ್ತಿನಲ್ಲೇ ಮೊಸರಿನಲ್ಲಿದ್ದ ಬೆಣ್ಣೆ ಉಂಡೆಯಾಗಿ ಮೇಲೆ ತೇಲಲಾರಂಭಿಸಿತು. ಇದನ್ನು ಕಂಡ ಕಪ್ಪೆ ಕೂಡಲೆ ಉಂಡೆಯ ಮೇಲೆ ಕಾಲಿಟ್ಟು ಒಂದೇ ಏಟಿಗೆ ಮಡಕೆಯಿಂದ ಹೊರಕ್ಕೆ ಜಿಗಿಯಿತು. ತನ್ನ ಪ್ರಾಣವನ್ನು ಉಳಿಸಿಕೊಂಡಿತು. ಅದರಂತೆಯೇ, ನೀವೂ ಪ್ರಾರ್ಥನೆಯೊಂದಿಗೆ ಕರ್ತನು ನನ್ನನ್ನು ಎಂದಿಗೂ ಕೈ ಬಿಡುವದಿಲ್ಲ. ನನ್ನನ್ನು ಬಲಪಡಿಸುವ ಕ್ರಿಸ್ತನಿಂದ ಎಲ್ಲವನ್ನೂ ಮಾಡಲು ನನಗೆ ಬಲ ಉಂಟು ಎಂದು, ಪ್ರಯತ್ನಿಸುತ್ತಲೇ ಇರುವಾಗ, ಕರ್ತನು ನಿಮಗೆ ಬಿಡುಗಡೆಯ ಮಾರ್ಗವನ್ನು ತೋರಿಸುವನು. ನಿಮ್ಮನ್ನು ಕಾಪಾಡಿ ಜಯ ನೀಡುವನು.

ದೇವಮಕ್ಕಳೇ, "ಅಯ್ಯೋ, ಎಷ್ಟೊ ಸಾರಿ, ಈ ಪಾಪ ಮಾರ್ಗದಲ್ಲಿ, ನಾನು ಬಿದ್ದು ಬಿಟ್ಟೆನು, ಎಷ್ಟೋ ಪ್ರಯತ್ನಗಳನ್ನು ಮಾಡುತ್ತಿದ್ದೇನೆ. ವೇದವಾಕ್ಯಗಳನ್ನು ಅರಿಕೆ ಮಾಡುತ್ತಿದ್ದೇನೆ, ದೇವ ಸೇವಕರ ಬಳಿಗೆ ಪ್ರಾರ್ಥನೆಗೆ ಹೋಗುತ್ತಿರುವೆನು, ಆದರೆ ಈ ಶೋಧನೆ ನನ್ನನ್ನು ಬಿಡುತ್ತಿಲ್ಲವೇ, ಈ ಕ್ರೈಸ್ತ ಓಟದಲ್ಲಿ ನಾನು ಓಡಲು ಸಾಧ್ಯವಾಗುತ್ತಿಲ್ಲ" ಎಂದು ನಿಮ್ಮ ಪ್ರಯತ್ನವನ್ನು ಕೈಬಿಡಬೇಡಿ ಜಯ ನಿಮ್ಮ ಪಕ್ಕದಲ್ಲಿಯೇ ಇರುವದು. ನಿಮ್ಮ ನಂಬಿಕೆಯ ಕಣ್ಣುಗಳಿಂದ ನಿಮಗೆ ಸಿಗಲಿರುವ ಜಯವನ್ನು ಕಾಣಿರಿ.

**ನೆನಪಿಗೆ: ‘ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ’ (ಇಬ್ರಿ 12:2).**



ಡಿಸೆಂಬರ್ 04

## ನಿಷ್ಕ್ರಿಯರಾಗದಿರಿ!

ಬೆಳಿಗ್ಗೆ : ಯೆಹೆ 47,48
ಸಂಜೆ : 1ಯೋಹಾ 3

**‘ಮಳೆ ತುಂಬಿದ ಮೋಡಗಳು ಭೂಮಿಯ ಮೇಲೆ ಸುರಿದು ಬಿಡುವವು; ಮರವು ತೆಂಕಣಕ್ಕಾಗಲಿ ಬಡಗಣಕ್ಕಾಗಲಿ ಬಿದ್ದರೆ ಬಿದ್ದ ಹಾಗೆಯೇ ಇರುವದು’ (ಪ್ರಸಂ 11:3).**

ದೇವರ ಮಕ್ಕಳಾದ ನೀವು ಮರಗಳಲ್ಲ, ಇಂದ್ರಿಯಗಳುಳ್ಳ ಮನುಷ್ಯರು, ಅದರಲ್ಲೂ ಕರ್ತನ ರಕ್ತದಿಂದ ವಿಮೋಚಿಸಲ್ಪಟ್ಟ, ರಾಜಾಧಿರಾಜನ ಮಕ್ಕಳು, ನೀವು ಎಂದಿಗೂ ಬಿದ್ದಲ್ಲೇ ಬಿದ್ದಿರಬಾರದು, ಸೋಲನ್ನು ಒದರಿ ಬಿಟ್ಟು, ಎದ್ದೇಳಬೇಕು. ಕಾಲೂರಿ ನಿಂತು ಕರ್ತನಿಗಾಗಿ ಎದ್ದು ಪ್ರಕಾಶಿಸಲು ಆತನು ನಿಮಗೆ ಸಹಾಯ ಮಾಡುವನು.

ಯೆಹೋಶುವನು, ಇಸ್ರಾಯೇಲ್ಯರನ್ನು ಕಾನಾ ಊರಿಗೆ ನಡೆಸಿಕೊಂಡು ಬಂದನು. ಅವರಿಗೆ ಈಗಾಗಲೇ ಹಾಲೂ ಜೇನೂ ಹರಿಯುವ ಕಾನಾನು ವಾಗ್ದಾನ ಮಾಡಲ್ಪಟ್ಟಿತ್ತು. ಮೊದಲನೆಯದಾಗಿ ಅವರು ಯೆರಿಕೋ ಪಟ್ಟಣವನ್ನು ಜಯಿಸಿದರು, ಆದರೆ ಯೆಹೋಶುವನಿಗೆ ತಿಳಿಯದಂತೆ, ಇಸ್ರಾಯೇಲ್ಯರ ಪಾಳೆಯದೊಳಗೆ, ಆಕಾನನೆಂಬುವನು ಮೀಸಲಾಗಿಟ್ಟ ನಿಲುವಂಗಿಯನ್ನೂ, ಇನ್ನೂರು ರೂಪಾಯಿ ತೂಕದ ಬೆಳ್ಳಿಯನ್ನು ಐವತ್ತು ರೂಪಾಯಿ ತೂಕದ ಚಿನ್ನದ ಗಟ್ಟಿಯನ್ನು ಕದ್ದು ತನ್ನ ಗುಡಾರದಲ್ಲಿ ಬಚ್ಚಿಟ್ಟಿದ್ದನು. ಶಾಪಕ್ಕೆ ಕಾರಣವಾದದ್ದನ್ನು ತೆಗೆದು ಹಾಕದೇ, ಅವರು ಆಯಿ ಎಂಬ ಪಟ್ಟಣದ ಮೇಲೆ ಯುದ್ಧಕ್ಕೆ ಹೋಗಲು ಅಲ್ಲಿ ಅಪಜಯವನ್ನು ಕಂಡರು, 36 ಮಂದಿ ಇಸ್ರಾಯೇಲ್ಯರು ಕೊಲ್ಲಲ್ಪಟ್ಟರು. "ಆಗ ಯೆಹೋಶುವನೂ, ಇಸ್ರಾಯೇಲ್ಯರ ಹಿರಿಯರೂ ತಲೆಯ ಮೇಲೆ ಬೂದಿಯನ್ನು ಹಾಕಿಕೊಂಡು ಸಾಯಂಕಾಲದವರೆಗೂ ಯೆಹೋವನ ಮಂಜೂಷದ ಮುಂದೆ ಬೋರಲು ಬಿದ್ದು ಪ್ರಾರ್ಥಿಸಿದರು" (ಯೆಹೋ 7:6). "ಆಗ ಕರ್ತನು ಯೆಹೋಶುವನಿಗೆ, ಏಳು, ನೀನು ಈ ಪ್ರಕಾರ ಬೋರಲು ಬಿದ್ದಿರುವದೇಕೆ? ಶಾಪಗ್ರಸ್ಥವಾದದ್ದನ್ನೂ ತೆಗೆದು ಹಾಕುವವರೆಗೆ ನಾನು ನಿಮ್ಮ ಸಂಗಡ ಬರುವದಿಲ್ಲ, ಎದ್ದು ಜನರನ್ನು ಶುದ್ಧಪಡಿಸು. ನೀವು ಅದನ್ನು ತೆಗೆದು ಹಾಕುವವರೆಗೂ ಶತ್ರುಗಳ ಮುಂದೆ ನಿಲ್ಲಲಾರಿರಿ" ಎಂದು ಹೇಳಿದನು (ಯೆಹೋ 7:10–13).

ದೇವಮಕ್ಕಳೇ, ಸೋಲನ್ನು ಕಂಡು, ಅಧೈರ್ಯಗೊಳ್ಳದಿರಿ. ಕರ್ತನ ವಾಗ್ದಾನಗಳನ್ನು ಮರೆತುಹೋಗದಿರಿ. ಸೋಲುಗಳು ಬರುವಾಗ, ನಿಮ್ಮನ್ನು ನೀವು ಪರೀಕ್ಷಿಸಿ ನೋಡಿರಿ. ಯೋನನಂತೆ ದೇವರ ಮಾತನ್ನು ಮೀರಿ ನಡೆಯುತ್ತಿರುವಿರಾ? ನಿನೆವೆಗೆ ಬದಲಾಗಿ ತಾರ್ಷಿಶಿಗೆ ಹೋಗುತ್ತಿರುವಿರಾ? ನಿಮ್ಮ ತಪ್ಪಾದ ಆಲೋಚನೆಗಳನ್ನು ಗುರಿಗಳನ್ನು ಸಮುದ್ರದಲ್ಲಿ ಎತ್ತಿ ಬಿಸಾಡಿರಿ. "ನಮ್ಮನ್ನು ನಾವೇ ವಿಚಾರಿಸಿಕೊಂಡರೆ ನ್ಯಾಯವಿಚಾರಣೆಗೆ ಒಳಗಾಗುವದಿಲ್ಲ’ (1ಕೊರಿ 11:31).

ಪ್ರಿಯರೇ, ನೀವು ಸುಮ್ಮನೆ ದುಃಖಪಟ್ಟು ಇದ್ದಲೇ ಇರದೆ. 1. ನಿಮ್ಮನ್ನು ಪರೀಕ್ಷಿಸಿ ನೋಡಿರಿ 2. ನಿಮ್ಮನ್ನು ಶುದ್ದೀಕರಿಸಿಕೊಳ್ಳಿರಿ 3. ನೀವು ಬಹಿಷ್ಕರಿಸಬೇಕಾದದ್ದನ್ನು ಬಹಿಷ್ಕರಿಸಿರಿ, ಆಗ ಜಯವು ನಿಮ್ಮದಾಗುವದು.

**ನೆನಪಿಗೆ : ‘ದೇವಾ, ನನ್ನನ್ನು ಪರೀಕ್ಷಿಸಿ ನನ್ನ ಹೃದಯವನ್ನು ತಿಳಿದುಕೋ; ... ಸನಾತನಮಾರ್ಗದಲ್ಲಿ ನನ್ನನ್ನು ನಡಿಸು’ (ಕೀರ್ತ 139:23,24).**

**ಡಿಸೆಂಬರ್ 05**

## ಜೀವದಿಂದಿದ್ದು!

**ಬೆಳಿಗ್ಗೆ : ದಾನಿಯೇಲ 1,2**
**ಸಂಜೆ : 1ಯೋಹಾ 4**

**'ನಾನು ಸಾಯುವದಿಲ್ಲ; ಜೀವದಿಂದಿದ್ದು ಯಾಹುವಿನ ಕ್ರಿಯೆಗಳನ್ನು ಸಾರುವೆನು' (ಕೀರ್ತ 118:17).**

ಜನರು ವ್ಯಾಧಿಗಳಿಗೂ ಬಲಹೀನತೆಗಳಿಗೂ ಹೆದರುವರು. "ಅಯ್ಯೋ, ಈ ಮರಣಕರವಾದ ವ್ಯಾಧಿ ತಾಕಿತೇ, ನಾನು ಬದುಕುವೆನೋ, ಇಲ್ಲವೋ, ಎಂದು ಕಳವಳಗೊಳ್ಳುವರು. ಇದರಿಂದ ತಮ್ಮ ತೀರ್ಮಾನಗಳನ್ನೂ, ತಮ್ಮ ಮಕ್ಕಳ ಭವಿಷ್ಯದ ಯೋಚನೆಗಳನ್ನು ಬಿಟ್ಟುಬಿಡುವರು. ಅವರು ಕರ್ತನನ್ನು ನೋಡದೆ, ಮರಣವನ್ನೇ ಎದುರು ನೋಡುತ್ತಿರುತ್ತಾರೆ. ದೇವಮಕ್ಕಳಾದ ನೀವು ಅಂಥಹ ಸಂದರ್ಭಗಳಲ್ಲಿ ಧೈರ್ಯಗೆಟ್ಟು ಹೋಗಬೇಡಿರಿ. ವಿಶ್ವಾಸ ಅರಿಕೆಯನ್ನು ಮಾಡಿರಿ. "ಕರ್ತನು ನನ್ನ ಬಲವಾಗಿದ್ದಾನೆ ಆತನು ನನಗೆ ಜೀವಕೊಡುವದಕ್ಕೂ, ಜೀವವನ್ನು ಪರಿಪೂರ್ಣಗೊಳಿಸುವದಕ್ಕೂ ಬಂದನು. ನನ್ನ ಶರೀರವನ್ನು ಉಂಟು ಮಾಡಿದ ಕರ್ತನು, ಈ ವ್ಯಾಧಿಯನ್ನು ನೀಗಿಸಿ ನನಗೆ ಆರೋಗ್ಯ ನೀಡುವನು" "ನಾನು ಕರ್ತನ ಆಲಯವಾಗಿರುವೆನು ನನ್ನೊಳಗೆ ಪವಿತ್ರಾತ್ಮನು ತಂಗಿರುವನು, ಆತನು ನನ್ನನ್ನು ಪ್ರಾರ್ಥನಾಲಯವನ್ನಾಗಿ ಮಾರ್ಪಡಿಸಿರುವನು. ಈ ಶರೀರದಲ್ಲಿ ವ್ಯಾಧಿಗೆ ಸ್ಥಳವಿಲ್ಲ. ಕರ್ತನು ತಂಗಿರುವ ಈ ಶರೀರದಲ್ಲಿ, ಸೈತಾನನು ತಂದು ಹಾಕಿದ ಈ ವ್ಯಾಧಿ, ತಂಗಿರಲು ಸಾಧ್ಯವಿಲ್ಲ" "ನಿನ್ನನ್ನು ಗುಣಪಡಿಸುವೆನು" ಎಂದು ಕರ್ತನು ಎಷ್ಟೋ ವಾಗ್ದಾನಗಳನ್ನು ಕೊಟ್ಟಿರುವನು. ಆತನೇ ನನ್ನ ವ್ಯಾಧಿಗಳನ್ನೆಲ್ಲಾ ಶಿಲುಬೆಯಲ್ಲಿ ಹೊತ್ತು ತೀರಿಸಿರುವನು. ನಾನು ಅದನ್ನು ಹೊರಬೇಕಾಗಿಲ್ಲ ವ್ಯಾಧಿಯೇ, ನನ್ನ ಶರೀರವನ್ನು ಬಿಟ್ಟು ಹೊರಗೆ ಹೋಗು. ಸೈತಾನನೇ, ನೀನು ನನಗೆ ಕೇಡು ಮಾಡಲು ಸಾಧ್ಯವಿಲ್ಲ. ನಾನು ಬದುಕಿದ್ದು, ಕರ್ತನ ಸೇವೆಯನ್ನು ಮಾಡುವೆನು ಎಂದು ಕರ್ತನಲ್ಲಿ ತೀರ್ಮಾನಿಸಿರಿ.

ನನಗೆ ಎರಡು ಸಾರಿ ಪಾರ್ಶ್ವವಾಯು ವ್ಯಾಧಿ ತಾಕಿತು. ನನ್ನ ಕೈಕಾಲುಗಳು ನಿಷ್ಕ್ರಿಯೆಗೊಂಡವು. "ದೇವರೇ, ನನ್ನ ಮಕ್ಕಳು ಓದುತ್ತಿರುವರು, ಈಗ ನೀನು ನನ್ನನ್ನು ಗುಣಪಡಿಸುವೆಯಾದರೆ. ನಾನು ಹೆಂಡತಿಗೂ, ಮಕ್ಕಳಿಗೂ ಮಾಡಬೇಕಾದ ಕರ್ತವ್ಯಗಳನ್ನು ಮಾಡಿ ಮುಗಿಸಲು ಸಾಧ್ಯ. ಹಿಜ್ಕೀಯನಿಗೆ ಹದಿನೈದು ವರುಷಗಳ ಆಯುಷ್ಕಾಲವನ್ನು ಹೆಚ್ಚಿಸಿದಿಯಲ್ಲಾ. ಅದರಂತೆ ನನ್ನ ಆಯುಷ್ಕಾಲವನ್ನು ಹೆಚ್ಚಿಸು ಎಂದು ಕೇಳಿದೆನು. ಅಪನಂಬಿಕೆ ಪಡಲಿಲ್ಲ. ನಿರಾಶೆಗೊಳ್ಳಲಿಲ್ಲ. ಸೋತು ಹೋಗಲಿಲ್ಲ, ಕರ್ತನು ಸ್ವಸ್ಥಪಡಿಸಿದನು.

ದೇವಮಕ್ಕಳೇ, ವ್ಯಾಧಿಗಳೂ, ಬಲಹೀನತೆಗಳು ತಾಕುವಾಗ ಹೆದರದಿರಿ. ಈ ವಾಕ್ಯಗಳನ್ನು ಅರಿಕೆ ಮಾಡಿರಿ. "ನಾನು ಸಾಯುವದಿಲ್ಲ ಜೀವದಿಂದಿದ್ದು ಯಾಹುವಿನ ಕ್ರಿಯೆಗಳನ್ನು ಸಾರುವೆನು" (ಕೀರ್ತ 118:17). "ನನ್ನಿಂದ ನಿನ್ನ ದಿನಗಳು ಹೆಚ್ಚುವವು, ನಿನ್ನ ಆಯುಸ್ಸಿನ ದಿನಗಳು ವೃದ್ಧಿಯಾಗುವವು (ಜ್ಞಾನೋ 9:11). ಕರ್ತನು ನಿಮ್ಮ ನಂಬಿಕೆಯನ್ನು ಘನಪಡಿಸಿ, ನಿಶ್ಚಯವಾಗಿ ನಿಮ್ಮನ್ನು ಗುಣಪಡಿಸುವನು. ನಿಮ್ಮ ದುಃಖವನ್ನು ಸಂತೋಷವಾಗಿ ಮಾರ್ಪಡಿಸುವನು.

**ನೆನಪಿಗೆ: ಇಕ್ಕಟ್ಟಿನ ದಿನದಲ್ಲಿ ನೀನು ಬಳಲಿಹೋದರೆ, ನಿನ್ನ ಬಲವೂ ಇಕ್ಕಟ್ಟೇ (ಜ್ಞಾನೊ 24:10)**



**ಡಿಸೆಂಬರ್ 06**

## ನಾನು ನಂಬಿರುವಾತನು!

**ಬೆಳಿಗ್ಗೆ : ದಾನಿ 3,4**
**ಸಂಜೆ : 1ಯೋಹಾ 5**

**'ನಾನು ನಂಬಿರುವಾತನನ್ನು ಬಲ್ಲೆನು. ಆತನು ನನ್ನ ವಶದಲ್ಲಿಟ್ಟಿರುವದನ್ನು ಆತನು ಆ ದಿನಕ್ಕಾಗಿ ಕಾಪಾಡುವದಕ್ಕೆ....ದೃಢವಾಗಿ ನಂಬಿದ್ದೇನೆ' (2ತಿಮೊ 1:12).**

ಕರ್ತನು ನಮ್ಮ ಯಜಮಾನನಾಗಿರುವನು. ಆತ್ಮಗಳ ಸುಗ್ಗಿಯಾದ ಈ ಕಾಲದಲ್ಲಿ, ನೀವು ಕರ್ತನಿಗೆ ಅಗತ್ಯವಾದವರಾಗಿರುವಿರಿ. ನೀವು ಸೋತು ಹೋಗದೆ ಕ್ರಿಸ್ತನಿಗಾಗಿ ನಿಲ್ಲುವಿರಾದರೆ, ಆತ್ಮನ ವರಗಳನ್ನೂ ಬಲವನ್ನೂ ನಿಮಗೆ ನೀಡುವನು. ನೀವು ಎದ್ದು ಆತನಿಗಾಗಿ ಪ್ರಕಾಶಿಸುವಿರಿ.

ಒಬ್ಬ ದೇವಮನುಷ್ಯರು, ಒಂದು ಕುದುರೆಯನ್ನು ಬಹಳ ಪ್ರೀತಿಯಿಂದ ಸಾಕುತ್ತಿದ್ದರು. ಆ ಕುದುರೆಯನ್ನು ಹತ್ತಿ, ಸುವಾರ್ತೆ ಸಾರಲು ಅನೇಕ ಸ್ಥಳಗಳಿಗೆ ಹೋಗುತ್ತಿದ್ದರು. ಆ ಕುದುರೆ ಎಷ್ಟು ದೂರ ಪ್ರಯಾಣ ಮಾಡಿದರೂ, ಆಯಾಸಗೊಳ್ಳದೆ ಯಜಮಾನನ ಸೇವೆಯಲ್ಲಿ ಸಹಾಯ ಮಾಡುತ್ತಾ ಬಂತು. ಯಜಮಾನನೂ, ಆ ಕುದುರೆಯನ್ನು ಬಹಳ ಪ್ರೀತಿಸುತ್ತಾ ಬಂದರು. ಕೆಲವರಿಗೆ ಆ ಕುದುರೆಯ ಮೇಲೆ ಹೊಟ್ಟೆಕಿಚ್ಚು ಬಂದು, ಅದನ್ನು ಒಂದು ದಿನ ರಾತ್ರಿಯ ವೇಳೆಯಲ್ಲಿ ಕದ್ದುಕೊಂಡು ಹೋಗಿ, ಒಂದು ಆಳವಾದ ಗುಂಡಿಯಲ್ಲಿ ಹಾಕಿದರು. ಆದರೆ ಕರ್ತನ ಕೃಪೆಯಿಂದ ಕುದುರೆಯ ಕಾಲುಗಳು ಮುರಿಯಲಿಲ್ಲ ಸಾಯಲೂ ಇಲ್ಲ. ಆಗ ಶತ್ರುಗಳು ಅದನ್ನು ಜೀವಸಹಿತ ಹೂತು ಬಿಡಬೇಕೆಂದು ಮಣ್ಣನ್ನು ಕಸಕಡ್ಡಿಯನ್ನು ಆ ಗುಂಡಿಯಲ್ಲಿ ಸುರಿಯಲಾರಂಭಿಸಿದರು, ಆದರೆ ಕುದುರೆ, ಕಾಲಿನಿಂದ ಮಣ್ಣನ್ನು ಒದೆಯುತ್ತಾ ಕೆಳಗೆ ತಳ್ಳಿ "ನಾನು ನನ್ನ ಯಜಮಾನನಿಗೆ ಉಪಯೋಗವಾಗಿರುವೆನು" ಎಂದು ನಿರ್ಧರಿಸಿ, ಗುಂಡಿಯಿಂದ ಮೇಲಕ್ಕೆ ಹಾರಿ, ಹೊರಗೆ ಬಂದು ಅಲ್ಲಿದ್ದವರನ್ನು ಹಿಂಗಾಲಿನಿಂದ ಒದ್ದು, ತನ್ನ ಯಜಮಾನನ ಮನೆಗೆ ಓಡಿ ಬಂತು.

ದೇವಮಕ್ಕಳೇ, ಕರ್ತನು ನಮ್ಮ ಯಜಮಾನನಾಗಿರುವನು. ಈ ಅಂತ್ಯಕಾಲದಲ್ಲಿ ಆತ್ಮಗಳನ್ನು ಕರ್ತನಿಗಾಗಿ ಆದಾಯ ಪಡಿಸಲು ನಿಮ್ಮ ಸೇವೆಯ ಅಗತ್ಯತೆ ಇರುವದು. ನೀವು ಸೋತುಹೋಗದೆ ಕರ್ತನಿಗಾಗಿ ನಿಲ್ಲುವಿರಾದರೆ ಆತ್ಮನ ವರಗಳಿಂದ ತನ್ನ ಬಲದಿಂದ ನಿಮ್ಮನ್ನು ತುಂಬಿಸುವನು. ಕ್ರಿಸ್ತನು ನಿಮ್ಮ ಜೀವವಾಗಿರುವನು ಆತನು ನಿಮಗಾಗಿ ತನ್ನ ಪ್ರಾಣವನ್ನೇ ಕೊಟ್ಟಿರುವನು. ನಿಮ್ಮನ್ನು ಕರ್ತನ ಕೈಯಿಂದ ಯಾರೂ ಕಸಿದುಕೊಳ್ಳಲು ಸಾಧ್ಯವಿಲ್ಲ. "ನೀನು ಯೆಹೋವನ ಕೈಯಲ್ಲಿ ಸುಂದರ ಕಿರೀಟವಾಗಿಯೂ, ರಾಜಶಿರೋವೇಷ್ಟನವಾಗಿಯೂ ಇರುವಿ" ಎಂದು ಸತ್ಯವೇದ ಹೇಳುತ್ತದೆ (ಯೆಶಾ 62:3). ಕರ್ತನಲ್ಲಿ ನೀವು ಬಲಶಾಲಿಗಳಾಗಿರುವಿರಿ. ಕರ್ತನು ನಿಮಗಾಗಿ ಯುದ್ಧ ಮಾಡುವನು. ನಿಮ್ಮ ಜೀವಮಾನಕಾಲವೆಲ್ಲ ಶುಭವೂ, ಕೃಪೆಯೂ ನಿಮ್ಮನ್ನು ಹಿಂಬಾಲಿಸುವದು. ಕರ್ತನೊಂದಿಗೆ ಸದಾಕಾಲ ಇರುವಿರಿ.

**ನೆನಪಿಗೆ : 'ಜಯಹೊಂದುವವನು ಇವುಗಳಿಗೆ ಬಾಧ್ಯನಾಗುವನು; ನಾನು ಅವನಿಗೆ ದೇವರಾಗಿರುವೆನು, ಅವನು ನನಗೆ ಮಗನಾಗಿರುವನು' (ಪ್ರಕ 21:7).**

## ಡಿಸೆಂಬರ್ 07 — ಪ್ರಾರ್ಥನೆಯನ್ನು ಬಿಡಬೇಡ!

**ಬೆಳಿಗ್ಗೆ : ದಾನಿ 5,6,7**
**ಸಂಜೆ : 2ಯೋಹಾ 1**

**'ಬೇಸರಗೊಳ್ಳದೆ ಯಾವಾಗಲೂ ಪ್ರಾರ್ಥನೆ ಮಾಡುತ್ತಿರಬೇಕೆಂಬದಕ್ಕೆ, ಆತನು ಅವರಿಗೆ ಒಂದು ಸಾಮ್ಯವನ್ನು ಹೇಳಿದನು' (ಲೂಕ 18:1).**

ಪ್ರಾರ್ಥನೆಯು ನಮಗೂ ಕರ್ತನಿಗೂ ನಡುವೆ ಒಂದು ದೊಡ್ಡ ಅನ್ಯೋನ್ಯತೆಯನ್ನು ಉಂಟು ಮಾಡುವ ಸೇತುವೆಯಾಗಿದೆ. ಪ್ರಾರ್ಥನೆ ಮಾಡಿ, ಪಾಪದರಿಕೆ ಮಾಡಿದರೆ ರಕ್ಷಿಸಲ್ಪಡುವೆವು. ಪ್ರಾರ್ಥಿಸುವಾಗ, ಅಪ್ಪಾ, ತಂದೆಯೇ ಎಂಬ ಬಾಧ್ಯತೆಯಿಂದ ಕರ್ತನ ಬಳಿ ಮನಸ್ಸುಬಿಚ್ಚಿ ಮಾತನಾಡುತ್ತೇವೆ. ನಾವು ಪ್ರಾರ್ಥನೆಯಲ್ಲಿ ಇತರರಿಗಾಗಿ ಪ್ರಾರ್ಥಿಸುವಾಗ, ಮನವಿಗಳನ್ನು ಮಾಡುವಾಗ, ಅವರ ಜೀವಿತದಲ್ಲಿ ಸಂತೋಷ, ಸಮಾಧಾನಗಳನ್ನು ಕರ್ತನು ನೀಡುವನು. ಆದ್ದರಿಂದ ಸೋತುಹೋಗದೆ ಪ್ರಾರ್ಥಿಸಿರಿ. ಮತ್ತಾಯ 7:7ರಲ್ಲಿ "ಕೇಳಿರಿ ಕೊಡಲ್ಪಡುವದು, ತಟ್ಟಿರಿ ತೆರೆಯಲ್ಪಡುವದು, ಹುಡುಕಿರಿ ಸಿಕ್ಕುವದು" ಎಂದು ಹೇಳಲ್ಪಟ್ಟಿರುವದು. ಆದರೆ ಈ ವಾಕ್ಯವು ಮೂಲ ಭಾಷೆಯಲ್ಲಿ "ಕೇಳಿರಿ, ಕೇಳುತ್ತಲೇ ಇರಿ" ಎಂದು ಇರುವದು.

ಒಮ್ಮೆ ಕೇಳಿ ಬಿಟುಬಿಡಬೇಡಿರಿ. ಸೋತುಹೋಗದೆ ಉತ್ತರ ಸಿಗುವವರೆಗೂ ನಂಬಿಕೆಯಿಂದ ಕರ್ತನ ಬಳಿ ಕೇಳುತ್ತಲೇ ಇರಿ. ಪರಲೋಕದ ಬಾಗಿಲು ತೆರೆಯುವ ವರೆಗೂ ತಟ್ಟುತ್ತಲೇ ಇರಿ. ಯೇಸುಕ್ರಿಸ್ತನು ಈ ಕುರಿತು ಒಂದು ಸಾಮ್ಯವನು ಹೇಳಿದನು. "ಒಂದು ಪಟ್ಟಣದಲ್ಲಿ ಒಬ್ಬ ನ್ಯಾಯಾಧಿಪತಿ ಇದ್ದನು; ಅವನು ದೇವರಿಗೆ ಭಯಪಡದವನೂ ಮನುಷ್ಯರನ್ನು ಗಣನೆಗೆ ತೆಗೆದುಕೊಳ್ಳದವನು ಗೌರವಿಸದವನು ಆಗಿದ್ದನು. ಆ ಪಟ್ಟಣದಲ್ಲಿ ಒಬ್ಬ ವಿಧವೆ ಇದ್ದಳು; ಅವಳು ಅವನ ಬಳಿಗೆ ಹೋಗಿ, ನೀನು ನನಗೂ ನನ್ನ ವಿರೋಧಿಗಳಿಗೂ ನಡುವೆ ಇರುವ ವ್ಯಾಜ್ಯದಲ್ಲಿ ನನಗೆ ನ್ಯಾಯ ದೊರಕಿಸಿ ಕೊಡಬೇಕೆಂದು ಬಿನ್ನಹ ಮಾಡಿದಳು. ಬಹಳ ದಿನಗಳವರೆಗೆ, ಈ ಕುರಿತಾಗಿ ನ್ಯಾಯಾಧಿಪತಿಯನ್ನು ಕೇಳುತ್ತಲೇ ಇದ್ದದರಿಂದ, ಇವಳು ನನ್ನನ್ನು ಯಾವಾಗಲೂ ತೊಂದರೆ ಪಡಿಸುತ್ತಿದ್ದಾಳೆ ಇವಳಿಗೆ ನ್ಯಾಯ ಕೊಡಿಸಬೇಕೆಂದು ತೀರ್ಮಾನಿಸಿದನು" ಈ ಸಾಮ್ಯವನ್ನು ಹೇಳಿದ ಮೇಲೆ, ಕರ್ತನು ಹೀಗೆ ಹೇಳಿದನು– ಅನ್ಯಾಯಗಾರನಾದ ಈ ನ್ಯಾಯಾಧಿಪತಿ ಅಂದುಕೊಂಡದ್ದನ್ನು ಆಲೋಚಿಸಿಕೊಳ್ಳಿರಿ, ದೇವರಾದುಕೊಂಡವರು ಹಗಲು ರಾತ್ರಿ ಆತನಿಗೆ ಮೊರೆಯಿಡುವಲ್ಲಿ ಆತನು ಅವರ ವಿಷಯದಲ್ಲಿ ತಡ ಮಾಡಿದರೂ ಅವರ ನ್ಯಾಯವನ್ನು ತೀರಿಸದೇ ಇರುವನೇ? ಅವರಿಗೆ ಬೇಗನೆ ನ್ಯಾಯತೀರಿಸುವನೆಂದು ನಿಮಗೆ ಹೇಳುತ್ತೇನೆ. ಹೀಗಿದ್ದರೂ ಮನುಷ್ಯಕುಮಾರನು ಬಂದಾಗ ಭೂಮಿಯ ಮೇಲೆ ನಂಬಿಕೆಯನ್ನು ಕಾಣುವನೋ" (ಲೂಕ 18:2–8).

ದೇವಮಕ್ಕಳೇ, ನಮ್ಮ ದೇವರು ಪ್ರೀತಿಸ್ವರೂಪನೂ, ಕರುಣಾಮಯಿಯೂ ಆದಾತನು. ಕೇಳಬೇಕಾಗದದ್ದು ನಿಮ್ಮ ಕರ್ತವ್ಯ. ಪ್ರಾರ್ಥಿಸುವದಕ್ಕೆ, ಕ್ರಿಸ್ತನೇ ನಮಗೆ ಮಾದರಿ. ಪ್ರಾರ್ಥನೆ ಕ್ರೈಸ್ತರಿಗೆ ಒಂದು ಕಟ್ಟಳೆಯಾಗಿ ಕರ್ತನು ಇಟ್ಟಿರುವನು. ಪ್ರಾರ್ಥನೆಯಲ್ಲಿ ನಿಮ್ಮ ಬೇಡಿಕೆಗಳನ್ನಿರಿಸಿ ಕೇಳುತ್ತಲೇ ಇರಿ.

**ನೆನಪಿಗೆ : 'ಯೆಹೋವನನ್ನೂ ಆತನ ಬಲವನ್ನೂ ಆಶ್ರಯಿಸಿರಿ; ನಿತ್ಯವೂ ಆತನ ದರ್ಶನವನ್ನು ಅಪೇಕ್ಷಿಸಿರಿ' (1ಪೂ.ವೃ 16:11).**



## ಡಿಸೆಂಬರ್ 08 — ಒಳ್ಳೆಯದನ್ನು ಮಾಡುವದರಲ್ಲಿ!

**ಬೆಳಿಗ್ಗೆ : ದಾನಿ 8,9,10**
**ಸಂಜೆ : 3ಯೋಹಾ 1**

**'ಒಳ್ಳೇದನ್ನು ಮಾಡುವದರಲ್ಲಿ ಬೇಸರಗೊಳ್ಳದೆ ಇರೋಣ. ಯಾಕಂದರೆ ಮನಗುಂದದಿದ್ದರೆ ತಕ್ಕ ಸಮಯದಲ್ಲಿ ಬೆಳೆಯನ್ನು ಕೊಯ್ಯುವೆವು' (ಗಲಾ 6:9).**

ಪ್ರಾರ್ಥನೆ ಮಾಡುವದರಲ್ಲಿ ಬೇಸರಗೊಳ್ಳಬಾರದು ಎಂದು, ನಿನ್ನೆಯ ದಿನದಲ್ಲಿ ಧ್ಯಾನಿಸಿದೆವು. ಎರಡನೆಯದಾಗಿ, ಒಳ್ಳೆಯದನ್ನು ಮಾಡುವದರಲ್ಲಿ ಬೇಸರಗೊಳ್ಳಬಾರದು. ಒಳ್ಳೆಯದನ್ನು ಮಾಡುವದು ಎಂಬುದು, ನೆಲದಲ್ಲಿ ಬೀಜವನ್ನು ಬಿತ್ತುವದಕ್ಕೆ ಸಮಾನವಾದದ್ದು. ಬೀಜವನ್ನು ಬಿತ್ತುವ ರೈತನು, ಆ ಬೀಜಗಳು ಮೊಳೆತು ಎದ್ದೇಳುವವು ಎಂದು ಮಾತ್ರವಲ್ಲ ಅದು ಮೂವತ್ತರಷ್ಟು, ಅರವತ್ತಷ್ಟು, ನೂರರಷ್ಟು ಫಲ ನೀಡುವದೆಂಬ ನಿರೀಕ್ಷೆ ನಂಬಿಕೆಗಳೊಂದಿಗೆ ಬಿತ್ತುವನು.

ಅದರಂತೆಯೇ, ನೀವು ಒಳ್ಳೆಯದನ್ನು ಮಾಡುವಾಗ, ನಿಶ್ಚಯವಾಗಿ ಕರ್ತನು ನಿಮಗೆ ಒಳ್ಳೆಯದನ್ನು ಮಾಡುವನು. ಬಡವರಿಗೆ ದಯೆತೋರಿಸುವವನು ಯೆಹೋವನಿಗೆ ಸಾಲಕೊಡುವನು" (ಜ್ಞಾನೋ 19:17). ಕರ್ತನು ಒಳ್ಳೆಯವರ ಮೇಲೂ, ಕೆಟ್ಟವರ ಮೇಲೂ ಮಳೆಯನ್ನು ಸುರಿಸುವನು (ಮತ್ತಾ 5:45). ಆದ್ದರಿಂದ, ಕರ್ತನು ನಿಶ್ಚಯವಾಗಿ ನಿಮ್ಮನ್ನು ಆಶೀರ್ವದಿಸುವನು. "ಒಳ್ಳೆಯದನ್ನು ಮಾಡುವದು" ಎಂಬುದು ನೀವು ನಿಮ್ಮ ಆಶಿರ್ವಾದಕ್ಕಾಗಿ ಬಿತ್ತುವ ಬೀಜವಾಗಿರುವದು.

ನಮಗೆ ಒಳ್ಳೆಯದನ್ನು ಮಾಡಿದವರಿಗೆ, ನಾವು ಒಳ್ಳೆಯದನ್ನು ಮಾಡುವದು. ಸ್ನೇಹಿತರಿಗೆ, ಒಳ್ಳೆಯದನ್ನು ಮಾಡುವದು ಮನುಷ್ಯನಲ್ಲಿರುವ ಸಹಜವಾದ ಗುಣ. ಆದರೆ ನಮಗೆ ಕೇಡು ಮಾಡಿದವರಿಗೆ ಬಯಸಿದವರಿಗೆ ಒಳ್ಳೆಯದನ್ನು ಮಾಡುವದು, ಬಯಸುವದು ದೈವೀಕ ಗುಣ. ಇದಕ್ಕೆ ಕ್ರಿಸ್ತನೇ ನಮಗೆ ಮಾದರಿಯಾಗಿದ್ದಾನೆ. ನಾವು ಪಾಪಿಗಳಾಗಿದ್ದಾಗ್ಯೂ, ಆತನು ನಮ್ಮ ರಕ್ಷಣಾರ್ಥವಾಗಿ ಯಜ್ಞಪಶುವಾಗಿ ಕ್ರೂಜೆಯಲ್ಲಿ ವಧಿಸಲ್ಪಡಲು ತನ್ನನ್ನು ಒಪ್ಪಿಸಿಕೊಟ್ಟದ್ದರಲ್ಲಿ, ಆತನಲ್ಲಿದ್ದ ದೈವೀಕ ಪ್ರೀತಿ ಪ್ರಕಟಗೊಳ್ಳುವದು. ತನ್ನ ಶರೀರಭಾವವನ್ನು ಕುರಿತು ಬಿತ್ತುವವನು ಆ ಭಾವದಿಂದ ನಾಶನವನ್ನು ಕೊಯ್ಯುವನು. ಆತ್ಮನನ್ನು ಕುರಿತು ಬಿತ್ತುವವನು ಆತ್ಮನಿಂದ ನಿತ್ಯಜೀವವನ್ನು ಕೊಯ್ಯುವನು. ಆದದರಿಂದ ಎಲ್ಲರಿಗೆ ಒಳ್ಳೇದನ್ನು ಮಾಡೋಣ.

ದೇವಮಕ್ಕಳೇ, ನಾವು ಒಳ್ಳೆಯದನ್ನು ಮಾಡುವದರಲ್ಲಿ ಕ್ರಿಸ್ತನನ್ನೇ ಅನುಸರಿಸುವವರಾಗಿರೋಣ. ನೀವು ಯಾರಿಗೆ ಒಳ್ಳೆಯದನ್ನು ಮಾಡಿದರೂ, ಅದು ಅವರ ಕೈಯಲ್ಲಿ ಕೊಡುವದಾಗಿ ಅಲ್ಲ, ಕರ್ತನ ಕೈಯಲ್ಲಿ ಕೊಡುವದಾಗಿ ಭಾವಿಸಿರಿ. ಮನುಷ್ಯರಿಗೆ ಕೊಟ್ಟದ್ದಾಗಿ ಭಾವಿಸುವಾಗ ನೀವು ಅವರಿಂದ ಏನಾದರೊಂದನ್ನು ನಿರೀಕ್ಷಿಸುವಿರಿ. ಆದರೆ ಕರ್ತನಿಗೆ ಕೊಟ್ಟದ್ದಾಗಿ ಭಾವಿಸುವಾಗ ಇಹದಲ್ಲೂ, ಪರದಲ್ಲೂ, ನಿತ್ಯತ್ವದಲ್ಲೂ ನಿಮಗೆ ದೊಡ್ಡ ಆಶೀರ್ವಾದವಿರುವದು.

**ನೆನಪಿಗೆ : 'ಕೆಟ್ಟದ್ದನ್ನು ಬಿಟ್ಟು ಒಳ್ಳೆಯದನ್ನೇ ಮಾಡು; ಸಮಾಧಾನವನ್ನು ಹಾರೈಸಿ ಅದಕ್ಕಾಗಿ ಪ್ರಯತ್ನಪಡು' (ಕೀರ್ತ 34:14).**

ಡಿಸೆಂಬರ್ 09

## ಸತ್ಕ್ರಿಯೆ!

ಬೆಳಗ್ಗೆ : ದಾನಿ 11,12
ಸಂಜೆ : ಯೂದ 1

**‘ಯಾರು ಪ್ರಭಾವ ಮಾನ ನಿರ್ಲಯತ್ವಗಳನ್ನು ಹೊಂದಬೇಕೆಂದು ಒಳ್ಳೇದನ್ನು ಬೇಸರಗೊಳ್ಳದೆ ಮಾಡುತ್ತಾರೋ ಅವರಿಗೆ ನಿತ್ಯ ಜೀವವನ್ನು ಕೊಡುವನು’ (ರೋಮಾ 2:7).**

**ಮೊದಲನೆಯದಾಗಿ,** ನಾವು ಬೇಸರಪಡದೆ ಪ್ರಾರ್ಥಿಸಬೇಕು. **ಎರಡನೆಯಾದಾಗಿ,** ಬೇಸರಗೊಳ್ಳದೆ ಒಳ್ಳೆಯದನ್ನು ಮಾಡಬೇಕು. **ಮೂರನೆಯದಾಗಿ,** ಸತ್ಕ್ರಿಯೆಗಳನ್ನು ಮಾಡಬೇಕು. ಇಂದು ಲೌಕೀಕರೂ, ಸತ್ಕ್ರಿಯೆಗಳನ್ನು ಮಾಡುವರು. ಪಾಠಶಾಲೆಗಳನ್ನು ಕಟ್ಟುವರು, ಆಸ್ಪತ್ರೆಗಳನ್ನು ಕಟ್ಟುವರು, ಅನಾಥಾಶ್ರಮಗಳನ್ನು ನಡೆಸುವರು. ಕ್ರೈಸ್ತರೂ ಈ ರೀತಿಯ ಕಾರ್ಯಗಳನ್ನು ಮಾಡುವದುಂಟು.

ಸತ್ಕ್ರಿಯೆಗಳನ್ನು ಮಾಡುವದರಲ್ಲಿ ಅನ್ಯಜನರಿಗೂ, ಕ್ರೈಸ್ತರಿಗೂ ಇರುವ ವ್ಯತ್ಯಾಸವೇನು? ನಾವು ಸತ್ಕಾರ್ಯಗಳೊಂದಿಗೆ, ಕ್ರಿಸ್ತನ ಪ್ರೀತಿಯನ್ನು ಜನರಿಗೆ ಪ್ರಕಟಿಸುತ್ತಾ ಮರಣಕ್ಕೂ ಪಾತಾಳಕ್ಕೂ ತಪ್ಪಿಸುವ, ರಕ್ಷಣೆಯ ಮಾರ್ಗವನ್ನು ಜನರಿಗೆ ಹೇಳುವೆವು. ಪ್ರಾಪಂಚಿಕವಾದ ಸಹಾಯದೊಂದಿಗೆ ಕ್ರಿಸ್ತನನ್ನು. ಅವರು ಬಾಧ್ಯತೆಯಾಗಿ ಪಡೆದುಕೊಳ್ಳುವಂತೆ, ನಿತ್ಯಜೀವವನ್ನು ಹಿಡಿದುಕೊಳ್ಳುವಂತೆ, ಮಾರ್ಗತೋರಿಸುವೆವು.

ನೀವು ನಿಜವಾಗಿ ಸತ್ಕ್ರಿಯೆಗಳನ್ನು ಮಾಡುವಾಗ, ಮತಾಂತರ ಮಾಡುವಿರೆಂದು ಜನರು ನಿಮ್ಮ ಮೇಲೆ ತಪ್ಪು ಹೊರಿಸಬಹುದು. ಮತಾಂತರಕ್ಕಾಗಿ ಸಮಾಜ ಸೇವೆ ಮಾಡುತ್ತಿರುವರೆಂದು, ಆಪಾದಿಸಬಹುದು. ಜನರು ನಿಮ್ಮನ್ನು ಸೆರೆಮನೆಗೆ ತಳ್ಳಿದರೂ ಆಶ್ಚರ್ಯವೇನಿಲ್ಲ. ಜನರು ನಿಮ್ಮನ್ನು ಅರ್ಥಮಾಡಿಕೊಳ್ಳದೇ ಹೋದರೂ, ಬೇಸರಗೊಳ್ಳಬೇಡಿರಿ, ಸತ್ಕ್ರಿಯೆ ಮಾಡುವದರಲ್ಲಿ ಸೋತು ಹೋಗಬೇಡಿರಿ, ನೆಹೆಮಿಾಯನು ಈ ರೀತಿಯಾಗಿ ಪ್ರಾರ್ಥಿಸಿದನು "ನನ್ನ ದೇವರೇ, ಇದನ್ನು ನನ್ನ ಹಿತಕ್ಕಾಗಿ ನೆನಪು ಮಾಡಿಕೋ ನಾನು ನನ್ನ ದೇವರ ಆಲಯದ ಮತ್ತು ಅದರ ಸೇವೆಯ ಸಂಬಂಧವಾಗಿ ಮಾಡಿದ ಭಕ್ತಿಕಾರ್ಯಗಳನ್ನು ನಿನ್ನ ಪುಸ್ತಕದಿಂದ ಅಳಿಸಿ ಬಿಡ ಬೇಡ" (ನೆಹೆ 13:14).

ದೇವಮಕ್ಕಳೇ, ನೀವು ಸತ್ಕ್ರಿಯೆಗಳನ್ನು ಮಾಡುವಾಗ, ಕರ್ತನು ಸಂತೋಷಪಡುವನು. ಅದು ದೇವರ ನಾಮವನ್ನು ಮಹಿಮೆ ಪಡಿಸುವದು. ಯೇಸುಕ್ರಿಸ್ತನು ಹೇಳಿದನು "ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ ಹೀಗಾದರೆ ಅವರು ನಿಮ್ಮ ಒಳ್ಳೆಯ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು" ಎಂದು (ಮತ್ತಾ 5:16). ಮನುಷ್ಯರಿಗೆ ಮಾಡುವ ಸಹಾಯ ಮಾತ್ರವೇ ಸತ್ಕ್ರಿಯೆ ಎಂದು ಯೋಚಿಸಬಾರದು ಕರ್ತನಿಗೆ ಮಾಡುವ ಸತ್ಕ್ರಿಯಗಳು ಉಂಟು.

**ನೆನಪಿಗೆ : ‘ಅಳುತ್ತಾ ಬಿತ್ತುವವರು, ಹಾಡುತ್ತಾ ಕೊಯ್ಯುವರು. ದುಃಖಿಸುತ್ತಾ ಬೀಜವನ್ನು ತೆಗೆದುಕೊಂಡು ಹೋಗುವವನು ಹರ್ಷಿಸುತ್ತಾ ಸಿವುಡುಗಳನ್ನು ಹೊತ್ತುಕೊಂಡು ಬರುವನು’ (ಕೀರ್ತ 126:5,6).**



ಡಿಸೆಂಬರ್ 10

## ಯೋಸೇಫ!

ಬೆಳಗ್ಗೆ : ಹೋಶೇಯ 1,2,3,4
ಸಂಜೆ : ಪ್ರಕಟನೆ 1

**‘ನೀವಂತೂ ನನಗೆ ಕೇಡಾಗಬೇಕೆಂದು ಎಣಿಸಿದ್ದಿರಿ. ಆದರೆ ದೇವರು ಮೇಲಾಗಬೇಕೆಂದು ಸಂಕಲ್ಪಿಸಿದನು’ (ಆದಿ 50:20).**

ಯೋಸೇಫನು ಬೇಸರಗೊಳ್ಳದೆ ತನ್ನ ಜೀವಿತದಲ್ಲಿ ಮುಂದೆ ಸಾಗಿದ ವ್ಯಕ್ತಿಯಾಗಿದ್ದನು. ಅವನು ಹದಿನೇಳನೆಯ ವಯಸ್ಸಿನಲ್ಲಿ ತನ್ನ ಸಹೋದರರ ಕ್ಷೇಮ ಸಮಾಚಾರವನ್ನು ವಿಚಾರಿಸಿಕೊಂಡು ಬರಲು ಅರಣ್ಯಕ್ಕೆ ಹೋದಾಗ, ಅವರು ಅವನನ್ನು ಕೊಲ್ಲಲು ಪ್ರಯತ್ನಿಸಿದರು. ಅವನನ್ನು ಗುಂಡಿಯಲ್ಲಿ ಹಾಕಿದರು, ನಂತರ ಮಿದ್ಯಾನ್ಯರ ವ್ಯಾಪಾರಿಗಳಿಗೆ ಇಪ್ಪತ್ತು ಬೆಳ್ಳಿಕಾಸುಗಳಿಗೆ ಮಾರಲ್ಪಟ್ಟನು. ಆ ವ್ಯಾಪಾರಿಗಳು ಅವನನ್ನು ಐಗುಪ್ತಕ್ಕೆ ಕರಕೊಂಡು ಹೋಗಿ ದಾಸನಾಗಿ ಮಾರಿದರು. ಅಲ್ಲಿ ಫೋಟಿಫರನ ಹೆಂಡತಿಯಿಂದ ಅನ್ಯಾಯವಾಗಿ ಆಪಾದಿಸಲ್ಪಟ್ಟು ಸೆರೆಮನೆಗೆ ಸೇರಿದನು. ಹದಿಮೂರು ವರುಷಗಳು ಸೆರೆಮನೆವಾಸ ಅವನು ಅನುಭವಿಸಬೇಕಾಯಿತು.

ಸತ್ಯವಂತನೂ, ಉತ್ತಮನೂ ಆಗಿದ್ದ ಅವನು ಕಷ್ಟದ ಮೇಲೆ ಕಷ್ಟವನ್ನು ಅನುಭವಿಸಿದನು. ಆದರೂ, ದೇವರ ಮೇಲಿದ್ದ ನಂಬಿಕೆಯಲ್ಲಿ ಅವನು ಬಿದ್ದು ಹೋಗಲಿಲ್ಲ ಕಾರಣವೇನು? "ನನ್ನ ಸಹೋದರರು ಎಷ್ಟೇ ಕೇಡು ಮಾಡಿದರೂ, ಕರ್ತನು ಅದನ್ನು ನನಗೆ ಒಳ್ಳೆಯದನ್ನಾಗಿಯೇ ಮಾರ್ಪಡಿಸುವನು" ಎಂದು ನಂಬಿದ್ದನು. ಕರ್ತನು ನನಗೆ ನೀಡಿದ ಕನಸುಗಳು, ದರ್ಶನಗಳು, ನಿಶ್ಚಯವಾಗಿ ನೆರೆವೇರುವವು. ಸನ್ನಿವೇಶಗಳು ನನಗೆ ಎಷ್ಟೇ ವಿರೋಧವಾಗಿದ್ದರೂ ಕರ್ತನು ಒಂದು ದಿನ, ನನ್ನ ದುಃಖವನ್ನು ಸಂತೋಷವಾಗಿ ಮಾರ್ಪಡಿಸುವನು ಎಂಬುದೇ, ಮೂಲಕಾರಣ. "ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ, ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ" (ರೋಮಾ 8:28). ಯೋಸೇಫನು ಬೇಸರಗೊಳ್ಳದೇ ಇದ್ದದ್ದರಿಂದ, ಖೈದಿಯ ಸ್ಥಿತಿ ಮಾರ್ಪಟ್ಟು, ಐಗುಪ್ತದ ಮೇಲಧಿಕಾರಿಯಾಗಿ ಉನ್ನತ ಸ್ಥಾನಕ್ಕೆ ಎತ್ತಲ್ಪಟ್ಟನು. ಅವನಿಗೆ ಕೇಡು ಬಯಸಿದ, ಅವನ ಅಣ್ಣಂದಿರು, ಅವನ ಮುಂದೆ ಸಾಷ್ಟಾಂಗವೆರಗಿ, ಧಾನ್ಯವನ್ನು ಖರೀದಿಸಲು ಬಂದರು. ಅವನು 30ನೇ ವಯಸ್ಸಿನಲ್ಲಿ ಅವನ ಕಷ್ಟ ಸಂಕಟಗಳು ಮುಗಿಯಿತು, ಆ ಮೇಲೆ 80 ವರ್ಷಗಳವರೆಗೆ ಅವನು ಉನ್ನತ ಸ್ಥಿತಿಯಲ್ಲಿದ್ದನು. ನಂತರ ತನ್ನ 110 ನೇ ವಯಸ್ಸಿನಲ್ಲಿ ಅವನು ಮರಣ ಹೊಂದುವವರೆಗೆ ತನ್ನ ಸಹೋದರರಿಗೆ ಸಹಾಯ ಮಾಡಿದನು.

ದೇವಮಕ್ಕಳೇ, ಯೋಸೇಫನಿಗೆ ಕನಸುಗಳನ್ನೂ, ದರ್ಶನಗಳನ್ನೂ ಯಾಕೆ ಕೊಟ್ಟನು? ಹೌದು, ಅದನ್ನು ದೃಢವಾಗಿ ಹಿಡಿದುಕೊಂಡು, ಬೇಸರದ ದಿನಗಳಲ್ಲಿ ಮುಂದೆ ಸಾಗಬೇಕು, ಪ್ರಯತ್ನವನ್ನು ಬಿಡದೆ ಕರ್ತನ ಮೇಲೆ ವಿಶ್ವಾಸದಿಂದ ಇರಬೇಕು. ಎಂಬುದಕ್ಕಾಗಿಯೇ.

**ನೆನಪಿಗೆ : ‘ನಿನ್ನ ಭೂಯಾತ್ರೆಯ ಚಿಂತೆಯನ್ನು ಯೆಹೋವನಿಗೆ ವಹಿಸಿಬಿಟ್ಟು ಭರವಸದಿಂದಿರು; ಆತನೇ ಅದನ್ನು ಸಾಗಿಸುವನು’ (ಕೀರ್ತನೆ 37:5).**

**ಡಿಸೆಂಬರ್ 11** | **ಬಿಟ್ಟುಬಿಡಬೇಡಿ!** | **ಬೆಳಗ್ಗೆ : ಹೋಶೇ 5,6,7,8 ಸಂಜೆ : ಪ್ರಕ 2**

**'ಹಾಗಾದರೆ, ನಿಮ್ಮ ಧೈರ್ಯವನ್ನು ಬಿಟ್ಟು ಬಿಡಬೇಡಿರಿ; ಅದಕ್ಕೆ ಮಹಾ ಪ್ರತಿಫಲ ಉಂಟು'** (ಇಬ್ರಿ 10:35).

ಸೇವೆಯನ್ನು ಬಿಟ್ಟುಬಿಡುವೆನೇನೋ? ಎಂಬ ಬೇಸರಿಕೆ ಬಹುದೊಡ್ಡ ಪ್ರವಾದಿಯಾದ ಎಲೀಯನಿಗೂ ಬಂದಿತು. ಆತನು "ಇಸ್ರಾಯೇಲಿನ ಅಗ್ನಿರಥ" ಎಂದು ಕರೆಯಲ್ಪಟ್ಟನು. ಆತನು ಆಡಿದ ಮಾತುಗಳು ಅಗ್ನಿ ಜ್ವಾಲೆಯಂಥವುಗಳು. "ನಾನು ಸೂಚಿಸಿದ ಹೊರತು ಇಂದಿನಿಂದ ಕೆಲವು ವರುಷಗಳವರೆಗೆ ಮಳೆಯಾಗಲಿ ಮಂಜಾಗಲಿ ಬೀಳುವದಿಲ್ಲ" ಅಂದನು (1ಅರ 17:1). ಹಾಗೆಯೇ ಮಳೆಯಾಗಲಿ ಮಂಜಾಗಲಿ ಸಮಾರ್ಯ ಪಟ್ಟಣದಲ್ಲಿ ಬೀಳಲಿಲ್ಲ.

ಅಂಥಹ ಪ್ರವಾದಿಯೂ ಕೂಡ ಬೇಸರಕ್ಕೆ ಒಳಗಾದನು. ಬೇಸರ ಎಂಬುದು ಸೈತಾನನ ಬಲವಾದ ಆಯುಧ. ಅದು ಚಿಕ್ಕ ಚಿಕ್ಕ ಸೇವಕರುಗಳನ್ನೂ ಮಾತ್ರವಲ್ಲ, ದೊಡ್ಡ ದೊಡ್ಡ ದೇವ ಸೇವಕರನ್ನೂ ತಾಕದೆ ಬಿಡುವದಿಲ್ಲ. ಜೀವಿತದಲ್ಲಿ ಬೇಸರವನ್ನು ಸಂಧಿಸದ ವಿಶ್ವಾಸಿಯನ್ನೋ ದೇವ ಸೇವಕರನ್ನೋ ನೋಡಲು ಸಾಧ್ಯವೇ ಇಲ್ಲ. ಒಂದು ತಮಾಷೆಯಾದ ಕಥೆ ಉಂಟು, ಒಮ್ಮೆ ಮಿಕಾಯೇಲ್ ದೇವದೂತನು, ಸೈತಾನನ ಆಯುಧಗಳನ್ನೆಲ್ಲಾ ಕಿತ್ತುಕೊಂಡು ಹೋಗಲು ಇಳಿದು ಬಂದನು. ಭಯಗೊಂಡ ಸೈತಾನನು "ನನ್ನಲ್ಲಿರುವ ಎಲ್ಲಾ ಆಯುಧಗಳನ್ನೂ ಕೊಟ್ಟು ಬಿಡುವೆನು, ಬೇಸರಿಕೆಯೆಂಬ ಆಯುಧ ಮಾತ್ರ ನನ್ನಲ್ಲಿರಲಿ. ನನಗೆ ಅದು ಮಾತ್ರ ಸಾಕು" ಎಂದು ಹೇಳಿದನಂತೆ, ಹೌದು, "ಬೇಸರಿಕೆ" ಅಥವಾ "ಮನಗುಂದುವಿಕೆ" ಎಂಬ ಆಯುಧದ ಮೂಲಕ ಎಂಥವರನ್ನೂ ಬೀಳಿಸಬಹುದೆಂಬುದು ಅವನ ನಂಬಿಕೆ.

ಎಲೀಯನು ಆಕಾಶದಿಂದ ಅಗ್ನಿ ಇಳಿಯುವಂತೆ ಮಾಡಿದ್ದನ್ನು ಬಾಳನ ಪ್ರವಾದಿಗಳು ಕೊಲ್ಲಲ್ಪಟ್ಟದನ್ನೂ ಕೇಳಿದ ಇಜಬೇಲ್ ರಾಣಿಯು ಎಲೀಯನ ಬಳಿಗೆ ದೂತನನ್ನು ಕಳುಹಿಸಿ – ನೀನು ಪ್ರವಾದಿಗಳ ಪ್ರಾಣ ತೆಗೆದಂತೆ ನಾಳೆ ಇಷ್ಟು ಹೊತ್ತಿಗೆ ನಿನ್ನ ಪ್ರಾಣವನ್ನು ತೆಗೆಯುತ್ತೇನೆಂದು ಹೇಳಿ ಕಳುಹಿಸಿದಳು. ಅದನ್ನು ಕೇಳಿದ ಎಲೀಯನಲ್ಲಿ ಭಯ ಆವರಿಸಿಕೊಂಡಿತು. ಇಜಬೇಲಳಿಗೆ ಹೆದರಿ, ಯೆಹೂದದ ಬೇರ್ಷೆಬಕ್ಕೆ ಬಂದು ಅಲ್ಲಿ ತನ್ನ ಸೇವಕನನ್ನು ಬಿಟ್ಟು, ಅರಣ್ಯದೊಳಗೆ ಒಂದು ದಿನದಷ್ಟು ಪ್ರಯಾಣ ಮಾಡಿ ಜಾಲಿಗಿಡದ ಕೆಳಗೆ ಕುಳಿತು, ಮರಣವನ್ನು ಅಪೇಕ್ಷಿಸಿದನು. ಆದರೆ, ಪ್ರೀತಿಯುಳ್ಳ ದೇವರು ದೇವದೂತನನ್ನು ಕಳುಹಿಸಿ ಎಲೀಯನನ್ನು ಬಲಪಡಿಸಿದನು, ಧೈರ್ಯಪಡಿಸಿದನು. ಬೇಸರದಿಂದ ಸೋತುಹೋಗಿದ್ದ ಎಲೀಯನನ್ನು ಕರ್ತನು ಪುನಃ ಸೇವೆಯಲ್ಲಿ ನೆಲೆಗೊಳಿಸಿದನು.

ದೇವಮಕ್ಕಳೇ, ಕಷ್ಟ ಸಂಕಟಗಳಲ್ಲಿ ಬೆಂದು ಬೇಸರಗೊಂಡಿರುವಿರಾ? ಎದ್ದೇಳಿರಿ, ಧೈರ್ಯಗೊಳ್ಳಿರಿ, ಕರ್ತನು ನಿಮ್ಮನ್ನು ಉತ್ಸಾಹಗೊಳಿಸಿ ಬಲಪಡಿಸುವನು. ದೇವರಾತ್ಮನಿಂದ ನಿಮ್ಮನ್ನು ತುಂಬಿಸುವನು! ಒಂದು ಅದ್ಭುತವನ್ನು ಮಾಡುವನು.

**ನೆನಪಿಗೆ : 'ಯೆಹೋವನು ಬಿದ್ದವರನ್ನೆಲ್ಲಾ ಎತ್ತುವವನೂ ಕುಗ್ಗಿದವರನ್ನೆಲ್ಲಾ ಉದ್ಧರಿಸುವವನೂ ಆಗಿದ್ದಾನೆ (ಕೀರ್ತ 145:14)**



**ಡಿಸೆಂಬರ್ 12** | **ಎರಡರಷ್ಟು ಭಾಗ್ಯ ಬೇಕಾ?** | **ಬೆಳಗ್ಗೆ : ಹೋಶೇ 9,10,11 ಸಂಜೆ : ಪ್ರಕ 3**

**'ಯೋಬನು ತನ್ನ ಸ್ನೇಹಿತರಿಗೋಸ್ಕರ ಪ್ರಾರ್ಥಿಸಿದ ಬಳಿಕ....ಅವನ ಸೊತ್ತನ್ನು ಮೊದಲಿಗಿಂತ ಎರಡರಷ್ಟಾಗಿ ಹೆಚ್ಚಿಸಿದನು' (ಯೋಬ 42:10).**

ಯೋಬನಂತೆ ಕಷ್ಟಗಳ ಹಾದಿಯಲ್ಲಿ ನಡೆದ ಬೇರೊಬ್ಬರನ್ನು ನೋಡಲು ಸಾಧ್ಯವೇ ಇಲ್ಲ. ಸೈತಾನನು ಯೋಬನಿಗೆ ವಿರೋಧವಾಗಿ ಕೇಡು ಕಲ್ಪಿಸಿ ಅವನನ್ನು ಭಯಂಕರವಾಗಿ ಶೋಧಿಸಿದನು. ಅವನ ಮನೆ ಮುರಿದು ಬಿತ್ತು. ಅದರಲ್ಲಿದ್ದ ಅವನ ಹತ್ತು ಮಂದಿ ಮಕ್ಕಳಲ್ಲಿ ಒಬ್ಬರೂ ಉಳಿಯದಂತೆ ಮರಣ ಹೊಂದಿದರು.

ನಂತರ ಸೈತಾನನು ಯೋಬನ ಅಂಗಾಲು ಮೊದಲುಗೊಂಡು ನಡುನೆತ್ತಿಯವರೆಗೂ ಕೆಟ್ಟಕುರಗಳನ್ನು ಹುಟ್ಟಿಸಿ ಅವನನ್ನು ಬಾಧಿಸಿದನು. ಯೋಬನು ಒಂದು ಬೋಕಿಯನ್ನು ತೆಗೆದುಕೊಂಡು ತನ್ನ ಮೈಯನ್ನು ಕೆರೆದುಕೊಳ್ಳುತ್ತಾ ಬೂದಿಯಲ್ಲಿ ಕುಳಿತುಕೊಂಡನು. ಇದೆಲ್ಲವನ್ನು ಗಮನಿಸುತ್ತಿದ್ದ ಯೋಬನ ಹೆಂಡತಿ ಅವನಿಗೆ ನಿನ್ನ ಯಥಾರ್ಥತ್ವವನ್ನು ಇನ್ನೂ ಬಿಡಲಿಲ್ಲವೋ? ದೇವರನ್ನು ದೂಷಿಸಿ ಸಾಯಿ ಎಂದು ಹೇಳಿದಳು. ಇಷ್ಟೆಲ್ಲಾ ಅನುಭವಿಸಿದರೂ "ಯೆಹೋವನೇ ಕೊಟ್ಟನು ಯೆಹೋವನೇ ತೆಗೆದುಕೊಂಡನು. ಕರ್ತನ ನಾಮಕ್ಕೆ ಸ್ತೋತ್ರವಾಗಲಿ ಎಂದು ಹೇಳಿದನು. ಯೋಬನು ಇದೆಲ್ಲದರಲ್ಲಿಯೂ ಪಾಪಮಾಡಲಿಲ್ಲ ದೇವರ ಮೇಲೆ ತಪ್ಪು ಹೊರಿಸಲೂ ಇಲ್ಲ. ""ಆತನು ನನ್ನನ್ನು ಕೊಲ್ಲುವನು, ಅದಕ್ಕಾಗಿ ಕಾದಿರುತ್ತೇನೆ ಆದರೂ ನನ್ನ ನಡತೆಯ ಒಳ್ಳೇತನವನ್ನು ಆತನ ಮುಂದೆ ಸ್ಥಾಪಿಸುವೆನು" (ಯೋಬ 13:15). ಹಾಗೂ ಮತ್ತೆ ಹೀಗೆ ಹೇಳಿದನು "ಆತನಾದರೋ ನನ್ನ ದಾರಿಯನ್ನು ಬಲ್ಲನು. ಆತನೇ ನನ್ನನ್ನು ಶೋಧಿಸಿ ನೋಡಿದರೆ ಚೊಕ್ಕ ಬಂಗಾರವಾಗಿ ಕಾಣಿಸುವೆನು" (ಯೋಬ 23:10).

ಶರೀರ ವೇದನೆಗಿಂತಲೂ, ಅಧಿಕ ವೇದನೆಯಾದದ್ದು ಮನಸ್ಸಿನ ನೋವು. ಬೋಧಕರಾದ ರಿಚರ್ಡ್ ಉಂಬ್ರಾಂಡ್‌ರವರು, ಹದಿನಾಲ್ಕು ವರುಷ ತಮ್ಮ ನಂಬಿಕೆಯ ನಿಮಿತ್ತ ಕ್ರಿಸ್ತನ ಮೇಲೆ ಇಟ್ಟಿದ್ದ ಪ್ರೀತಿಯ ನಿಮಿತ್ತ, ಚಿತ್ರವಧೆಗಳನ್ನು ಅನುಭವಿಸಿದರು. ಅವರನ್ನು ಬಹಳವಾಗಿ ಅವಹೇಳನ, ಪರಿಹಾಸ್ಯಕ್ಕೆ ಕಮ್ಯೂನಿಸ್ಟ್ ಸರ್ಕಾರ ಒಳಪಡಿಸಿತು. ಸೆರೆಮನೆಯಲ್ಲಿದ್ದ ಖೈದಿಗಳೆಲ್ಲಾ, ಅವರ ತಲೆಯ ಮೇಲೆ ಮೂತ್ರ ವಿಸರ್ಜಿಸುವಂತೆ ಮಾಡಿದರು. ಆಗ ಅವರು ಬಹಳವಾಗಿ ಮನಗುಂದಿದವರಾದರು ದೇವರೇ ಭೂಮ್ಯಾಕಾಶಗಳ ಮೇಲೆ ಅಧಿಕಾರವುಳ್ಳ ದೇವರೇ, ಏಕೆ ನನ್ನ ಕೈಬಿಟ್ಟರು? ಕರ್ತನನ್ನು ಬೊಂಕಿ, ಬಿಡುಗಡೆ ಪಡೆದರೆ ಹೇಗೆ? ಎಂದು ಯೋಚಿಸುವ ಸ್ಥಿತಿಗೆ ತಲುಪಿದರು. ಆಗ ಅವರ ಹೆಂಡತಿ, ಅಯ್ಯಾ ಒಂದು ಸ್ಥಳದಲ್ಲಿ ಸ್ವಲ್ಪ ಬೆಂಕಿ ಉರಿಯುತ್ತಿದ್ದರೆ ಶೋಧನೆ ಎಂಬ ಗಾಳಿ ಆ ಬೆಂಕಿಯನ್ನು ಆರಿಸಿ ಬಿಡುವದು. ಆದರೆ, ಕರ್ತನು ನಿಮ್ಮೊಳಗೆ ಹಾಕಿರುವ ಪವಿತ್ರಾತ್ಮವೆಂಬ ಅಗ್ನಿ ಬಹಳ ದೊಡ್ಡದು, ಶೋಧನೆಯ ಸಮಯದಲ್ಲಿ ನೀವು ಅಧಿಕವಾಗಿ ಹತ್ತಿ ಉರಿಯುವಂತೆ, ದೇವರಾತ್ಮನು ಸಹಾಯ ಮಾಡುವನೇ ಹೊರತು ನಿಮ್ಮೊಳಗಿರುವ ಅಗ್ನಿಯನ್ನು ಆರಲು ಬಿಡುವದಿಲ್ಲ ಎಂದು ಪ್ರೋತ್ಸಾಹ ಪಡಿಸಿದಳು.

ಪ್ರಿಯರೇ ಶೋಧನೆಯ ಸಮಯದಲ್ಲಿ ಕರ್ತನನ್ನೇ ಆಶ್ರಯಿಸಿರಿ ಆತನು ರಕ್ಷಿಸುವನು.

**ನೆನಪಿಗೆ : 'ಸುನಿರೀಕ್ಷೆಯುಂಟಾದ ಸೆರೆಯವರೇ, ನಿಮ್ಮ ದುರ್ಗಕ್ಕೆ ಹಿಂದಿರುಗಿರಿ; ನಿಮಗೆ ಎರಡರಷ್ಟು ಸುಖವನ್ನು ದಯಪಾಲಿಸುವೆನು' (ಜೆಕರ್ಯ 9:12).**

**ಡಿಸೆಂಬರ್ 13**

# ಬಲಪಡಿಸಿಕೊಂಡನು!

**ಬೆಳಗ್ಗೆ : ಹೋಶೇ 12,13,14**
**ಸಂಜೆ : ಪ್ರಕ 4**

**'ದಾವೀದನು ತನ್ನ ದೇವರಾದ ಯೆಹೋವನಲ್ಲಿ ತನ್ನನ್ನು ಬಲಪಡಿಸಿಕೊಂಡನು' (1ಸಮು 30:7).**

ದಾವೀದನ ಜೀವಿತದಲ್ಲಿ, ಒಮ್ಮೆ, ಬಹಳ ಭಯಂಕರವಾದ ತೊಂದರೆಗಳು ಬಂದವು, ಸಹಿಸಲಾಗದ ದುಃಖ ಉಂಟಾಯಿತು. ದಾವೀದನು ಇಲ್ಲದ ಸಮಯದಲ್ಲಿ, ಅವನು ಅವನ ಸಂಗಡಿಗರೂ ನೆಲೆಸಿದ್ದ ಚಿಕ್ಲಗ್ ಎಂಬ ಊರನ್ನು ಅಮಾಲೇಕ್ಯರು ಮುತ್ತಿಗೆ ಹಾಕಿ, ಅಲ್ಲಿದ್ದ ದಾವೀದನ ಹೆಂಡತಿ ಮಕ್ಕಳನ್ನೂ, ಇತರ ಎಲ್ಲಾ ಹೆಂಗಸರು ಮಕ್ಕಳನ್ನು ಸೆರೆಹಿಡಿದು ಕೊಳ್ಳೆ ಹೊಡೆದು, ಊರಿಗೆ ಬೆಂಕಿಹಚ್ಚಿ ಹೊರಟು ಹೋದರು. ದಾವೀದನೂ ಹಿಂದುರಿಗಿ ಬಂದು ನಡೆದ ಸಂಗತಿಯನ್ನು ಕಂಡಾಗ ಬಹಳವಾಗಿ ದುಃಖಕ್ಕೆ ಒಳಗಾದನು. ಅವನ ಸಂಗಡಿಗರು ಅವನ ಮೇಲೆ ಕೋಪಾವಿಷ್ಟರಾದರು.

ಆಗ ದಾವೀದನು, ಶತ್ರುವನ್ನು ಜಯಿಸಲು, ಮೂರು ಕಾರ್ಯಗಳನ್ನು ಮಾಡಿದನು. ಮೊದಲನೆಯದಾಗಿ, ಅವನು ಕರ್ತನಲ್ಲಿ ತನ್ನನ್ನು ಬಲಪಡಿಸಿಕೊಂಡನು. ಎರಡನೆಯದಾಗಿ, ಯಾಜಕರ ಬಳಿಗೂ, ಕರ್ತನ ಬಳಿಗೂ ಹೋಗಿ ಆಲೋಚನೆ ಕೇಳಿದನು. ಕರ್ತನು ಉತ್ತರ ಕೊಟ್ಟು ಅವರನ್ನು "ಹಿಂದಟ್ಟು, ಅದು ನಿನಗೆ ಸಿಕ್ಕುವದು ನೀನು ಎಲ್ಲರನ್ನೂ ಬಿಡಿಸಿಕೊಂಡು ಬರುವಿ" ಎಂದು ಹೇಳಿದನು (1ಸಮು 30:8). ಮೂರನೆಯದಾಗಿ, ದಾವೀದನೊಂದಿಗೆ ಹೋದ, ಆರುನೂರು ಮಂದಿಯಲ್ಲಿ, ಇನ್ನೂರು ಮಂದಿ ಆಯಾಸಗೊಂಡು ಮಧ್ಯದಲ್ಲೇ ನಿಂತು ಬಿಟ್ಟರು. ಆದಾಗ್ಯೂ ದಾವೀದನು ಉಳಿದ ನಾನೂರು ಮಂದಿಯೊಂದಿಗೆ ಹೋಗಿ, ಅಮಾಲೇಕ್ಯರನ್ನು ಸೋಲಿಸಿ, ಸೆರೆ ಒಯ್ದಿದ್ದ ಎಲ್ಲರನ್ನೂ ಬಿಡಿಸಿದನು. ಅವರು ಕೊಳ್ಳೆ ಹೊಡೆದುಕೊಂಡು ಹೋಗಿದ್ದೆಲ್ಲವನ್ನೂ ಹಿಂದಕ್ಕೆ ಪಡೆದನು (1ಸಮು 30:19). ಶೋಧನೆಯ ಸಮಯದಲ್ಲಿಯೂ, ಬಲಹೀನಗೊಂಡ ಸಮಯದಲ್ಲಿಯೂ, ನೀವು ಹೇಗೆ ನಡೆದುಕೊಳ್ಳುತ್ತೀರಿ ಎಂಬುದನ್ನು ಕರ್ತನು ಗಮನಿಸುತ್ತಾನೆ, ಮೇಣದ ಬತ್ತಿಯ ಬಳಿ ಬೆಂಕಿಯನ್ನು ತಂದರೆ ಅದು ಕರಗಿ ನೀರಾಗುವದು. ಆದರೆ ಜೇಡಿಮಣ್ಣಿನ ಬಳಿ ತಂದರೆ ಅದು ಸುಟ್ಟು ಇನ್ನೂ ಗಟ್ಟಿಯಾಗುವದು, ಅದರಂತೆಯೇ ನೀವು ಶೋಧನೆ, ಇಕ್ಕಟ್ಟಿನ ಸಮಯದಲ್ಲಿ ಮನಗುಂದಿ ಹೋಗದೆ ಕರ್ತನಲ್ಲಿ ವೈರಾಗ್ಯ ಉಳ್ಳವರಾಗಿ ಎದ್ದೇಳಬೇಕು.

ದೇವಮಕ್ಕಳೇ, ಬೇಸರಗೊಳ್ಳಬೇಡಿರಿ, ಮನಗುಂದಿಹೋಗಬೇಡಿರಿ, ಬೇಸರ ಹಾಗೂ ಮನಗುಂದುವಿಕೆಯನ್ನು ಜಯಿಸಲು **ಮೊದಲನೆಯದಾಗಿ,** ನಿಮ್ಮನ್ನು ಕರ್ತನಲ್ಲಿ ಬಲಪಡಿಸಿಕೊಳ್ಳಿರಿ. ಜ್ಞಾನೋ 24:10 ರಲ್ಲಿ "ಇಕ್ಕಟ್ಟಿನ ದಿನದಲ್ಲಿ ನೀನು ಬಳಲಿ ಹೋದರೆ, ನಿನ್ನ ಬಲವೂ ಇಕ್ಕಟ್ಟೇ". **ಎರಡನೆಯದಾಗಿ,** ಕರ್ತನಿಗೆ ಮೊರೆಯಿಡಿರಿ "ಕಷ್ಟಕಾಲದಲ್ಲಿ ನನಗೆ ಮೊರೆಯಿಡಿರಿ; ಬಿಡಿಸುವೆನು" (ಕೀರ್ತ 50:15). **ಮೂರನೆಯದಾಗಿ,** ಕರ್ತನ ವಾಗ್ದಾನಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಕೇಳಿರಿ, ಜಯವು ನಿಮ್ಮದೇ!

**ನೆನಪಿಗೆ : 'ದೇವರು ನಮ್ಮ ಕಡೆ ಇದ್ದರೆ, ನಮ್ಮನ್ನು ಎದುರಿಸುವವರು ಯಾರು?' (ರೋಮಾ 8:31).**



**ಡಿಸೆಂಬರ್ 14**

# ಮಾತಿನಂತೆ....!

**ಬೆಳಗ್ಗೆ : ಯೋವೇಲ 1,2,3**
**ಸಂಜೆ : ಪ್ರಕ 5**

**'ಆದರೆ, ನಿನ್ನ ಮಾತಿನ ಮೇಲೆ ಬಲೆಗಳನ್ನು ಹಾಕುತ್ತೇನೆ ಅಂದನು' (ಲೂಕ 5:5).**

ಪೇತ್ರನು ಬೆಸ್ತರ ಕುಟುಂಬದಲ್ಲಿ ಹುಟ್ಟಿ ಬೆಳದಿದ್ದರೂ ಆ ರಾತ್ರಿಯೆಲ್ಲಾ, ಪ್ರಯಾಸಪಟ್ಟರೂ ಒಂದು ಮೀನಾದರೂ, ಹಿಡಿಯಲು ಸಿಗಲಿಲ್ಲ. ಬರಿಗೈಲಿ ಹೋದರೆ ಅಂದಿನ ಊಟಕ್ಕೆ ಏನೂ ಇಲ್ಲದೆ, ಕುಟುಂಬ ಉಪವಾಸವಿರಬೇಕಾದ ಪರಿಸ್ಥಿತಿ, ಅಂಥಹ ಸಂದಿಗ್ಧ ಪರಿಸ್ಥಿತಿಯ ಸಮಯದಲ್ಲಿ ಯೇಸುಕ್ರಿಸ್ತನು ಕೆರೆಯ ದಂಡೆಗೆ ಬಂದಿದ್ದನು.

ಯೇಸುಕ್ರಿಸ್ತನು ಪೇತ್ರನ ದೋಣಿಯನ್ನು ಹತ್ತಿ ದೋಣಿಯನ್ನು ದಡದಿಂದ ಸ್ವಲ್ಪ ದೂರ ನೂಕಬೇಕೆಂದು ಕೇಳಿಕೊಂಡನು. ಪೇತ್ರನ ದೋಣಿಯಲ್ಲಿ ಕುಳಿತು ಜನರಿಗೆ ಉಪದೇಶ ಮಾಡಿದನು. ಒಂದು ವೇಳೆ ಪೇತ್ರನು ಹೀಗೆ ಯೋಸಿದ್ದಿರಬಹುದು "ರಾತ್ರಿಯೆಲ್ಲಾ ಮೀನು ಸಿಗದೆ ಸೋತಿದ್ದೇನೆ ಆಯಾಸಗೊಂಡಿದ್ದೇನೆ ಹೀಗಿರುವಾಗ ಯೇಸು ನನ್ನ ದೋಣಿಯನ್ನು ಹತ್ತಿ ಕುಳಿತು ಬೋಧನೆ ಮಾಡುತ್ತಿರುವನು ಇದು ಎಂಥಹ ಭಕ್ತಿ? ನನಗೆ ಏನೂ ಕೊಡದ ದೇವರಿಗೆ, ನಾನು ಯಾಕೆ ನನ್ನ ದೋಣಿಯನ್ನು ಕೊಡಬೇಕು? ನಾನು ಯಾಕೆ ಉಪದೇಶ ಮುಗಿಯುವವರೆಗೂ ಕಾದಿರಬೇಕು? ಈ ಭಕ್ತಿಯಿಂದ ನನಗೇನು ಪ್ರಯೋಜನ?" ಎಂದು.

ಯೇಸುಕ್ರಿಸ್ತನು ಪ್ರಸಂಗಿಸಿದ ಮೇಲೆ, ಪೇತ್ರನ ಸೋಲನ್ನು ಜಯವಾಗಿ ಮಾರ್ಪಡಿಸಿದನು. ತನಗಾಗಿ ಪ್ರೀತಿಯಿಂದ ದೋಣಿಯನ್ನು ನೀಡಿ ಸಹಾಯ ಮಾಡಿದ ಪೇತ್ರನಿಗೆ ಉಪಕಾರ ಮಾಡಬೇಕೆಂದು ಕರ್ತನು ಬಯಸಿದನು. ಪೇತ್ರನನ್ನು ನೋಡಿ, ಆಳವಾದ ಸ್ಥಳಕ್ಕೆ ದೋಣಿಯನ್ನು ನಡೆಸಿಕೊಂಡುಹೋಗಿ ಬಲೆಯನ್ನು ಹಾಕುವಂತೆ ಹೇಳಿದನು. ಅದಕ್ಕೆ ಪೇತ್ರನು ಗುರುವೇ, ನಾವು ರಾತ್ರಿಯೆಲ್ಲಾ ಪ್ರಯಾಸಪಟ್ಟರೂ ಏನೂ ಸಿಗಲಿಲ್ಲ, ಆದರೆ ನಿನ್ನ ಮಾತಿನ ಮೇಲೆ ಬಲೆಗಳನ್ನು ಹಾಕುತ್ತೇನೆ ಎಂದು ಹೇಳಿ ಬಲೆ ಬೀಸಲು, ಮೀನುಗಳು ರಾಶಿರಾಶಿಯಾಗಿ ಸಿಕ್ಕಿಕೊಂಡು ಬಲೆ ಹರಿದು ಹೋದವು (ಲೂಕ 5:3–6). ಒಂದು ವೇಳೆ ಪೇತ್ರನು ಬೇಸರಗೊಂಡು, ಮನಗುಂದಿದವನಾಗಿ, ಕರ್ತನ ಮಾತನ್ನು ಅಸಡ್ಡೆ ಮಾಡಿದ್ದಿದ್ದರೆ, ಮೀನುಗಳನ್ನು ಹಿಡಿಯಲಾಗುತ್ತಿರಲಿಲ್ಲ.

ದೇವಮಕ್ಕಳೇ, ನೀವು ನಿಮ್ಮನ್ನು ದೃಢಪಡಿಸಿಕೊಂಡು ಕರ್ತನ ಮಾತಿನಂತೆಯೇ ನಡೆಯಲು ತೀರ್ಮಾನಿಸಿರಿ, ನೀವು ಕರ್ತನ ಸೇವೆಗಳಿಗಾಗಿ ಸೇವಕರಿಗಾಗಿ ಆತನನ್ನು ಪ್ರೀತಿಸುವವರಿಗಾಗಿ ಏನಾದರೂ ಒಂದು ಸಹಾಯ ಮಾಡಿದರೆ ಅದು ನಿಮಗೂ ನಿಮ್ಮ ಕುಟುಂಬಕ್ಕೂ ನಿಶ್ಚಯವಾಗಿ ಆಶೀರ್ವಾದ ಉಂಟಾಗುತ್ತದೆ. (ಮತ್ತಾಯ 10:42). ಭೂಮ್ಯಾಕಾಶಗಳು ಅಳಿದು ಹೋದರೂ, ಕರ್ತನ ಮಾತು ಅಳಿದುಹೋಗದು. "ನಿನ್ನ ಮಾತಿನಂತೆ ನಡೆಯಲು ನನ್ನನ್ನು ಒಪ್ಪಿಸಿಕೊಡುತ್ತೇನೆ" ಎಂದು ಹೇಳಿರಿ. ಕರ್ತನ ಮಾತು ಆತ್ಮವೂ, ಜೀವವೂ ಆಗಿರುವದು ಆತನ ಮಾತು ನಿಶ್ಚಯವಾಗಿ ನೆರವೇರುವದು.

**ನೆನಪಿಗೆ : 'ನಂಬಿದವಳಾದ ನೀನು ಧನ್ಯಳೇ; ಕರ್ತನು ನಿನಗೆ ಹೇಳಿದ ಮಾತುಗಳು ನೆರವೇರುವವು ಅಂದಳು' (ಲೂಕ 1:45).**

ಡಿಸೆಂಬರ್ 15 | **ಮನಗುಂದದರೆ!** | ಬೆಳಿಗ್ಗೆ : ಆಮೋಸ 1,2,3 ಸಂಜೆ : ಪ್ರಕ 6

**'ಅಮ್ಮೋನಿಯನಾದ ಟೋಬೀಯನು ಅವರು ಕಟ್ಟುವ ಕಲ್ಲು ಗೋಡೆಯ ಮೇಲೆ ನರಿ ಹಾರಿದರೆ ಅದು ಬಿದ್ದು ಹೋಗುವದು ಅಂದನು' (ನೆಹೆ 4:3).**

ನೆಹೆಮಿಾಯನು, ಯೆರೂಸಲೇಮ್ ಗೋಡೆಯನ್ನು ಕಟ್ಟುವಾಗ, ಅವನಿಗೆ ವಿರೋಧವಾದ ಶಕ್ತಿಗಳು ಎದ್ದವು. ಟೋಯನೂ, ಸನ್ಬಲ್ಲನು ಗೋಡೆಕಟ್ಟುವ ಯೆಹೂದ್ಯರನ್ನು ಗೇಲಿಮಾಡಿದರು "ನಿತ್ರಾಣಿಗಳಾದ ಈ ಯೆಹೂದ್ಯರು ಮಾಡುವವದೇನು?....ಧೂಳಿನ ರಾಶಿಯೊಳಗೆ ಹುದುಗಿ ಹೋದಕಲ್ಲುಗಳನ್ನು ಬದುಕಿಸುವರೇನೋ" ಎಂದು ಹೇಳಿಯೆಹೂದ್ಯರನ್ನು ಗೇಲಿ ಮಾಡಿದನು" (ನೆಹೆ 4:2).

ನೆಹೆಮಿಾಯನು ಕಷ್ಟಕರವಾದ ಕಾರ್ಯವನ್ನು ಮಾಡಲು ಪ್ರಯಾಸಪಟ್ಟರೂ, ಸಹಾಯ ಹಸ್ತಗಳಿಲ್ಲದ ಪರಿಸ್ಥಿತಿಯಲ್ಲಿ, ಎಲ್ಲಾ ಕಡೆಯಿಂದಲೂ, ಅವನನ್ನು ಇಕ್ಕಟ್ಟಿಗೆ ಸಿಕ್ಕಿಸಿದರು. ಆದರೆ ನೆಹೆಮಿಾಯನೋ, ಮನಗುಂದದೆ, ತನ್ನ ಗುರಿಯನ್ನೂ, ಕರೆಯನ್ನೂಮಾತ್ರವೇ ದೃಷ್ಟಿಸುತ್ತಾ ಕಾರ್ಯೋನ್ಮುಖನಾದನು. ನೀವು ಯಥಾರ್ಥವಾಗಿ ಕರ್ತನಿಗೆಂದು, ಸೇವೆಗೆಂದು ಕಾರ್ಯೋನ್ಮುಖರಾಗುವಾಗ; ನಿಮ್ಮನ್ನು ಬೀಳಿಸಬೇಕೆಂದಿರುವ ಶಕ್ತಿಗಳು, ನಿಮಗೆ ವಿರೋಧವಾಗಿ ಹೋರಾಡುವವು. ಯಾರೇನು ಹೇಳಿದರೂ ಯಾರೇನು ಮಾಡಿದರೂ ನನಗೇನು? ನಾನು ಭಯಪಡುವದಿಲ್ಲ, ಕರ್ತನು ನನ್ನೊಂದಿಗಿರುವನು ಎಂಬ ದೃಢ ನಂಬಿಕೆಯಿಂದ ನೀವು ಮುಂದೆ ಇಟ್ಟಡಕಾಲನ್ನು ಹಿಂದೆ ತೆಗೆಯದೆ, ತೆಗೆದುಕೊಂಡ ಪ್ರಯತ್ನವನ್ನು ಬಿಡದೆ, ನೆಹೆಮಿಾಯನಂತೆ ಕಾರ್ಯೋನ್ಮುಖರಾಗಿರಿ.

ಕ್ರಿಸ್ತೀಯ ಓಟವನ್ನು ನಾವು ಓಡಿ ಮುಗಿಸಬೇಕಾಗಿದೆ. ಈ ಓಟವು ಬಹಳ ಪ್ರಯಾಸವಾದದ್ದೇ. ಈ ಲೋಕದ ಓಟಕ್ಕೂ, ಕ್ರಿಸ್ತೀಯ ಓಟಕ್ಕೂ ಒಂದು ವ್ಯತ್ಯಾಸ ಉಂಟು. ಈ ಪ್ರಪಂಚದ ಓಟದ ಪಂದ್ಯದಲ್ಲಿ ಮೊದಲು ಬರುವ ಇಬ್ಬರು ಅಥವಾ ಮೂವರು ಮಾತ್ರ ಬಹುಮಾನ ಪಡೆಯುವರು. ಆದರೆ ಕ್ರಿಸ್ತೀಯ ಓಟದ ಪಂದ್ಯದಲ್ಲಿ ಜಯಭರಿತವಾಗಿ ತಮ್ಮ ಓಟವನ್ನು ಓಡಿ ಮುಗಿಸುವ ಪ್ರತಿಯೊಬ್ಬರೂ ಬಹುಮಾನ ಪಡೆಯುವರು. ಅಪೊ.ಪೌಲನು ಹೇಳುತ್ತಾನೆ "ನೀವು ಬಿರುದನ್ನು ಪಡೆದುಕೊಳ್ಳಬೇಕೆಂದು ಓಡಿರಿ" ಎಂದು (1ಕೊರಿ 9:24). ಮಾತ್ರವಲ್ಲ ತನ್ನ ನಂಬಿಕೆಯೊಂದಿಗೆ ದೇವರ ಕೃಪೆಯನ್ನು ಆಶ್ರಯಿಸಿ ಹೀಗೆ ಹೇಳುತ್ತಾನೆ "ಅವರು ಬಾಡಿಹೋಗುವ ಜಯಮಾಲೆಯನ್ನು ಹೊಂದುವದಕ್ಕೆ ಸಾಧನೆ ಮಾಡುತ್ತಾರೆ; ನಾವಾದರೋ ಬಾಡಿಹೋಗದ ಜಯಮಾಲೆಯನ್ನು ಹೊಂದುವದಕ್ಕೆ ಸಾಧನೆ ಮಾಡುತ್ತೇವೆ....ನಾನು ಗಾಳಿಯನ್ನು ಗುದ್ದುವವನಾಗಿರದೆ ಗೆಲ್ಲಬೇಕೆಂದೇ ಗುದ್ದಾಡುತ್ತೇನೆ" ಎಂದು (1ಕೊರಿ 9:25,26).

ದೇವಮಕ್ಕಳೇ, ಯಾವದೇ ಸಂದರ್ಭ ಸನ್ನಿವೇಶಗಳಲ್ಲೂ ಕ್ರಿಸ್ತೀಯ ಓಟದಲ್ಲಿ ನೀವು ಬಾಡಿಹೋಗದ ಜಯಮಾಲೆಯನ್ನು ಪಡೆದುಕೊಳ್ಳುವವರೆಗೆ ಸೋತು ಹೋಗದೆ ನಿಮ್ಮ ಪ್ರಯತ್ನವನ್ನು ಕೈಬಿಡಬೇಡಿರಿ, Never never give up.

**ನೆನಪಿಗೆ : 'ನೀನು ತಾಳ್ಮೆಯುಳ್ಳವನಾಗಿ ನನ್ನ ಹೆಸರಿನ ನಿಮಿತ್ತ ಬಾಧೆಯನ್ನು ಸೈರಿಸಿಕೊಂಡು ಬೇಸರಗೊಳ್ಳಲಿಲ್ಲ; ಇದನ್ನೆಲ್ಲಾ ಬಲ್ಲೆನು' (ಪ್ರಕ 2:3).**



ಡಿಸೆಂಬರ್ 16 | **ಉಪದ್ರವದ ಮಾರ್ಗವಾಗಿ!** | ಬೆಳಿಗ್ಗೆ : ಆಮೋಸ 4,5,6 ಸಂಜೆ : ಪ್ರಕ 7

**'ನಾವು ಬಹಳ ಸಂಕಟಗಳನ್ನು ತಾಳಿ ದೇವರ ರಾಜ್ಯದೊಳಗೆ ಸೇರಬೇಕು' (ಅ.ಕೃ 14:22).**

ಪರಲೋಕ ರಾಜ್ಯವನ್ನು ನೆನಸಿಕೊಳ್ಳುವಾಗ ಹೃದಯ ಆನಂದ ಪರವಶಗೊಳ್ಳುವದು. ಅಲ್ಲಿ ಅಳು, ಕಣ್ಣೀರು, ಕಷ್ಟ, ಯಾವದೂ ಇಲ್ಲ, ಆ ದೇಶ, ದೇವ ಮಹಿಮೆಯಿಂದ ತುಂಬಿರುತ್ತದೆ. ಒಂದು ಎರಡು ದಿನವಲ್ಲ, ಕೋಟ್ಯಾನು ಕೋಟಿ ಯುಗಗಳು ತಂಗಿ ನೆಲೆಯಾಗಿರುವದು.

ಪಾತಾಳಕ್ಕೆ ಹೋಗಲು ಸಾವಿರಾರು ಮಾರ್ಗಗಳುಂಟು. ಆದರೆ ಪರಲೋಕಕ್ಕೆ ಒಂದೇ ಒಂದು ಮಾರ್ಗವಿರುವದು. ಆತನೇ ಯೇಸುಕ್ರಿಸ್ತನು. "ನಾನೇ ಮಾರ್ಗವೂ, ಸತ್ಯವೂ, ಜೀವವೂ ಆಗಿದ್ದೇನೆ, ನನ್ನ ಮೂಲಕವಾಗಿ ಹೊರತು, ಯಾರೂ ತಂದೆಯ ಬಳಿಗೆ ಬರುವದಿಲ್ಲ" (ಯೋಹಾ 14:6). "ನಾನೇ ಆ ಬಾಗಿಲು, ನನ್ನ ಮುಖಾಂತರವಾಗಿ ಯಾವನಾದರೂ ಒಳಗೆ ಹೋದರೆ, ಸುರಕ್ಷಿತವಾಗಿದ್ದು ಒಳಗೆ ಹೋಗುವನು, ಹೊರಗೆ ಬರುವನು. ಮೇವನ್ನು ಕಂಡುಕೊಳ್ಳುವನು" (ಯೋಹಾ 10:9). "ಇಕ್ಕಟ್ಟಾದ ಬಾಗಿಲಿನಿಂದ ಒಳಕ್ಕೆ ಹೋಗುವದಕ್ಕೆ ಹೆಣಗಾಡಿರಿ, ಬಹಳ ಜನ ಒಳಕ್ಕೆ ಹೋಗುವದಕ್ಕೆ ನೋಡುವರು, ಆದರೆ ಅವರಿಂದಾಗುವದಿಲ್ಲ" (ಲೂಕ 13:24) ಎಂದು ಕರ್ತನು ಹೇಳುತ್ತಾನೆ.

ಕೆಲವರು ರಕ್ಷಿಸಲ್ಪಟ್ಟು, ಪರಲೋಕ ಮಾರ್ಗದಲ್ಲಿ ನಡೆಯಲಾರಂಭಿಸುವರು. ಆದರೆ ಸ್ವಲ್ಪ ಇಕ್ಕಟ್ಟು, ತೊಂದರೆಗಳು ಬರುವಾಗ ಪ್ರಯತ್ನ ಮಾಡುವದನ್ನು ಕೈಬಿಟ್ಟು ಮನಗುಂದಿ ಹೋಗುವರು. ಪುನಃ ತಮ್ಮ ಹಳೆಯ ಜಾಡನ್ನು ಹಿಡಿದು ಕ್ರಿಸ್ತನಂಬಿಕೆಯಲ್ಲಿ ಹಿಂಜಾರಿ ಹೋಗುವರು. ಸೈತಾನನು ತಂತ್ರಗಾರನು. ಕಷ್ಟ, ಚಿಂತೆಗಳನ್ನು, ತಂದುಹಾಕಿ ವಿಶ್ವಾಸಿಯನ್ನು ಮನಗುಂದುವಂತೆ ಮಾಡುವನು. ನಂಬಿಕೆಯನ್ನು ಕುಂದಿಸುವನು. ಆದರೆ ಕರ್ತನು ಸೈತಾನನ ತಲೆಯನ್ನು ಕ್ರೂಜೆಯಲ್ಲಿ ತುಳಿದು ಹಾಕಿದ್ದಾನೆಂಬ ಸತ್ಯವನ್ನು ನೀವು ಮರೆಯಬಾರದು. ಅವನು ಸೋತುಹೋದ ಶತ್ರು, ಅವನು ರೂಪಿಸುವ ತಂತ್ರಗಳಿಗೆ, ಹೆದರುವ ಅವಶ್ಯವಿಲ್ಲ. ಜಯಕ್ರಿಸ್ತನು ನಿಮ್ಮ ಪಕ್ಕದಲ್ಲಿದ್ದು ನಿಮಗೆ ಸಹಾಯಮಾಡುವನು.

ದೇವಮಕ್ಕಳೇ, ಕಷ್ಟಗಳು ಸಮಸ್ಯೆಗಳು ಉಂಟಾಗುವಾಗ, ಕರ್ತನಲ್ಲಿ ಬಲಗೊಳ್ಳಿರಿ. "ನಿನ್ನ ಸೊಂಟವನ್ನು ಬಲಪಡಿಸಿಕೋ ನಿನ್ನ ಶಕ್ತಿಯನ್ನು ಚೆನ್ನಾಗಿ ದೃಢಪಡಿಸಿಕೋ" (ನಹೂಮ 2:1) ಎಂದು ದೇವರ ವಾಕ್ಯ ಹೇಳುತ್ತದೆ. ಸೋಲನ್ನು ಅಂಗೀಕರಿಸದೆ, ಹೇಗಾದರೂ ನಾನು ಜಯ ಹೊಂದಿಯೇ ತೀರುವೆನು ಅನ್ನುವವರು ಗೆಲುವಿಗಾಗಿ ಯಾವದೇ ಕ್ರಯವನ್ನು ಕೊಡುವರು. ನಿಶ್ಚಯವಾಗಿ ಜಯಗಳಿಸುವರು. ಪ್ರಿಯರೇ, ನಂಬಿಕೆಯಲ್ಲಿ ದೃಢಗೊಳ್ಳಿರಿ. "ದೇವರಿಗೆ ಒಳಗಾಗಿರಿ, ಸೈತಾನನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು ಓಡಿ ಹೋಗುವನು" (ಯಾಕೋ 4:7).

**ನೆನಪಿಗೆ : 'ಹಾಗಾದರೆ ಈ ವಿಷಯಗಳಲ್ಲಿ ನಾವು ಏನು ಹೇಳೋಣ? ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು?' (ರೋಮಾ 8:31).**

ಡಿಸೆಂಬರ್ 17

## ಬಿಟ್ಟುಬಿಡಬೇಡ!

ಬೆಳಿಗ್ಗೆ : ಆಮೋಸ 7,8,9
ಸಂಜೆ : ಪ್ರಕ 8

**'ದೊರೆಯು ನಿನ್ನ ಮೇಲೆ ಸಿಟ್ಟುಗೊಂಡರೆ ಉದ್ಯೋಗವನ್ನು ಬಿಡಬೇಡ; ತಾಳ್ಮೆಯು ದೊಡ್ಡ ದೋಷಗಳನ್ನು ಅಡಗಿಸುತ್ತದಲ್ಲವೆ' (ಪ್ರಸ 10:4).**

ನನಗೆ ಒಬ್ಬ ಸಹೋದರನು ಗೊತ್ತು. ಅವನ ಕುಟುಂಬ ಬಡತನದಲ್ಲೂ, ಕಷ್ಟದಲ್ಲೂ, ಇತ್ತು. ಅವನಿಗೆ ಒಳ್ಳೆ ಒಳ್ಳೆ ಕೆಲಸಗಳು ಸಿಕ್ಕಿದಾಗ್ಯೂ ಅವನ ಮಿತಿಮೀರಿದ ಕೋಪದ ನಿಮಿತ್ತ, ಅಧಿಕಾರಿಗಳ ವಿರುದ್ಧ ಮಾತಾಡುವದರಿಂದ, ಯಾವ ಒಂದು ಕೆಲಸದಲ್ಲಿಯೂ ಹೆಚ್ಚು ದಿನ ಇರುತ್ತಿರಲಿಲ್ಲ. ತನ್ನನ್ನು ತಗ್ಗಿಸಿಕೊಳ್ಳುವ ಸ್ವಭಾವ ಅವನಲ್ಲಿ ಇರಲಿಲ್ಲ. ಎಲ್ಲದಕ್ಕೂ ನ್ಯಾಯ ನೀತಿಯೆಂದು ಮಾತಾಡುವನು. ಇಂಥಹ ಮೊಂಡ ಸ್ವಭಾವ ಇದ್ದದ್ದರಿಂದ, ಅವನು ತನಗೆ ಬಡತನವನ್ನು ಬರಮಾಡಿಕೊಂಡನು. ಹಣವಿಲ್ಲದೆ ಮಕ್ಕಳನ್ನು ಓದಿಸಲಾಗಲಿಲ್ಲ. ಒಂದು ವೇಳೆ ಅಧಿಕಾರಿಯ ಬಳಿ ಕ್ಷಮಾಪಣೆ ಕೇಳಿದ್ದಿದ್ದರೆ, ಅಧಿಕಾರಿ ಕ್ಷಮಿಸಿ ಪುನಃ ಕೆಲಸಕ್ಕೆ ತೆಗೆದುಕೊಳ್ಳಲು ಸಾಧ್ಯವಾಗುತ್ತಿತ್ತು. ಅಧಿಕಾರಿ, ಅಧಿಕಾರಿಯೇ, ಕೂಲಿಯಾಳು ಕೂಲಿಯಳೇ ಅಧಿಕಾರಿ ತನ್ನ ಸ್ಥಾನ ಬಿಟ್ಟು ಕೆಳಗೆ ಬರಬೇಕೆಂದು ಭಾವಿಸುವದು ಸರಿಯಲ್ಲ. ಕೂಲಿಯಾಳು ಯಥಾರ್ಥವಾಗಿ, ಉತ್ತಮವಾಗಿ ಕೆಲಸ ಮಾಡುವದು ಅವನ ಕರ್ತವ್ಯ. ಆಗ ಕರ್ತನೂ, ಅವನನ್ನು ಮೇಲಕ್ಕೆ ಎತ್ತುವನು.

ಹೊಸದಾಗಿ ಮದುವೆಯಾದ ದಂಪತಿಗಳನ್ನು ನೋಡಲು, ಒಬ್ಬ ಬೋಧಕರು ಬಂದರು. ಹೆಂಡತಿ ಗಂಡನ ಬಳಿ ಅಂಗಡಿಗೆ ಹೋಗಿ ಹಾಲು ತರಲು ಹೇಳಿದಳು. ಗಂಡನು, ಸ್ವಲ್ಪಹೊತ್ತಿಗೆ ಮೊದಲು ಹಾಲು ತಂದೆನಲ್ಲಾ, ಅದು ಮುಗಿದು ಹೋಯಿತಾ? ಅಂದನು. ಅದಕ್ಕೆ ಹೆಂಡತಿ, ತಂದ ಹಾಲನೆಲ್ಲಾ ಬೆಕ್ಕು ಕುಡಿದು ಬಿಟ್ಟಿದೆ ಎಂದು ಹೇಳಲು, ಗಂಡನು ಹಾಲಿನ ಪಾತ್ರೆಯನ್ನು ಯಾಕೆ ಮುಚ್ಚಿ ಇಡಲಿಲ್ಲ? ಕಿಟಕಿಯನ್ನು ಯಾಕೆ ಮುಚ್ಚಲಿಲ್ಲ? ಎಂದು ಕೇಳಿದನು. ಹೆಂಡತಿ ಪುನಃ ಪುನಃ ಕಿಟಕಿ ಮುಚ್ಚಲಿಲ್ಲ ಎಂದು ಹೇಳುತ್ತಲೇ ಇದ್ದಳು. ಗಂಡನಿಗೆ ಕೋಪ ಬಂದು ಹೆಂಡತಿಗೆ ಎರಡೇಟು ಹಾಕಿದನು. ಅವಳೋ ಜೋರಾಗಿ ಅಳಲಾರಂಭಿಸಿದಳು. ತನ್ನ ತವರು ಮನೆಗೆ ಹೋಗುತ್ತೇನೆ ಅಂದಳು. ಆಗ ಬಂದಿದ್ದ ಬೋಧಕರು "ತಾಳ್ಮೆಯು ದೊಡ್ಡ ದೋಷಗಳನ್ನು ಅಡಗಿಸಿ ಬಿಡುತ್ತದೆ" (ಪ್ರಸ 10:4). ನೀನು ಮೊದಲೇ "ನಾನು ತಪ್ಪು ಮಾಡಿಬಿಟ್ಟೆ ನನ್ನನ್ನು ಕ್ಷಮಿಸಿರಿ" ಎಂದು ಹೇಳಿದ್ದರೆ ಏನು ಕಡಿಮೆಯಾಗುತ್ತಿತ್ತು? ಎಂದು ಹೇಳಿ ಅವಳನ್ನು ಸಮಾಧಾನ ಪಡಿಸಿದರು.

ದೇವಮಕ್ಕಳೇ, ಕುಟುಂಬದ ಅನ್ಯೋನ್ಯತೆಯನ್ನು ಕಾಪಾಡಿಕೊಳ್ಳಲು ತಾಳ್ಮೆ ಅಗತ್ಯವಾದದ್ದು. ತಗ್ಗಿದ ಹೃದಯ ಅಗತ್ಯವಾದದ್ದು ಅದಕ್ಕಾಗಿ ಪ್ರಯತ್ನಪಡಿ. ಕಠಿಣವಾದ ಹೃದಯಗಳನ್ನು ತಾಳ್ಮೆಯಿಂದ ಗೆಲ್ಲಲು ಸಾಧ್ಯ. ನೀವು ಯಾವದಾದರೊಂದು ಕಾರ್ಯವನ್ನು ತಪ್ಪಾಗಿ ಮಾಡಿದರೆ, ಇಲ್ಲವೇ, ಇತರರನ್ನು ನೋಯಿಸಿದ್ದಾಗಿ ಕಂಡು ಬಂದರೆ ಕ್ಷಮಾಪಣೆ ಕೇಳಿ, ಮುಂದೆ ಅದೇ ತಪ್ಪು ಮಾಡದಂತೆ ಬಿಟ್ಟುಬಿಡಿರಿ ಕರ್ತನ ಮಾರ್ಗವನ್ನು ಬಿಡದಿರಿ.

**ನೆನಪಪಿಗೆ : 'ಶಾಂತರು ಧನ್ಯರು; ಅವರು ಭೂಮಿಗೆ ಬಾಧ್ಯರಾಗುವರು' (ಮತ್ತಾ 5:5).**



ಡಿಸೆಂಬರ್ 18

## ಮೂವತ್ತೆಂಟು ವರುಷಗಳು!

ಬೆಳಿಗ್ಗೆ : ಓಬದ್ಯ 1
ಸಂಜೆ : ಪ್ರಕ 9

**'ಅಲ್ಲಿ ಮೂವತ್ತೆಂಟು ವರುಷದಿಂದ ರೋಗಿಯಾಗಿದ್ದ ಒಬ್ಬ ಮನುಷ್ಯನಿದ್ದನು' (ಯೋಹಾನ 5:5).**

ಯೆರೂಸಲೇಮಿನಲ್ಲಿ 'ಬೇತ್ಸಥಾ' ಎಂಬ ಹೆಸರಿನ ಒಂದು ಕೊಳವಿತ್ತು. ಅಲ್ಲಿ ಕುರುಡರೂ, ಕುಂಟರೂ, ಮೈ ಒಣಗಿದವರೂ ಮೊದಲಾದ ವ್ಯಾಧಿ ಪೀಡಿತರು ಅಲ್ಲಿ ಮಲಗಿರುತ್ತಿದ್ದರು. ಯಾಕೆಂದರೆ, ಕೆಲವು ಸಮಯಗಳಲ್ಲಿ, ದೇವದೂತನೊಬ್ಬನು ಆ ಕೊಳದೊಳಗೆ ಇಳಿದು, ನೀರನ್ನು ಕಲಕುವನು. ಹಾಗೆ ಕಲಕಿದಾಗ, ಯಾರು ಮೊದಲು ಇಳಿಯುವರೋ, ಅವರು ಯಾವ ರೀತಿಯ ವ್ಯಾಧಿಯುಳ್ಳವರಾಗಿದ್ದರೂ ಸ್ವಸ್ಥನಾಗುತ್ತಿದ್ದರು (ಯೋಹಾ 5:1–4).

ಆ ಕೊಳದ ದಂಡೆಯಲ್ಲಿ, ಮೂವತ್ತೆಂಟು ವರುಷಗಳಿಂದ ಮನಗುಂದದೆ, ನಿರೀಕ್ಷೆಯಿಂದ, ನಂಬಿಕೆಯಿಂದ ಒಬ್ಬ ಮನುಷ್ಯನು ಕಾದಿದ್ದನು. ನೀರು ಕಲಕುವಾಗ, ಅವನನ್ನು ಕೊಳದೊಳಗೆ ಇಳಿಸುವವರು ಯಾರೂ ಇರಲಿಲ್ಲ. ಆವನು ಹೋಗಿ ಇಳಿಯುವದಕ್ಕೆ ಮುಂಚೆ ಬೇರೊಬ್ಬರು ಇಳಿದು ಬಿಡುತ್ತಿದ್ದರು. ಆದಾಗ್ಯೂ, ಅವನಲ್ಲಿ ಒಂದು ಒಳ್ಳೆಯ ಗುಣವನ್ನು ಕಾಣುತ್ತೇವೆ. ಮೂವತ್ತೆಂಟು ವರುಷಗಳಿಂದ ಗುಣಹೊಂದಲಾಗದೆ ಹೋದಾಗ್ಯೂ, ಅವನು ತನ್ನ ನಂಬಿಕೆಯನ್ನು ಬಿಟ್ಟುಬಿಡಲಿಲ್ಲ. "ಇನ್ನೂ ನಾನು ಪ್ರಯತ್ನಿಸುತ್ತೇನೆ, ನಾನು ಸೋತು ಬಿಟ್ಟುಬಿಡುವದಿಲ್ಲ" ಎಂಬ ದೃಢತೆಯಿಂದಿದ್ದನು. ಆದ್ದರಿಂದಲೇ ಆ ಕೊಳದ ಸುತ್ತಲೂ ಎಷ್ಟೋ ಮಂದಿ ರೋಗಿಗಳಿದ್ದಾಗ್ಯೂ, ಯೇಸುಕ್ರಿಸ್ತನು ಅವನ ಬಳಿಗೆ ಬಂದನು. 'ಬೇತ್ಸಥಾ' ಎಂದರೆ, "ಕನಿಕರದ ಮನೆ" ಎಂದು ಅರ್ಥ. ಆ ಕೊಳದಲ್ಲಿ ಅವನಿಗೆ ಕರುಣೆ ದೊರೆಯಲಿಲ್ಲ. ದೇವದೂತನು ನೀರನ್ನು ಕಲಕಿದರೂ ಕರುಣೆ ದೊರೆಯಲಿಲ್ಲ. ಆದರೆ ಕರುಣಾಮಯಿಯಾದ ಕ್ರಿಸ್ತನಿಂದ ಅವನಿಗೆ ಕರುಣೆ ದೊರೆಯಿತು. ಕ್ರಿಸ್ತನು ಆ ಪಾರ್ಶ್ವವಾಯು ರೋಗಿಯ ಬಿಡದ ಪ್ರಯತ್ನವನ್ನು ನೋಡಿದನು. ನಂಬಿಕೆಯನ್ನು ನೋಡಿದನು. "ನಿನಗೆ ಸ್ವಸ್ಥವಾಗುವದಕ್ಕೆ ಮನಸ್ಸುಂಟೋ" ಎಂದು ಪ್ರೀತಿಯಿಂದ ಕೇಳಿದನು (ಯೋಹಾ 5:6). ಯೇಸು ಅವನಿಗೆ – ಎದ್ದು ನಿನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆ ಎಂದು ಹೇಳಿದಾಗ ಆ ರೋಗಿಯು ಕೂಡಲೇ ಸ್ವಸ್ಥನಾಗಿ ತನ್ನ ಹಾಸಿಗೆಯನ್ನು ಹೊತ್ತುಕೊಂಡು ಹೋದನು (ಯೋಹಾ 5:8,9).

ದೇವಮಕ್ಕಳೇ, ಒಂದು ವೇಳೆ ನೀವು ದೀರ್ಘಕಾಲದಿಂದ, ಹಾಸಿಗೆಯಲ್ಲಿ ಮಲಗಿರಬಹುದು, ಯಾವ ವೈದ್ಯರಿಂದಲೂ ಸರಿಯಾದ ಚಿಕಿತ್ಸೆ ಕೊಡದೇ ಹೋಗಿರ ಬಹುದು. ಇಂದು ಕರ್ತನ ಪಾದಗಳನ್ನು ಹಿಡಿದುಕೊಳ್ಳಿರಿ. "ನನ್ನ ಯೋಗ್ಯತೆಯನ್ನು ನೋಡಿ ಅಲ್ಲ, ನಿನ್ನ ಕೃಪೆಯಿಂದ ನನಗೆ ಕರುಣೆ ತೋರಿಸು" ಎಂದು ಕೇಳಿರಿ.

**ನೆನಪಿಗೆ : 'ನಮ್ಮ ಬೇನೆಗಳನ್ನು ತಾನೇ ತೆಗೆದುಕೊಂಡು, ನಮ್ಮ ರೋಗಗಳನ್ನು ಹೊತ್ತುಕೊಂಡನು. ಎಂದು ಯೆಶಾಯನೆಂಬ ಪ್ರವಾದಿಯಿಂದ ಹೇಳಿರುವ ಮಾತು ನೆರವೇರಿತು' (ಮತ್ತಾ 8:17).**

## ಡಿಸೆಂಬರ್ 19 — ಹದಿನೆಂಟು ವರುಷಗಳು!

ಬೆಳಗ್ಗೆ : ಯೋಹ 1,2,3,4
ಸಂಜೆ : ಪ್ರಕ 10

**‘ಆತನು ಒಂದು ಸಭಾಮಂದಿರದೊಳಗೆ ಉಪದೇಶ ಮಾಡುತ್ತಿದ್ದನು ಅಲ್ಲಿ ಹದಿನೆಂಟು ವರುಷಗಳಿಂದ ದೆವ್ವ ಬಡಿದು, ಮೈಯಲ್ಲಿ ರೋಗವುಳ್ಳ ಒಬ್ಬ ಸ್ತ್ರೀಯು ಇದ್ದಳು’ (ಲೂಕ 13:10,11).**

ದೇವಾಲಯದಲ್ಲಿದ್ದ ಆ ಸ್ತ್ರೀಯು ಹದಿನೆಂಟು ವರುಷಗಳಿಂದ ವ್ಯಾಧಿ ಪೀಡಿತಳಾಗಿದ್ದಳು. ಅವಳು ನಡುಬಗ್ಗಿದವಳಾಗಿ ಭೂಮಿಯನ್ನೇ ನೋಡುತ್ತಿದ್ದಳು. ಅಶುದ್ಧಾತ್ಮವು ಅವಳನ್ನು ಬಲಹೀನತೆಯಿಂದ ಕಟ್ಟಿ ಹಾಕಿದ್ದನ್ನು ಉಪದೇಶ ಮಾಡುತ್ತಿದ್ದ ಯೇಸುಕ್ರಿಸ್ತನು ನೋಡಿದನು. ಮಾತ್ರವಲ್ಲ ಅವಳು ತನ್ನ ಸ್ನೇಹಿತನಾದ ಅಬ್ರಹಾಮನ ಮಗಳೆಂದು ಕರೆದನು. ಕಾರಣವೇನೆಂದರೆ, ಬಲಹೀನತೆಯಿಂದ ಸೋತು ಹೋಗದೆ, ಮನಗುಂದದೆ, ಇತರರ ಅವಹೇಳನ ಮಾತುಗಳನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದೆ. ನಂಬಿಕೆಯಿಂದ ದೇವಾಲಯಕ್ಕೆ ಬಂದಿದ್ದಳು.

ದೇವಾಲಯ ಎಂಬುದು ದೇವಪ್ರಸನ್ನತೆಯಿಂದ ತುಂಬಿದಂಥಹ ಸ್ಥಳ. ಕರ್ತನು ತನ್ನ ಕೃಪೆಯೊಂದಿಗೆ, ಬಲದೊಂದಿಗೆ, ವರಗಳೊಂದಿಗೆ ಅಲ್ಲಿ ಇಳಿದು ಬರುವನು. ಯೆಶಾಯನು ದೇವಾಲಯಕ್ಕೆ ಹೋದಾಗ, ಕರ್ತನು ಸಿಂಹಾಸನಾರೂಢನಾಗಿರುವದನ್ನೂ, ಆತನ ವಸ್ತ್ರದ ನೆರಿಗೆಯು ಮಂದಿರದಲ್ಲೆಲ್ಲಾ ಹರಡಿರುವದನ್ನೂ ಕಂಡನು (ಯೆಶಾ 6:1,2). ದೇವಾಲಯಕ್ಕೆ ನಾವು ದೇವರನ್ನು ಸಂಧಿಸಲು ಬರುತ್ತೇವೆ. ನಮ್ಮ ಬೇಡಿಕೆಗಳನ್ನು, ಅಗತ್ಯತೆಗಳನ್ನು ಸಂಧಿಸಲು ಶಕ್ತನಾದ ಕರ್ತನು, ಅಲ್ಲಿ ಇಳಿದು ಬರುವನು. ದೇವಾಲಯವು ವಿಶ್ವಾಸಿಗಳೂ, ದೇವಸೇವಕರೂ, ಕೂಡಿ ಕರ್ತನನ್ನು ಆರಾಧಿಸುವ ಸ್ಥಳ. ಆದ್ದರಿಂದ ದಾವೀದನು, "ಯೆಹೋವನ ಮಂದಿರಕ್ಕೆ ಹೋಗೋಣ ಬಾ ಎಂದು ಜನರು ಕರೆದಾಗ, ನನಗೆ ಸಂತೋಷವಾಯಿತು (ಕೀರ್ತ 122:1) ಎಂದು ಹೇಳುತ್ತಾನೆ.

ಒಂದು ವೇಳೆ ಹದಿನೆಂಟು ವರುಷಗಳಿಂದ ಗೂನಿಯಾಗಿದ್ದ ಆ ಸ್ತ್ರೀ, ಬೇಸರಗೊಂಡು, ಪ್ರತಿವಾರವೂ ದೇವಾಲಯಕ್ಕೆ ಹೋಗಿದ್ದರಿಂದ ನನಗೆ ಏನು ಸಿಕ್ಕೀತು? "ನನಗೆ ಸ್ವಸ್ಥತೆ ನೀಡದ ದೇವರೂ ಬೇಡ, ಆತನ ವಾಕ್ಯವೂ ಬೇಡ" ಎಂದು ಮನೆಯಲ್ಲೇ ಇದ್ದಿದ್ದರೆ, ಅಂದು ಅವಳಿಗೆ ಅದ್ಭುತ ನಡೆಯುತ್ತಿರಲಿಲ್ಲ. ಆದರೆ ಅವಳು ತನ್ನ ಪ್ರಯತ್ನವನ್ನು ಬಿಡಲಿಲ್ಲ. ನಂಬಿಕೆಯಲ್ಲಿ ಬಿದ್ದು ಹೋಗಲಿಲ್ಲ. ಕ್ರಿಸ್ತನು ಅವಳನ್ನು ಪ್ರೀತಿಯಿಂದ ನೋಡಿದ್ದು ಮಾತ್ರವಲ್ಲ, ಅವಳನ್ನು ಹತ್ತಿರಕ್ಕೆ ಕರೆದು ತನ್ನ ಹಸ್ತವನ್ನು ಅವಳ ಮೇಲೆ ಇಟ್ಟನು. ಕೂಡಲೇ ಅವಳು ನೆಟ್ಟಗೆ ನಿಂತಳು. ದೇವರನ್ನು ಮಹಿಮೆ ಪಡಿಸಿದಳು.

ದೇವಜನರೇ, ದೀರ್ಘಕಾಲದಿಂದ ಕರ್ತನಲ್ಲಿ ಮೊರೆಯಿಡುತ್ತಿರುವೆನು, ಒಂದು ಅದ್ಭುತವಾದರೂ ನನ್ನ ಜೀವಿತದಲ್ಲಿ ನಡೆಯಲಿಲ್ಲ? ಎಂದು ಬೇಸರಗೊಳ್ಳದಿರಿ. ನಿಮ್ಮ ಪ್ರಯತ್ನವನ್ನು ಬಿಡಬೇಡಿರಿ. ಪ್ರಾರ್ಥನೆ ಮಾಡುವದರಲ್ಲಿ ಸೋತು ಹೋಗಬೇಡಿರಿ. ಕರ್ತನು ತನ್ನ ಮಕ್ಕಳ ಪ್ರಾರ್ಥನೆಯನ್ನು ನಿಶ್ಚಯವಾಗಿ ಕೇಳಿ ಉತ್ತರಿಸುವನು.

**ನೆನಪಿಗೆ : ‘ದೇವರಿಗೆ ಒಳಗಾಗಿರಿ, ಸೈತಾನನನ್ನು ಎದುರಿಸಿರಿ....ದೇವರ ಸಮೀಪಕ್ಕೆ ಬನ್ನಿರಿ; ಆಗ ಆತನು ನಿಮ್ಮ ಸಮೀಪಕ್ಕೆ ಬರುವನು’ (ಯಾಕೋ 4:7,8).**



## ಡಿಸೆಂಬರ್ 20 — ಹನ್ನೆರಡು ವರುಷಗಳು!

ಬೆಳಗ್ಗೆ : ಮಾಕ 1,2,3,
ಸಂಜೆ : ಪ್ರಕ 11

**‘ಆಗ ಹನ್ನೆರಡು ವರುಷದಿಂದ ರಕ್ತ ಕುಸುಮರೋಗವಿದ್ದ ಒಬ್ಬ ಹೆಂಗಸು ಬಂದಳು. ಆಕೆಯು ಅನೇಕ ವೈದ್ಯರಿಂದ ಬಹು ಕಷ್ಟವನ್ನು ಅನುಭವಿಸಿ .... ಪ್ರಯೋಜನವನ್ನೂ ಹೊಂದಿರಲಿಲ್ಲ’ (ಮಾರ್ಕ 5:25,26).**

ಇಲ್ಲಿ ಹನ್ನೆರಡು ವರುಷದಿಂದಲೂ ರಕ್ತ ಕುಸುಮ ರೋಗವಿದ್ದ ಸ್ತ್ರೀಯನ್ನು ನೋಡುತ್ತೇವೆ. ಅವಳು ತನ್ನ ವ್ಯಾಧಿಯಿಂದ ಹೊರಗೆ ಬರಲು, ಎಷ್ಟೋ ವೈದ್ಯರುಗಳ ಬಳಿ ಹೋದರೂ, ಅವಳ ಕೈಯಲ್ಲಿದ್ದ ಹಣ ಖರ್ಚಾಯಿತೇ ವಿನಃ ಯಾವ ಲಾಭವೂ ಆಗಲಿಲ್ಲ. ಆಕೆಯ ಗಂಡ ಮಕ್ಕಳು ಸಹ ನೋಡಿ ನೋಡಿ ಬೇಸರಗೊಂಡಿರ ಬಹುದು. ಅವಳು ಯೇಸುವಿನ ವಿಷಯವಾಗಿ ಕೇಳಿ. ಅವಳ ಹೃದಯದಲ್ಲಿ ಒಂದು ಚಿಕ್ಕ ನಿರೀಕ್ಷೆ ಹಾಗೂ ನಂಬಿಕೆ ಉಂಟಾಗಿ, ಆತನ ಬಳಿ ಹೋದರೆ ತನಗೆ ಗುಣವಾಗಬಹುದೆಂದು ನೆನಸಿ "ಆತನು ನಡೆದು ಹೋಗುತ್ತಿದ್ದ ಮಾರ್ಗದಲ್ಲಿ ಹಿಂದಿನಿಂದ ಬಂದು ಆತನ ಉಡುಪಿನ ಗೊಂಡೆಯನ್ನು ಮುಟ್ಟಿದಳು ಕೂಡಲೇ ರಕ್ತ ಹರಿಯುವದು ನಿಂತುಹೋದದರಿಂದ ಆಕೆಯು, ನನ್ನನ್ನು ಕಾಡಿದ ರೋಗವು ಹೋಯಿತು ಎಂದು ತನ್ನೊಳಗೆ ತಿಳಿದುಕೊಂಡಳು.

ಆ ಸ್ತ್ರೀ ಯಾರಿಗೂ ಗೊತ್ತಾಗಬಾರದೆಂದು ಜನರ ಗುಂಪಿನಲ್ಲಿ ನುಸುಳಿ ಹಿಂದಿನಿಂದ ಕರ್ತನ ಉಡುಪಿನ ಗೊಂಡೆಯನ್ನು ಮುಟ್ಟಿದಳು. ಮುಟ್ಟಿದಾಕ್ಷಣ, ಯೇಸುವು ತನ್ನಿಂದ ಶಕ್ತಿಯು ಹೊರಟದ್ದನ್ನು ಅರಿತು ತನ್ನನ್ನು ಮುಟ್ಟಿದವರಾರೆಂದು ಪೇತ್ರನನ್ನು ಕೇಳಿದನು. ಆದರೂ ಅವಳಲ್ಲಿದ್ದ ನಂಬಿಕೆ ವ್ಯರ್ಥವಾಗಲಿಲ್ಲ. ಯೇಸು ಕ್ರಿಸ್ತನು– "ನಿಮಗೆ ಒಂದು ಸಾಸಿವೆ ಕಾಳಿನಷ್ಟು ನಂಬಿಕೆ ಇದ್ದರೂ, ಬೆಟ್ಟವನ್ನು ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳಿದರೆ ಹಾಗೆಯೇ ಆಗುವದು" ಎಂದು ಹೇಳಿರುವನು. ಆ ಸ್ತ್ರೀಯ ನಂಬಿಕೆಯೇ ಅವಳನ್ನು ಸ್ವಸ್ಥಪಡಿಸಿತು.

ಇಂದಿಗೂ ಯೇಸುಕ್ರಿಸ್ತನ ಹೆಸರಿನಲ್ಲಿ ನಂಬಿಕೆ ಇಟ್ಟಿರುವ ರಹಸ್ಯ ವಿಶ್ವಾಸಿಗಳು ಅನೇಕರಿರುವರು. ಕರ್ತನಿಂದ ಅನೇಕ ಆಶೀರ್ವಾದಗಳನ್ನು ಪಡೆಯುತ್ತಿರುವರು. ಅವರ ಕುಟುಂಬದ ಹಿನ್ನೆಲೆ ಸಾಮಾಜಿಕ ಹಿನ್ನೆಲೆ ಅವರನ್ನು ರಹಸ್ಯ ವಿಶ್ವಾಸಿಗಳನ್ನಾಗಿಸಿರುವದು. ಅವರ ನಂಬಿಕೆ ಲೋಕದ ಜನರಿಗೆ, ಮರೆಯಾಗಿದ್ದರೂ ಕ್ರಿಸ್ತನಿಗೆ ಮರೆಯಾಗಿಲ್ಲ, ಆತನ ಬಳಿಗೆ ಬಂದವರ್ಯಾರನ್ನೂ ಆತನು ಬರಿಗೈಯಲ್ಲಿ ಕಳುಹಿಸುವದಿಲ್ಲ.

ದೇವಮಕ್ಕಳೇ, ಇಂದು ನಿಮ್ಮ ಜೀವಿತದಲ್ಲಿ ಸಮಸ್ಯೆಗಳು, ವ್ಯಾಧಿಗಳು, ಅನೇಕ ಹೋರಾಟಗಳು ನಿಮ್ಮನ್ನು ದೀರ್ಘಕಾಲದಿಂದ ಕಾಡುತ್ತಿರುವದಾ? ಕ್ರಿಸ್ತನ ಬಳಿಗೆ ನಂಬಿಕೆಯಿಂದ ಬನ್ನಿರಿ. ಆತನೇ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಪರಿಹಾರಕನಾಗಿರುವನು.

**ನೆನಪಿಗೆ : ‘ನನ್ನ ನಾಮದಲ್ಲಿ ಭಯಭಕ್ತಿಯಿಟ್ಟಿರುವ ನಿಮಗೋ (ದೇವರ) ಧರ್ಮವೆಂಬ ಸೂರ್ಯನು ಸ್ವಸ್ಥತೆಯನ್ನುಂಟು ಮಾಡುವ ಕಿರಣಗಳುಳ್ಳವನಾಗಿ ಮೂಡುವನು’ (ಮಲಾಕಿ 4:2)**

**ಡಿಸೆಂಬರ್ 21**

## ಸತತವಾದ ಪ್ರಯತ್ನ!

**ಬೆಳಗ್ಗೆ : ಮೀಕ 4,5**
**ಸಂಜೆ : ಪ್ರಕ 12**

**'ಒಳ್ಳೇದನ್ನು ಮಾಡುವದರಲ್ಲಿ ಬೇಸರಗೊಳ್ಳದೇ ಇರೋಣ, ಯಾಕೆಂದರೆ ಮನಗುಂದದಿದ್ದರೆ ತಕ್ಕ ಸಮಯದಲ್ಲಿ ಬೆಳೆಯನ್ನು ಕೊಯ್ಯುವೆವು' (ಗಲಾ 6:9).**

"ಸತತವಾದ ಪ್ರಯತ್ನ" ದೀರ್ಘಕಾಲ ಸೋತು ಹೋಗದೆ, ಧೈರ್ಯಗೆಡದೆ, ದೃಢವಾಗಿ ನಿಲ್ಲುವದೇ ಆಗಿದೆ. ಸತ್ಯವೇದದ ಪ್ರಕಾರ, "ಸತತವಾದ ಪ್ರಯತ್ನ" ಎಂಬುದು ಕಷ್ಟಗಳ ಸಮಯಗಳಲ್ಲಿ ಅದನ್ನು ಸಹಿಸುವದು ಮಾತ್ರವಲ್ಲ, ವಿಧೇಯತೆಯಿಂದಲೂ, ನಂಬಿಕೆಯಿಂದಲೂ, ನಿರೀಕ್ಷೆಯಿಂದಲೂ ಮುಂದೆ ಸಾಗುವದು.

ಗುಣಪಡಿಸುವ ಸೇವೆಯಲ್ಲಿ ಅನೇಕರನ್ನು ಸ್ವಸ್ಥಮಾಡಿದ ದೇವಮನುಷ್ಯ **ಓರಲ್ ರಾಬರ್ಟ್**. ಅವರನ್ನು ಒಬ್ಬ ಸಂದರ್ಶಕ ಹೀಗೆ ಕೇಳಿದನಂತೆ – ನೀವು ನೂರು ಮಂದಿ ವ್ಯಾಧಿ ಉಳ್ಳವರಿಗಾಗಿ ಪ್ರಾರ್ಥಿಸಿ, ಗುಣವಾಗದೆ, ಮರಣ ಹೊಂದುವರು. ನಂತರ 101 ನೇ ವ್ಯಕ್ತಿಗಾಗಿ ಪ್ರಾರ್ಥಿಸಲು ಕರೆ ಬಂದರೆ ಏನು ಮಾಡುವಿರಿ? ನಿಮ್ಮ ಮನೋಸ್ಥಿತಿ ಆಗ ಹೇಗಿರುವದು? ಅಪನಂಬಿಕೆ ಅವಿಶ್ವಾಸಗಳು ನಿಮ್ಮನ್ನು ಮುತ್ತುವದಾ? ಎಂದು ಕೇಳಿದರು. ಅದಕ್ಕೆ **ಓರಲ್ ರಾಬರ್ಟ್** – "ಪ್ರಾರ್ಥಿಸಬೇಕಾದದ್ದು ನನ್ನ ಕರ್ತವ್ಯ, ಗುಣ ಪಡಿಸುವದು ಕರ್ತನ ಕೈಯಲ್ಲಿರುವದು. ಕರ್ತನು ಗುಣಪಡಿಸುವನೆಂದು ನಿರ್ಧಿಷ್ಟವಾಗಿಯೂ, ಸ್ಪಷ್ಟವಾಗಿಯೂ ನಾನು ನಂಬುತ್ತೇನೆ. ನಾನು ಮನಗುಂದದೆ, ನಂಬಿಕೆಯಿಂದ ಪ್ರಾರ್ಥಿಸುವೆನು" ಎಂದು ಹೇಳಿದರು. ಹಾಗೆಯೆ ಅಪೊ.ಪೌಲನು ಹೇಳುತ್ತಾನೆ, "ನಾನು ನಂಬಿರುವಾತನನ್ನು ಬಲ್ಲೆನು, ಆತನು ನನ್ನ ವಶದಲ್ಲಿಟ್ಟಿರುವದನ್ನು ಆತನು ಆ ದಿನಕ್ಕಾಗಿ ಕಾಪಾಡಲು ಶಕ್ತನಾಗಿದ್ದಾನೆಂದು ದೃಢವಾಗಿ ನಂಬಿದ್ದೇನೆ" ಎಂದು (2ತಿಮೊ 1:12). ಶದ್ರಕ್, ಮೇಶಕ್, ಅಬೇದ್‌ನೆಗೋ ಎಂಬ ಭಕ್ತರು, ಅಂದು ಸರ್ವಾಧಿಕಾರಿಯಾಗಿದ್ದ ನೆಬೂಕದ್ನೆಚ್ಚರನನ್ನು ನೋಡಿ – "ನಾವು ಆರಾಧಿಸುವ ದೇವರಿಗೆ ಚಿತ್ತವಿದ್ದರೆ ಆತನು ಧಗಧಗಿಸುವ ಉರಿಯುವ ಆವಿಗೆಯೊಳಗಿಂದ ನಮ್ಮನ್ನು ಬಿಡಿಸಬಲ್ಲನು. ಚಿತ್ತವಿಲ್ಲದಿದ್ದರೂ ರಾಜನೇ, ನಾವು ನಿನ್ನ ದೇವರಗಳನ್ನು ಆರಾಧಿಸುವದಿಲ್ಲ ಎಂದು ನಿನಗೆ ಗೊತ್ತಿರಲಿ" (ದಾನಿ 3:17,18).ಅವರು ಕರ್ತನಲ್ಲಿ ಇಟ್ಟಿದ್ದ ಪ್ರೀತಿ, ನಂಬಿಕೆಯಲ್ಲಿ ತಪ್ಪಿಹೋಗಲಿಲ್ಲ. ಆ ಇಬ್ರಿಯ ಯೌವನಸ್ಥರು ದೃಢವಾಗಿ ಹಿಡಿದುಕೊಂಡ ವಾಗ್ದಾನವೇನು? "ಉರಿಯಲ್ಲಿ ನಡೆಯುವಾಗ ನೀನು ಕಂದದಿರುವಿ, ಜ್ವಾಲೆಯು ನಿನ್ನನ್ನು ದಹಿಸದು" ಎಂಬುದೇ (ಯೆಶಾ 43:2).

ದೇವಮಕ್ಕಳೇ, ಕರ್ತನಲ್ಲಿ ನಂಬಿಕೆಯಿಡಿ ಆತನು ಎಂದಿಗೂ ನಿಮ್ಮನ್ನು ಬಿಟ್ಟು ಅಗಲುವದಿಲ್ಲ. "ನಾನೇ ನಿನ್ನೊಂದಿಗಿದ್ದೇನೆ. ದಿಗ್ಭ್ರಮೆಗೊಳ್ಳದಿರು, ನಾನೇ ನಿನ್ನ ದೇವರು; ನಾನು ನಿನ್ನನ್ನು ಬಲಪಡಿಸುತ್ತೇನೆ; ಹೌದು, ನಿನಗೆ ಸಹಾಯ ಮಾಡುತ್ತೇನೆ. ನನ್ನ ಧರ್ಮದ ಬಲಗೈಯನ್ನು ನಿನಗೆ ಆಧಾರ ಮಾಡುತ್ತೇನೆ" (ಯೆಶಾ 41:10) ಎಂದು ವಾಗ್ದಾನ ಮಾಡಿರುವನಲ್ಲವೇ.

**ನೆನಪಿಗೆ: '... ಇಸ್ರಾಯೇಲ್ ಜನವೇ ಹೆದರಬೇಡ; ನಾನೇ ನಿನಗೆ ಸಹಾಯಕನು. ಇಸ್ರಾಯೇಲಿನ ಸದಮಲ ಸ್ವಾಮಿಯು ನಿನಗೆ ವಿಮೋಚಕನು' (ಯೆಶಾ 41:14).**



**ಡಿಸೆಂಬರ್ 22**

## ತಪ್ಪುಹೊರಿಸುವವನು!

**ಬೆಳಗ್ಗೆ : ಮೀಕ 6,7**
**ಸಂಜೆ : ಪ್ರಕ 13**

**'ದೇವರು ಆಯ್ದುಕೊಂಡವರ ಮೇಲೆ ಯಾರು ತಪ್ಪು ಹೊರಿಸುವರು? ದೇವರೇ ನಮ್ಮನ್ನು ನೀತಿವಂತರೆಂದು ನಿರ್ಣಯಿಸುವವನಾಗಿದ್ದಾನೆ' (ರೋಮಾ 8:33).**

ಅನೇಕರು, ಹೀಗೆ ಹೇಳುವರು – "ಇತರರು ನನ್ನನ್ನು ತಪ್ಪಿತಸ್ಥನೆಂದು ಹೇಳುವರು, ಇದರಿಂದ ನಾನು ಅಧೈರ್ಯಗೊಂಡು ಬೇಸತ್ತು ಹೋದೆನು. ಪ್ರಯತ್ನವನ್ನು ಬಿಟ್ಟುಬಿಟ್ಟೆನು" ಎಂದು. ಆದರೆ ಕರ್ತನು ನಿಮ್ಮನ್ನು ಕುರಿತು ವೈರಾಗ್ಯದಿಂದಿದ್ದು, ನಿಮ್ಮನ್ನು ಅಪರಾಧಿ ಎಂದು ಹೇಳುವವರನ್ನು ನೋಡಿ "ನನ್ನ ಮಗುವಿನ ಮೇಲೆ ತಪ್ಪುಹೊರಿಸಲು ನೀನು ಯಾರು? ನಾನು ಅವನಿಗಾಗಿ ಪ್ರಾಣವನ್ನು ಕೊಟ್ಟು, ಪ್ರೀತಿಸಿದ್ದೇನೆ ಎಂದು ಹೇಳುವನು" "ಹಗಲಿರುಳು ನಮ್ಮ ಸಹೋದರರ ಮೇಲೆ ನಮ್ಮ ದೇವರ ಮುಂದೆ ದೂರು ಹೇಳಿದ ದೂರುಗಾರನು ದೊಬ್ಬಲ್ಪಟ್ಟಿದ್ದಾನೆ" (ಪ್ರಕ 12:10) ಎಂದು ಸತ್ಯವೇದ ಹೇಳುತ್ತದೆ.

ನೀವು ಒಂದನ್ನು ನಿರ್ಧಿಷ್ಟವಾಗಿಯೂ, ಸ್ಪಷ್ಟವಾಗಿಯೂ ತಿಳಿದಿರಬೇಕು. ಒಬ್ಬ ಮನುಷ್ಯನು ಪಾಪ ಮಾಡುವಾಗ ಪವಿತ್ರಾತ್ಮನು, ಅವನಲ್ಲಿ ಪಾಪದ ಅರಿವನ್ನು ತಂದು ಮಾನಸಾಂತರ ಹೊಂದುವಂತೆ ಮಾಡುವನು. ಆದರೆ ಸೈತಾನನು ತಪ್ಪಿನ ಅರಿವನ್ನು ತಂದು ಹಾಕುವನು **(Conviction is from the Holy Spirit but condemnation is demonic power from satan)** ನನ್ನ ತಪ್ಪು ಭಯಂಕರವಾದದ್ದು, ನಿನಗೆ ಕ್ಷಮೆಯೇ ಇಲ್ಲ ಕರ್ತನು ನಿನ್ನನ್ನು ತಳ್ಳಿ ಬಿಟ್ಟಿರುವನು. ಕ್ರಿಸ್ತನ ಪರಿಶುದ್ಧ ರಕ್ತವನ್ನು ತುಚ್ಛೀಕರಿಸಿಬಿಟ್ಟೆ. ಆತ್ಮಹತ್ಯೆ ಮಾಡಿಕೋ ಎಂದು ಸೈತಾನನು ಹೇಳಿ ಅಧೈರ್ಯಪಡಿಸುವನು. ಅಪೊ.ಪೇತ್ರನಿಗೆ ಬಂದದ್ದು ಪಾಪದ ಅರಿವು. ಆದ್ದರಿಂದಲೇ, ಅವನು ಮನೋವೇದನೆಯಿಂದ ಕೂಡಿದವನಾಗಿ ಅತ್ತು, ಕರ್ತನ ಕೃಪೆಯನ್ನು ಕರುಣೆಯನ್ನು ಬಯಸಿ ಪಾಪಕ್ಷಮಾಪಣೆಯನ್ನು ಪಡೆದನು. ಪುನಃ ತಲೆ ಎತ್ತಿ ನಡೆದನು. ಬಲವಾಗಿ ದೇವಸೇವೆ ಮಾಡಿದನು. ಆದರೆ ಇಸ್ಕರಿಯೋತ ಯೂದನಿಗೆ ಬಂದದ್ದು ತಪ್ಪಿನ ಅರಿವು "ಪಾಪವೇ ಮಾಡದಾತನನ್ನು ನಾನು ಹಿಡಿದುಕೊಟ್ಟು ಪಾಪ ಮಾಡಿದೆನಲ್ಲಾ" ಎಂದು ಹಲುಬಿದನು. ಈ ತಪ್ಪಿತಸ್ಥಭಾವನೆಯಿಂದಾಗಿ ಸೈತಾನನು ಅವನು ಪುನಃ ಕ್ರಿಸ್ತನ ಬಳಿಗೆ ಹಿಂದಿರುಗಿ ಬರಲು ಬಿಡಲಿಲ್ಲ ಅವನು ನೇಣು ಹಾಕಿಕೊಂಡು ಸತ್ತನು.

ದೇವಮಕ್ಕಳೇ, ಈ ಕುರಿತು ಅಪೊ.ಪೌಲನು ಹೀಗೆ ಹೇಳುತ್ತಾನೆ – ದೇವರ ಚಿತ್ತಾನುಸಾರವಾಗಿರುವ ದುಃಖವು ಮಾನಸಾಂತರವನ್ನುಂಟು ಮಾಡಿ ರಕ್ಷಣೆಗೆ ಕಾರಣವಾಗಿದೆ; ಆ ಮಾನಸಾಂತರದಲ್ಲಿ ಪಶ್ಚಾತ್ತಾಪಕ್ಕೆ ಆಸ್ಪದವಿಲ್ಲ; ಆದರೆ ಲೋಕದವರಿಗಿರುವಂಥ ದುಃಖವು ಮರಣವನ್ನುಂಟು ಮಾಡುವದು ಎಂದು (2ಕೊರಿ 7:10). ಹಾಗೂ ನಮ್ಮನ್ನು ಅಪರಾಧಿಗಳೆಂದು ನಿರ್ಣಯಿಸುವವರು ಯಾರು? ಕ್ರಿಸ್ತಯೇಸು ಮರಣವನ್ನು ಹೊಂದಿದ್ದಲ್ಲದೆ ಜೀವಿತನಾಗಿ ಎದ್ದು ತಂದೆ ದೇವರ ಬಲಗಡೆಯಲ್ಲಿದ್ದು ನಮಗೋಸ್ಕರ ಬೇಡುವವನಾಗಿದ್ದಾನೆ.

**ನೆನಪಿಗೆ : 'ಪೂರ್ವಕ್ಕೂ ಪಶ್ಚಿಮಕ್ಕೂ ಎಷ್ಟು ದೂರವೋ, ನಮ್ಮ ದ್ರೋಹಗಳನ್ನು ನಮ್ಮಿಂದ ತೆಗೆದು ಅಷ್ಟು ದೂರ ಮಾಡಿದ್ದಾನೆ' (ಕೀರ್ತ 103:12).**

**ಡಿಸೆಂಬರ್ 23**

## ಹಿಂದೆಗೆದರೆ!

**ಬೆಳಿಗ್ಗೆ : ನಹೂಮ 1,2,3**
**ಸಂಜೆ : ಪ್ರಕ 14**

**'ನನ್ನವನಾಗಿರುವ ನೀತಿವಂತನು ನಂಬಿಕೆಯಿಂದಲೇ ಬದುಕುವನು; ಅವನು ಹಿಂದೆಗೆದರೆ ಅವನಲ್ಲಿ ನನಗೆ ಸಂತೋಷವಿರುವದಿಲ್ಲ' (ಇಬ್ರಿ 10:38).**

ಒಮ್ಮೆ ವಿಯಟ್ನಾಂನಲ್ಲಿ ಅಮೇರಿಕನ್ನರಿಗೂ, ಕಮ್ಯೂನಿಸ್ಟರಿಗೂ ದೊಡ್ಡ ಯುದ್ಧ ನಡೆಯಿತು. ಆ ದೇಶದಲ್ಲಿ ಒಬ್ಬ ದೇವಸೇವಕರು ಮಿಶನರಿಯಾಗಿ ಸೇವೆ ಮಾಡುತ್ತಿದ್ದರು. ಅಮೇರಿಕಾ ಸೋತು ಹೋಯಿತು, ತಮ್ಮ ದೇಶಕ್ಕೆ ಹಿಂದಿರುಗಿದರು. ಆದರೆ ಈ ಮಿಶನರಿ, ತನ್ನ ಸೇವೆಯನ್ನು ಮುಂದುವರಿಸಿದರು. ಕಮ್ಯೂನಿಸ್ಟರು ಆತನನ್ನು ಚಿತ್ರವಧೆಗೆ ಒಳಪಡಿಸಿದರು. ಕ್ರಿಸ್ತನನ್ನು ಬೊಂಕಿಬಿಡುವೆನೇನೋ, ಆತನನ್ನು ಬಿಟ್ಟು ಹಿಂಜಾರಿ ಹೋಗುತ್ತೇನೋ, ಎಂಬ ಭಯ ಆತನಲ್ಲಿ ಉಂಟಾಯಿತು. ಆಗ ಕರ್ತನು "ಮಗನೇ, ಭಯ ಪಡಬೇಡ, ನೀತಿವಂತನು ನಂಬಿಕೆಯಿಂದ ಬದುಕುವನು. ನನ್ನನ್ನು ಆಶ್ರಯಿಸಿ ನಂಬಿಕೆಯಲ್ಲಿ ಸ್ಥಿರಚಿತ್ತನಾಗಿರು" ಎಂದು ಹೇಳಿದನು.

ಆ ದೇವಸೇವಕರಿಗೆ ಇನ್ನೂ ಅಧಿಕವಾದ ಹಿಂಸೆಗಳು ಒದಗಿ ಇನ್ನು ಈ ಹಿಂಸೆಯನ್ನು ತಾಳಲಾರೆ, ನಾನು ನನ್ನ ನಂಬಿಕೆಯಲ್ಲಿ ಹಿಂಜಾರಿ ಹೋಗುವೆನು ಎಂದು ಹೇಳಿದರು. ಆಗ ಕರ್ತನು – "ನೀನು ಹಿಂದೆಗೆದರೆ ನಿನ್ನಲ್ಲಿ ನನಗೆ ಸಂತೋಷವಿರುವದಿಲ್ಲ" ಎಂದು ಮಾತನಾಡಿದನು. ಆಗ ಆ ಸೇವಕರು ಕರ್ತನ ಕೃಪೆಯನ್ನು ಆತುಕೊಂಡರು. ಒಂದು ದಿನ ಅಮೇರಿಕನ್ನರು ಆತನ ಬಿಡುಗಡೆಗಾಗಿ ಶ್ರಮಿಸಿ, ಆತನನ್ನು ಹೊರಕ್ಕೆ ತಂದರು.

ಹಿಂಜಾರಿಹೋಗುವದು ಸುಲಭ, ಪ್ರಯತ್ನವನ್ನು ಬಿಡುವದು ಸುಲಭ. ಯೇಸುಕ್ರಿಸ್ತನು ಹೀಗೆ ಹೇಳಿರುವನು – ಒಬ್ಬನು ನನ್ನಲ್ಲಿಯೂ, ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ, ಅವನೇ ಬಹಳ ಫಲಕೊಡುವವನು ಎಂದು (ಯೋಹಾ 15:5). ಹೌದು, ನೆಲೆಗೊಂಡಿರುವದು ಮುಖ್ಯವಾದದ್ದು ಅದು ಜಯಭರಿತವಾದ ಜೀವಿತಕ್ಕೆ ನಡೆಸುವದು, ನಂಬಿಕೆಯನ್ನು ಕಳೆದುಕೊಳ್ಳುವದು, ಎಲ್ಲರಿಂದಲೂ ಸಾಧ್ಯ. ಆದರೆ ಆತ್ಮದಲ್ಲಿ ವಿಶ್ರಾಂತಿ, ಸಮಾಧಾನ ಇರುವದಿಲ್ಲ, ಸೈತಾನನು ಒಬ್ಬ ವಿಶ್ವಾಸಿಯನ್ನು ಎರಡು ರೀತಿಯಲ್ಲಿ ಶೋಧಿಸುವನು. **1**. ಹಣ, ಸಂಪತ್ತು, ಸುಖ ಭೋಗಗಳನ್ನು ತೋರಿಸಿ, ಕ್ರಿಸ್ತ ನಂಬಿಕೆಯಲ್ಲಿ ಹಿಂಜಾರಿ ಹೋಗುವಂತೆ ಮಾಡುವನು. ಅದಕ್ಕೆ ಮಣಿಯದಿದ್ದರೆ, **2**. ಕಷ್ಟಗಳನ್ನು ಉಪದ್ರವಗಳನ್ನು ತಂದು ಹಾಕಿ ಹಿಂಜಾರಿ ಹೋಗುವಂತೆ ಶೋಧಿಸುವನು. ಆದರೆ ನೀವು ಸೋತು ಹೋಗದೆ, ಬೇಸರಗೊಳ್ಳದೆ ಲೋಕವನ್ನೇ ಜೈಯಿಸಿದಂತೆ ಕರ್ತನಲ್ಲಿ ನೆಲೆಗೊಂಡಿರಬೇಕು. ಆಗ ಕರ್ತನ ವಿಶ್ರಾಂತಿಯಲ್ಲಿ ನೀವು ಸೇರುವಿರಿ.

ದೇವಮಕ್ಕಳೇ, ಇದು ಅಂತ್ಯಕಾಲವಾಗಿದೆ ಕೊನೆಯವರೆಗೆ, ನೀವು ಕರ್ತನಲ್ಲಿ ನೆಲೆಯಾಗಿ ನಿಂತರೆ, ನಿಶ್ಚಯವಾಗಿ ನೀವು ಜಯಮಾಲೆಯನ್ನು ಪಡೆಯುವಿರಿ. ಕೊನೆಯವರೆಗೂ ನೆಲೆಗೊಂಡಿರುವವನು ರಕ್ಷಣೆ ಹೊಂದುವನು.

**ನೆನಪಿಗೆ : 'ಮೊದಲಿಂದಿರುವ ಭರವಸವನ್ನು ಅಂತ್ಯದವರೆಗೂ ದೃಢವಾಗಿ ಹಿಡಿದುಕೊಳ್ಳುವ ಪಕ್ಷಕ್ಕೆ ಕ್ರಿಸ್ತನಲ್ಲಿ ಪಾಲುಗಾರರಾಗಿದ್ದೇವಲ್ಲಾ!' (ಇಬ್ರಿ 3:14).**



**ಡಿಸೆಂಬರ್ 24**

## ಪ್ರಯತ್ನದಿಂದ ಸಾಧ್ಯ!

**ಬೆಳಿಗ್ಗೆ : ಹಬಕ್ಕೂಕ 1,2,3**
**ಸಂಜೆ : ಪ್ರಕ 15**

**'ನೀತಿವಂತನು ಇನ್ನೂ ನೀತಿಯನ್ನು ಅನುಸರಿಸಲಿ; ಪವಿತ್ರನು ತನ್ನನ್ನು ಇನ್ನೂ ಪವಿತ್ರಮಾಡಿಕೊಳ್ಳಲಿ' (ಪ್ರಕ 22:11).**

ನಿಮ್ಮ ಪ್ರಯತ್ನದಿಂದ, ನಿಮಗೆ ಒಳ್ಳೆಯ ಫಲ ಉಂಟು. ನೀವು ಪೂರ್ಣಬಲದಿಂದ ಪ್ರಯತ್ನಿಸುವಾಗ, ಕರ್ತನು ನಿಶ್ಚಯವಾಗಿ ನಿಮ್ಮ ಪ್ರಯತ್ನವನ್ನು ಸಫಲ ಪಡಿಸುವನು. ನೀವು ಮಾಡಿದ ಪ್ರಯತ್ನದಲ್ಲಿ ಸಂತೋಷಿಸಿರಿ. ಜಯಭರಿತವಾದ ಪ್ರಾರ್ಥನಾ ಜೀವಿತಕ್ಕಾಗಿ ಪ್ರಯತ್ನಿಸುತ್ತಲೇ ಇರಿ. ನಂಬಿಕೆಯಿಂದ ಹೊಂದಿದ್ದೇನೆ ಎಂದು ಹೇಳಿರಿ. ಕ್ರೈಸ್ತ ಜೀವಿತದಲ್ಲಿ, ನಮಗೆ ತೃಪ್ತಿ ಇರಬಾರದು. ಇನ್ನೂ ಪ್ರಯತ್ನಿಸುತ್ತಲೇ ಇರಬೇಕು. ಇನ್ನೂ ಆತ್ಮದಲ್ಲಿ ಬೆಳೆಯಬೇಕು, ಪೂರ್ಣತೆ ಹೊಂದಬೇಕು ಎಂದು ಪ್ರಯತ್ನಿಸುತ್ತಲೇ ಇರಬೇಕು. ನೀವು ಪಡೆದ ಪರಿಶುದ್ಧತೆಯ ಕುರಿತು ತೃಪ್ತಿಪಟ್ಟು ನಿಂತು ಬಿಡಬೇಡಿರಿ. ನೀತಿವಂತನು ಇನ್ನೂ ನೀತಿಯನ್ನು ಅನುಸರಿಸಲಿ; ಪವಿತ್ರನು ತನ್ನನ್ನು ಇನ್ನೂ ಪವಿತ್ರ ಮಾಡಿಕೊಳ್ಳಲಿ" (ಪ್ರಕ 22:11) ಎಂದು ದೇವರ ವಾಕ್ಯ ಹೇಳುವದು.

ಪ್ರಿಯರೇ, ಎಲ್ಲದಕ್ಕೂ ಒಂದು ಎಲ್ಲೆ ಇರುವದು, ಆದರೆ ಪರಿಶುದ್ಧತೆಗೆ ನೀತಿಗೆ ಎಲ್ಲೆಯೇ ಇಲ್ಲ. ಅಪೊ.ಪೌಲನು, ತನ್ನ ಪ್ರಯತ್ನದಲ್ಲಿ ತೃಪ್ತಿಹೊಂದಿ ಮುಂದೆ ಸಾಗುವದನ್ನು ಬಿಟ್ಟುಬಿಡಲಿಲ್ಲ. "ಇಷ್ಟರೊಳಗೆ ನಾನು ಬಿರುದನ್ನು ಪಡಕೊಂಡು ಸಿದ್ಧಿಗೆ ಬಂದವನೆಂದು ಹೇಳುವದಿಲ್ಲ; ನಾನು ಯಾವದನ್ನು ಹೊಂದುವದಕ್ಕಾಗಿ ಕ್ರಿಸ್ತಯೇಸು ನನ್ನನ್ನು ಹಿಡಿದು ಕೊಂಡನೋ ಅದನ್ನು ಹಿಡಿದುಕೊಳ್ಳುವದಕ್ಕೋಸ್ಕರ ಓಡುತ್ತಾ ಇದ್ದೇನೆ ಹಿಂದಿನ ಸಂಗತಿಗಳನ್ನು ಮರೆತು ಬಿಟ್ಟು ಮುಂದಿನವುಗಳನ್ನು ಹಿಡಿಯುವದಕ್ಕೆ ಎದೆ ಬೊಗ್ಗಿದವನಾಗಿ ದೇವರು ಕ್ರಿಸ್ತನ ಮೂಲಕವಾಗಿ ನಮ್ಮನ್ನು ಮೇಲಕ್ಕೆ ಕರೆದು ನಮ್ಮ ಮುಂದೆ ಇಟ್ಟಿರುವ ಬಿರುದನ್ನು ಗುರಿಮಾಡಿಕೊಂಡು ಓಡುತ್ತಾ ಇದ್ದೇನೆ (ಫಿಲಿ 3:12–14) ಎಂದು ಹೇಳುತ್ತಾನೆ. ತಿಮೊಥೆಯನನ್ನು ಅವನ ಸೇವೆಯಲ್ಲಿ ಪ್ರೋತ್ಸಾಹ ಪಡಿಸುತ್ತಾ, "ನೀನು ದೇವಭಕ್ತಿಯ ವಿಷಯದಲ್ಲಿ ಸಾಧನೆ ಮಾಡಿಕೋ ದೇಹ ಸಾಧನೆಯು ಸ್ವಲ್ಪ ಮಟ್ಟಿಗೆ ಪ್ರಯೋಜನವಾಗಿದೆ. ಭಕ್ತಿಯಾದರೋ ಎಲ್ಲಾ ವಿಧದಲ್ಲಿ ಪ್ರಯೋಜನವಾದದ್ದು; ಇದಕ್ಕೆ ಇಹಪರಗಳಲ್ಲಿಯೂ ಜೀವ ವಾಗ್ದಾನ ಉಂಟು ಎಂದು ಹೇಳುತ್ತಾನೆ (1ತಿಮೊ 4:7,8).

ದೇವಮಕ್ಕಳೇ, ಭಕ್ತಿ ವೃದ್ಧಿಗೆ ಕೊನೆಯೆಂಬುದಿಲ್ಲ ನಿಮ್ಮ ಜೀವಾಂತ್ಯದವರೆಗೂ ಆತ್ಮೀಕ ಬೆಳವಣಿಗೆಯಲ್ಲಿ ನಿಮ್ಮ ಪ್ರಯತ್ನ ಸಾಗುತ್ತಲೇ ಇರಲಿ. ಕ್ರೈಸ್ತ ಓಟದಲ್ಲಿ ನಿಮ್ಮ ಪ್ರಯತ್ನ ನಿಲ್ಲದಿರಲಿ. ನಂಬುವವರಿಗೆ ನೀವು ನಡೆ ನುಡಿ ಪ್ರೀತಿ ನಂಬಿಕೆ ಶುದ್ಧತ್ವ ಇವುಗಳ ವಿಷಯದಲ್ಲಿ ಮಾದರಿಯಾಗಿರಿ.

**ನೆನಪಿಗೆ : 'ಗಟ್ಟಿಯಾದ ಆಹಾರವು ಪ್ರಾಯಸ್ಥರಿಗೋಸ್ಕರ ಅಂದರೆ ಜ್ಞಾನೇಂದ್ರಿಯಗಳನ್ನು ಸಾಧನೆಯಿಂದ ಶಿಕ್ಷಿಸಿಕೊಂಡು ಇದು ಒಳ್ಳೇದು ಅದು ಕೆಟ್ಟದ್ದು ಎಂಬ ಬೇಧವನ್ನು ತಿಳಿದವರಿಗೋಸ್ಕರವಾಗಿದೆ' (ಇಬ್ರಿ 5:14).**

## ಡಿಸೆಂಬರ್ 25 ಕ್ರಿಸ್ತಜಯಂತಿಯ ಶುಭಾಷಯ

ಬೆಳಗ್ಗೆ : ಚೆಫನ್ಯ 1,2,3
ಸಂಜೆ : ಪ್ರಕ 16

**'ಆತನು ಮಹಾಪುರುಷನಾಗಿ ಪರಾತ್ಪರನ ಕುಮಾರನೆನಿಸಿಕೊಳ್ಳುವನು; ಇದಲ್ಲದೆ ದೇವರಾಗಿರುವ ಕರ್ತನು ಆತನ ಮೂಲಪಿತನಾದ ದಾವೀದನ ಸಿಂಹಾಸನವನ್ನು ಆತನಿಗೆ ಕೊಡುವನು' (ಲೂಕ 1:32).**

"ಅನುದಿನದ ಆಹಾರ" ಸಂಸ್ಥೆಯ ಕುಟುಂಬದವರಿಗೆಲ್ಲಾ ಕ್ರಿಸ್ತ ಜಯಂತಿಯ ಶುಭಾಷಯಗಳು. ಎರಡು ಸಾವಿರ ವರುಷಗಳ ಹಿಂದೆ, ಕ್ರಿಸ್ತನು ಜನಿಸಿದನು ಎಂದು ಹೇಳುವದಕ್ಕೆ ಬದಲು, ಇಂದು ಕ್ರಿಸ್ತನು ನನ್ನೊಳಗೆ ಮಹಾಮಹಿಮನಾಗಿ ವಾಸಿಸುತ್ತಿರುವನು. ಅಂದು ಮರಿಯಳ ಮಗನಾಗಿ ಜನಿಸಿದವನು ಇಂದು ನನ್ನೊಳಗೆ ರಾಜಾಧಿರಾಜನಾಗಿ ಆಸೀನನಾಗಿರುವನು. ಆತನು ಸರ್ವಶಕ್ತನು ಎಂದು ಹೇಳಿರಿ.

ನಿಮ್ಮ ಜೀವಿತದಲ್ಲಿ ಕ್ರಿಸ್ತನು ದೊಡ್ಡವನೂ, ಹೆಚ್ಚಿನವನೂ, ಮೊದಲಿಗನೂ ಆಗಿರಲಿ. ಆಲೋಚಿಸುವದಕ್ಕಿಂತಲೂ, ಅರಿಯುವದಕ್ಕಿಂತಲೂ ಅಧಿಕವಾದ ಕಾರ್ಯಗಳನ್ನು ಆತನು ಮಾಡುವಾತನಾಗಿರುವನು. ಯೆಹೋವನು ದೊಡ್ಡವನೂ ಬಹಳವಾಗಿ ಸ್ತುತ್ಯನೂ ಆಗಿದ್ದಾನೆ ಎಂದು ಸತ್ಯವೇದ ಹೇಳುತ್ತದೆ. ಯೇಸುಕ್ರಿಸ್ತನನ್ನು ಬಾಲಕನನ್ನಾಗಿ ಸಹಾಯ ಮಾಡಲು ತ್ರಾಣವಿಲ್ಲದವನನ್ನಾಗಿ ನೋಡಬೇಡಿರಿ. ಪೇತ್ರನು ಆತನನ್ನು ಆರಡಿ ಎತ್ತರವುಳ್ಳ ಮನುಷ್ಯನನ್ನಾಗಿ ನೋಡಿದ್ದರಿಂದಲೇ ಏನೋ, ಸಮುದ್ರದ ದೊಡ್ಡ ಅಲೆ ಬಂದಾಗ, ತಾನು ಮುಳುಗಿ ಹೋಗುವೆನೆಂಬ ಭಯ ಅವನಲ್ಲಿ ಉಂಟಾಯಿತು. ದೇವಕುಮಾರನಾದ ಯೇಸುಕ್ರಿಸ್ತನು ಯಾರಾಗಿರುವನು? ಸರ್ವಸೃಷ್ಟಿ ಕರ್ತನೂ, ಮಹಿಮೆಯರಾಜನೂ ಆಗಿರುವವನು; ಸೇನಾಧೀಶ್ವರನಾದ ಕರ್ತನು ಏಳು ನಕ್ಷತ್ರಗಳನ್ನು ತನ್ನ ಕೈಯಲ್ಲಿ ಹಿಡಿದು ಏಳು ದೀಪದ ಸ್ಥಂಭಗಳ ನಡುವೆ ತಿರುಗಾಡುತ್ತಿರುವಾತನು, ಯೋನನಿಗಿಂತಲೂ ದೊಡ್ಡವನು (ಮತ್ತಾ 12:4). ಸೊಲೊಮೋನನಿಗಿಂತಲೂ ದೊಡ್ಡವನು (ಮತ್ತಾ 12:41). ದೇವಾಲಯಕ್ಕಿಂತಲೂ ಹೆಚ್ಚಿನವನು (ಮತ್ತಾ 12:6). ಹಾಗೂ ಆತನು ರಾಜಾಧಿರಾಜನಾಗಿದ್ದಾನೆ.

ದೇವಮಕ್ಕಳೇ, ಕರ್ತನಾದ ಯೇಸುಕ್ರಿಸ್ತನು ಸೈತಾನನ ಕ್ರಿಯೆಗಳನ್ನು ಲಯಪಡಿಸುವದಕ್ಕಾಗಿ ಬಂದಾತನು. ಸೈತಾನನ ತಲೆಯನ್ನು ಜಜ್ಜಿದನು. ಆದ್ದರಿಂದ ನಿಮ್ಮಲ್ಲಿರುವಾತನು ಲೋಕದಲ್ಲಿರುವವನಿಗಿಂತ ಹೆಚ್ಚಿನವನು ಎಂದು ಹೇಳಿರಿ (1ಯೋಹಾ 4:4). ಮಂತ್ರವಾದಿಗಳ ಕುರಿತಾಗಿ, ಮಾಟಮಂತ್ರಗಳ ಕುರಿತಾಗಿ ಚಿಂತಿಸ ಬೇಡಿರಿ ಯಾಕೋಬಿಗೆ ವಿರೋಧವಾಗಿ ಮಂತ್ರತಂತ್ರಗಳಿಲ್ಲ. ಇಸ್ರಾಯೇಲಿಗೆ ವಿರೋಧವಾಗಿ ಕಣಿ ಹೇಳುವವರಿಲ್ಲ (ಅರಣ್ಯ 23:23). ನಿಮ್ಮ ವಿರೋಧವಾಗಿ ಏಳುವ ಯಾವ ಆಯುಧವೂ ಫಲಿಸುವದಿಲ್ಲ (ಯೆಶಾ 54:17). ಕರ್ತನೇ ನಿಮ್ಮ ನೀತಿಯಾಗಿರಲಿ. ಹಾಗೂ ಆತನೇ ನಮಗೆ ರಕ್ಷಕನೂ ಗುರಾಣಿಯೂ ಆಗಿದ್ದಾನೆ.

**ನೆನಪಿಗೆ : 'ನೀನು ಆಲೋಚನೆಯಲ್ಲಿ ಶ್ರೇಷ್ಠನು ಕಾರ್ಯದಲ್ಲಿ ಸಮರ್ಥನು; ನೀನು ಪ್ರತಿಯೊಬ್ಬನಿಗೂ ಅವನವನ ಕರ್ಮಕ್ಕೂ ನಡತೆಗೂ ತಕ್ಕ ಫಲವನ್ನು ಕೊಡಬೇಕೆಂದು ನರಜನ್ಮದವರ ಮಾರ್ಗಗಳನ್ನೆಲ್ಲಾ ಬಲ್ಲಾತನು' (ಯೆರೆ 32:19).**



## ಡಿಸೆಂಬರ್ 26 ಪ್ರಯತ್ನವೂ ನಂಬಿಕೆಯೂ!

ಬೆಳಗ್ಗೆ : ಹಗ್ಗಾಯ 1,2
ಸಂಜೆ : ಪ್ರಕ 17

**'ಅವನ ನಂಬಿಕೆಯು ಕ್ರಿಯೆಗಳೊಂದಿಗೆ ಪ್ರವರ್ತಿಸಿ ಆ ಕ್ರಿಯೆಗಳಿಂದಲೇ ಸಿದ್ಧಿಗೆ ಬಂತೆಂಬದು ಕಾಣಬರುತ್ತದಲ್ಲಾ (ಯಾಕೋ 2:22).**

ಲೌಕೀಕವಾದವರು, ತಮ್ಮ ವಿದ್ಯೆ ಚಾತುರ್ಯ, ಅನುಭವಗಳ ಮೇಲೆ ನಂಬಿಕೆ ಇಟ್ಟು ಪ್ರಯತ್ನಮಾಡುವರು. ಆದರೆ ಕ್ರೈಸ್ತ ಜೀವಿತವು ನಂಬಿಕೆಯ ಮೇಲೆ ನಿಂತಿದೆ ಅಂದರೆ ನಾವೋ, ಕರ್ತನ ಮೇಲೆ ನಂಬಿಕೆ ಇಟ್ಟು ಪ್ರಯತ್ನ ಮಾಡುವೆವು, ಅಸ್ತಿವಾರ ಉಪದೇಶಗಳಲ್ಲಿ, ದೇವರ ಹೆಸರಿನಲ್ಲಿ ನಂಬಿಕೆ ಇಡುವದು ಒಂದಾಗಿದೆ.

ನನ್ನ ಮಗಳು, ಚಿಕ್ಕ ವಯಸ್ಸಿನಿಂದಲೇ, ತಾನು ಒಬ್ಬ ಮಿಶನರಿ ವೈದ್ಯಳಾಗ ಬೇಕು. ಅದರ ಮೂಲಕ ಸುವಾರ್ತೆಯನ್ನು ಜನರಿಗೆ ಸಾರುವಾಗ ಜನರು ಸುವಾರ್ತೆಯನ್ನು ಅಂಗೀಕರಿಸಿಕೊಳ್ಳುವರು ಎಂಬ ನಂಬಿಕೆ. ಆದರೆ +2 ಪರೀಕ್ಷೆಯಲ್ಲಿ ಕಡಿಮೆ ಅಂಕಗಳನ್ನು ತೆಗೆದುಕೊಂಡದ್ದರಿಂದ, ಯಾವದೇ ವೈದ್ಯಕೀಯ ಕಾಲೇಜುಗಳಲ್ಲಿ ಅವಳಿಗೆ ಪ್ರವೇಶ ಸಿಗಲಿಲ್ಲ. ನಾವು ಕರ್ತನ ಮೇಲೆ ನಂಬಿಕೆ ಇಟ್ಟಿದ್ದರಿಂದ, ರಾಜಕೀಯ ವ್ಯಕ್ತಿಗಳ ಶಿಫಾರಸ್ಸಿಗಾಗಲಿ ಪ್ರಯತ್ನಿಸಲಿಲ್ಲ. ವಂತಿಕೆ (Donation) ಯನ್ನೋ ಲಂಚವನ್ನೋ ನೀಡಲು ಸಿದ್ಧರಿರಲಿಲ್ಲ. ಹೋರಾಡಿ ಪ್ರಾರ್ಥಿಸುತ್ತಲೇ ಇದ್ದೆವು. ಯಾವ ಕಾಲೇಜಿನಲ್ಲೂ ಅವಳಿಗೆ ಸೀಟು ಸಿಕ್ಕಲಿಲ್ಲ. ನನ್ನ ಮಗಳು ಮನಗುಂದಲಿಲ್ಲ. ತಿಂಗಳುಗಳು ವೇಗವಾಗಿ ಓಡಲಾರಂಭಿಸಿತು. ಆಗಸ್ಟ್ ತಿಂಗಳೂ ಬಂದು ಬಿಟ್ಟಿತು. ನಾನು ನನ್ನ ಮಗಳಿಗೆ ಈ ವರ್ಷ ಬಿ.ಎಸ್ಸಿ ಗೆ ಸೇರು ಸಮಯವನ್ನು ವ್ಯರ್ಥಮಾಡಬೇಡ, ಮುಂದಿನ ವರ್ಷ ಪುನಃ ಪ್ರಯತ್ನ ಮಾಡೋಣ ಎಂದು ಹೇಳಿದೆ. ಆದರೆ ಅವಳೋ ಬಹಳ ವಿಶ್ವಾಸದಿಂದ ಕರ್ತನು ನಿಶ್ಚಯವಾಗಿ ನನಗೆ ಈ ಸಾರಿ ವೈದ್ಯಕೀಯ ಕಾಲೇಜಿಗೆ ಪ್ರವೇಶ ದೊರಕಿಸಿ ಕೊಟ್ಟೇ ಕೊಡುವನು' ಅಂದಳು.

ಸ್ವಲ್ಪ ದಿನಗಳನಂತರ ಒಬ್ಬ ದೇವಮನುಷ್ಯನು ಪ್ರಾರ್ಥಿಸಿ ಕರ್ತನು ನಿನಗೆ ಒಂದು ಬೆಟ್ಟದ ತಪ್ಪಲಲ್ಲಿ ನಿನಗೆ ಸ್ಥಳವನ್ನು ಸಿದ್ಧ ಪಡಿಸಿರುವನು. ಆ ಕಾಲೇಜಿನ ಕಟ್ಟಡ ಯಾವ ರೀತಿಯಲ್ಲಿ ಇರುವದು ಎಂಬುದನ್ನು ವರ್ಣಿಸಿದರು. ಮುಂದಿನವಾರ ಪ್ರವಾದನಾ ವರವಿದ್ದ ಒಬ್ಬ ಪೊಲೀಸ್ ಅಧಿಕಾರಿಯ ಪತ್ನಿ, ನಮ್ಮ ಮನೆಗೆ ಬಂದು, ನನ್ನ ಮಗಳನ್ನು ಕರೆದು, "ನಿನ್ನ ಜನ್ಮದಿನ ಯಾವಾಗ ಬರುವದೋ, ಅಂದು ಕರ್ತನು ನಿನಗೊಂದು ಉಡುಗೊರೆ ಕೊಡುವನು" ಎಂದು ಹೇಳಿ ಹೋದರು. ಅದರಂತೆಯೇ ಅವಳ ಜನ್ಮದಿನದಂದು ನೇಪಾಳ ವಿಶ್ವವಿದ್ಯಾಲಯದ ಒಂದು ವೈದ್ಯಕೀಯ ಕಾಲೇಜಿಗೆ ಪ್ರವೇಶ ದೊರಕಿರುವದಾಗಿ ಕಂಪ್ಯೂಟರ್ ಮೂಲಕ ತಿಳಿಸಲ್ಪಟ್ಟಿತ್ತು.

ದೇವಮಕ್ಕಳೇ, ಕರ್ತನ ಹಸ್ತವೇ ನಮಗೆ ಆಧಾರವಾಗಿದೆ. ಕರ್ತನು ಇಲ್ಲದ್ದನ್ನು ಇರುವದಾಗಿ ಕರೆಯುವಾತನು. ಕತ್ತಲೆಯಿಂದ ಬೆಳಕನ್ನು ನೀಡುವ ದೇವರು ನಿಶ್ಚಯವಾಗಿ ಆತನು ನಿಮಗೆ ಒಂದು ಅದ್ಭುತವನ್ನು ಮಾಡುವನು.

**ನೆನಪಿಗೆ : 'ಮೊದಲಿಂದಿರುವ ಭರವಸವನ್ನು ಕಡೆಯವರೆಗೂ ದೃಢವಾಗಿ ಹಿಡಿದುಕೊಳ್ಳುವ ಪಕ್ಷಕ್ಕೆ ಕ್ರಿಸ್ತನಲ್ಲಿ ಪಾಲುಗಾರರಾಗಿದ್ದೇವಲ್ಲಾ' (ಇಬ್ರಿ 3:14).**

ಡಿಸೆಂಬರ್ 27

## ಕರ್ತನು ಒಬ್ಬ ಪಾಲುಗಾರನು!

ಬೆಳಗ್ಗೆ : ಜೆಕರ್ಯ 1,2,3,4
ಸಂಜೆ : ಪ್ರಕ 18

**'ನಿನ್ನ ಎಲ್ಲಾ ನಡವಳಿಯಲ್ಲಿ ಆತನ ಚಿತ್ತಕ್ಕೆ ವಿಧೇಯನಾಗಿರು; ಆತನೇ ನಿನ್ನ ಮಾರ್ಗಗಳನ್ನು ಸರಾಗಮಾಡುವನು' (ಜ್ಞಾನೋ 3:6).**

ಬಿಡದೆ ಪ್ರಯತ್ನ ಮಾಡಲು, ನಮಗೆ ದೃಢವಾದ ನಂಬಿಕೆ, ಅವಶ್ಯ. ಆದರೆ ದೃಢವಾದ ನಂಬಿಕೆಯ ಮೇಲೆ ಮಾತ್ರ ಆತುಕೊಂಡರೆ ಸಾಲದು. ದೇವರ ಕೃಪೆ ದೇವರ ಸಹಾಯ ಬಹು ಅವಶ್ಯವಾದದ್ದು. ನಿಮ್ಮ ಎಲ್ಲಾ ಪ್ರಯತ್ನಗಳಲ್ಲಿ ಕರ್ತನನ್ನು ಸೇರಿಸಿಕೊಳ್ಳಿರಿ, ಆತನನ್ನು ನಿಮ್ಮ ಪಾಲುದಾರನನ್ನಾಗಿ ಮಾಡಿಕೊಳ್ಳಿರಿ.

ಯಾಕೋಬನು ತನ್ನ ತಂದೆಯ ಮನೆಯನ್ನು ಬಿಟ್ಟು ಹೊರಟಾಗ, ತನ್ನ ಭವಿಷ್ಯವೇನು? ಎಂಬುದನ್ನು ತಿಳಿಯದವನಾಗಿದ್ದನು. ತನ್ನ ಮಾವನಾದ ಲಾಬಾನನ ಮನೆಗೆ ಹೊರಟಾಗ ಒಂದು ಹರಕೆಯನ್ನು ಮಾಡಿದನು. "ನಾನು ಕಂಬವಾಗಿ ನಿಲ್ಲಿಸಿರುವ ಈ ಕಲ್ಲು ದೇವರ ಮನೆಯಾಗುವದು. ಇದಲ್ಲದೆ ದೇವರೇ ನಿನ್ನಿಂದ ನನಗೆ ಬರುವ ಎಲ್ಲಾ ಆಸ್ತಿಯಲ್ಲಿ ಹತ್ತರಲ್ಲೊಂದು ಪಾಲನ್ನು ನಿನಗೆ ಸಮರ್ಪಿಸುವೆನು ಎಂಬುದಾಗಿ ಮಾತು ಕೊಡುತ್ತೇನೆ ಎಂದು ಹರಕೆ ಮಾಡಿಕೊಂಡನು" (ಆದಿ 28:22). ಪರೋಕ್ಷವಾಗಿ ಕರ್ತನನ್ನು ತನ್ನ ಪಾಲುದಾರನನ್ನಾಗಿ ಸೇರಿಸಿಕೊಂಡನು. ಆದ್ದರಿಂದಲೇ ಇಪ್ಪತ್ತು ವರುಷಗಳ ನಂತರ, ಅವನು ಕೃತಜ್ಞತೆಯಿಂದ ಕರ್ತನನ್ನು ನೋಡಿ, "ನೀನು ನಿನ್ನ ದಾಸನಾದ ನನ್ನ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ನಿನ್ನ ವಾಗ್ದಾನವನ್ನು ನೆರವೇರಿಸಿದ್ದೀಯಲ್ಲಾ, ನಾನು ಅದಕ್ಕೆ ಕೇವಲ ಅಪಾತ್ರನಾಗಿದ್ದೇನೆ. ನಾನು ಮೊದಲು ಈ ಯೊರ್ದನ್ ನದಿಯನ್ನು ದಾಟಿದಾಗ ನನ್ನ ಹತ್ತಿರ ಕೋಲು ಮಾತ್ರವೇ ಇತ್ತು. ಈಗ ಎರಡು ಪಾಳೆಯಗಳಿಗೆ ಒಡೆಯನಾಗಿದ್ದೇನೆ" ಎಂದು ಕರ್ತನನ್ನು ಸ್ತುತಿಸಿದನು (ಆದಿ 32:10).

ಒಬ್ಬ ಯೌವನ ಪ್ರಾಯದ ವೈದ್ಯರು ಭಾರತದಲ್ಲಿ ವಿದ್ಯಾಭ್ಯಾಸ ಮಾಡಿ, ಮಲೇಶಿಯದಲ್ಲಿ ತನ್ನ ವೃತ್ತಿಯನ್ನು ಪ್ರಾರಂಭಿಸಿದರು. ಆದರೆ ಆ ಊರಿನಲ್ಲಿ ಅನುಭವ ಉಳ್ಳ ಅನೇಕ ವೈದ್ಯರಿದ್ದರು. ಆ ಯುವಕ ವೈದ್ಯರು ತಮ್ಮ ವೃತ್ತಿಯಲ್ಲಿ ಕರ್ತನನ್ನು ಪಾಲುಗಾರನನ್ನಾಗಿ ಮಾಡಿಕೊಂಡು, ನನ್ನ ಪ್ರತಿದಿನ ಆದಾಯದಲ್ಲಿ ದಶಮಾಂಶವನ್ನು ಕೊಡುವದಾಗಿ ಹರಕೆ ಮಾಡಿಕೊಂಡರು. ಇಂದು ಮಲೇಶಿಯಾದಲ್ಲೇ ಬಹು ದೊಡ್ಡ ವೈದ್ಯರಾಗಿ ಕರ್ತನ ಸೇವೆಗೆ ಧಾರಾಳವಾಗಿ ಸಹಾಯ ಮಾಡುತ್ತಿರುವರು.

ದೇವಮಕ್ಕಳೇ, ನಿಮ್ಮ ಎಲ್ಲಾ ಪ್ರಯತ್ನಗಳಲ್ಲಿ ಕರ್ತನನ್ನು ನಿಮ್ಮ ಪಾಲುಗಾರನನ್ನಾಗಿಸಿಕೊಳ್ಳಿರಿ. ನಿಮ್ಮ ಪ್ರಯತ್ನ ಎಷ್ಟೇ ಇದ್ದರೂ, ಕರ್ತನ ಕೃಪೆ, ಆತನ ಆಶೀರ್ವಾದ ಅತಿ ಅವಶ್ಯ. ನೀವು ಆತನನ್ನು ಪಾಲುಗಾರನಗಿ ಮಾಡಿಕೊಂಡರೆ ನಿಶ್ಚಯವಾಗಿ ನೀವು ಕೈಹಾಕಿದ ಕೆಲಸ ಕಾರ್ಯಗಳು ಸಫಲವಾಗುವವು.

**ನೆನಪಿಗೆ : 'ಇತರರಿಗೆ ನಿಮ್ಮನ್ನು ಅಧೀನಮಾಡದೆ ಎಲ್ಲರಿಗೂ ಶಿರಸ್ಸನ್ನಾಗಿಯೇ ಮಾಡುವನು. ನೀವು ಎಲ್ಲರಿಗಿಂತಲೂ ಮೇಲಣವರಾಗಿರುವಿರೇ ಹೊರತು ಕೆಳಗಣವರಾಗಿರುವದಿಲ್ಲ' (ಧರ್ಮೋ 28:14).**



ಡಿಸೆಂಬರ್ 28

## ದೊಡ್ಡ ತಡೆಯಾ?

ಬೆಳಗ್ಗೆ : ಜೆಕ 5,6,7,8
ಸಂಜೆ : ಪ್ರಕ 19

**'ಒಡೆಯುವವನು ಅವರ ಮುಂದೆ ಹೊರಟಿದ್ದಾನೆ; ಅವರೂ ಬಾಗಿಲನ್ನು ಒಡೆದು ನುಗ್ಗಿ ಹೊರಟಿದ್ದಾರೆ; ಅವರ ಅರಸನು ಅವರ ಮುಂದೆ ತೆರಳಿದ್ದಾನೆ ಯೆಹೋವನು ಅವರ ಮುಂಭಾಗದಲ್ಲಿ ನಡೆಯುತ್ತಿದ್ದಾನೆ' (ಮೀಕ 2:13).**

ದೊಡ್ಡ ಸಮಸ್ಯೆಗಳು, ಹೋರಾಟಗಳು, ತಡೆಗಳನ್ನು ನೋಡಿ, ಅನೇಕರು ಮನಗುಂದಿ ಹೋಗುವರು, ಪ್ರಯತ್ನವನ್ನು ಬಿಟ್ಟು ಬಿಡುವರು. ಅವುಗಳೆಲ್ಲಾ ಲೋಕದವರಿಗೆ ದೊಡ್ಡದಾಗಿ ಕಾಣಬಹುದು. ಆದರೆ ಕರ್ತನ ಮಹಿಮೆಗಿಂತ ಅವು ದೊಡ್ಡದಲ್ಲ. ಆದ್ದರಿಂದ ತಡೆಗಳನ್ನು ಸಮಸ್ಯೆಗಳನ್ನು ನೋಡದೆ, ತಡೆಗಳನ್ನು ಒಡೆದು, ದಾರಿಯನ್ನು ಸಮಮಾಡುವ ಕರ್ತನನ್ನೇ ದೃಷ್ಟಿಸಿರಿ.

ವಿಶ್ವಾಸಿಗಳು ಕರ್ತನನ್ನೇ ದೃಷ್ಟಿಸುವಾಗ, ಆತನು, ತಡೆಕಲ್ಲುಗಳನ್ನು ಮೆಟ್ಟಿಲಿನ ಕಲ್ಲುಗಳನ್ನಾಗಿ ಮಾರ್ಪಡಿಸುವನು. ಅಮೆರಿಕಾದ ರೈಟ್ ಸಹೋದರರು, ವಿಮಾನವನ್ನು ಕಂಡು ಹಿಡಿಯುವಾಗ, ಎಷ್ಟೋ ತಡೆಗಳು ಉಂಟಾದವು. ಆದರೆ ಅವರು ಸೋತು ಹೋಗಲಿಲ್ಲ, ಪುನಃ ಪುನಃ ತಪ್ಪುಗಳನ್ನು ಕೊರತೆಗಳನ್ನು ಸರಿಪಡಿಸಿಕೊಳ್ಳುತ್ತಾ ಕೊನೆಗೆ ಜಯಶಾಲಿಗಳಾದರು. ಪ್ರಪಂಚದ ಎರಡನೇ ಮಹಾಯುದ್ಧದಲ್ಲಿ ಜಪಾನ್ ಬಹು ದೊಡ್ಡ ಸೋಲನ್ನು ಅನುಭವಿಸಿತು. ಅಮೆರಿಕಾ ಅಣುಗುಂಡಿನ ಮಳೆಯನ್ನೇ ಆ ದೇಶದ ಮೇಲೆ ಸುರಿಸಿತು. ಹಿರೋಷಿಮಾ ನಾಗಸಾಕಿ ಪಟ್ಟಣಗಳು ಸುಟ್ಟು ನೆಲಸಮವಾದವು. ಆದರೂ ಜಪಾನಿಯರು ಧೈರ್ಯಗೆಡಲಿಲ್ಲ. ತಮ್ಮ ಪ್ರಯತ್ನವನ್ನು ಬಿಡಲಿಲ್ಲ. ಇಂದು ಎಲ್ಲಾ ಕೈಗಾರಿಕೆಗಳಲ್ಲೂ, ಪ್ರಪಂಚದ ಇತರೆ ದೇಶಗಳಿಗಿಂತ ಮುಂಚೂಣಿಯಲ್ಲಿ ನಿಂತಿರುವರು.

ಬೋಧಕರಾದ ಪಾಲ್‌ಯಾಂಗಿ ಚೋ, ಒಂದು ಹಳ್ಳಿಯಲ್ಲಿ ನಾಲ್ಕು ಮಂದಿಯೊಂದಿಗೆ, ತನ್ನ ಸಭೆಯನ್ನು ಪ್ರಾರಂಭಿಸಿದಾಗ, ಅದರಲ್ಲಿ ಸಾವಿರ ಸದಸ್ಯರಿ ರಬೇಕೆಂದು ಪ್ರಾರ್ಥಿಸಿದರು. ಅಲ್ಲಿದ್ದ ಇತರೆ ಮತಸ್ಥರು ಊರನ್ನೇ ಬಿಟ್ಟು ಹೋಗ ಬೇಕೆಂದು ಆತನ ವಿರುದ್ಧವಾಗಿ ಅನೇಕ ಕೆಡುಕುಗಳನ್ನು ಉಂಟುಮಾಡಿದರು. ಆದರೆ, ಆತನು ಧೃತಿಗೆಡಲಿಲ್ಲ, ಇಂದು ಅವರ ಸಭೆಯಲ್ಲಿ ಲಕ್ಷಾನುಗಟ್ಟಲೆ ವಿಶ್ವಾಸಿಗಳಿರುವರು.

ದೇವಮಕ್ಕಳೇ ಸಮಸ್ಯೆಗಳು, ತಡೆಗಳು ಬರುವಾಗ ಧೃತಿಗೆಡದೆ. ತಡೆಗಳನ್ನು ಒಡೆಯುವ ಕರ್ತನ ಕಡೆಗೆ, ನಿಮ್ಮ ಕಣ್ಣುಗಳನ್ನೆತ್ತಿರಿ. ಆತನು ಇರುವ ತಡೆಗಳನ್ನೆ ನಿಮ್ಮ ಮೆಟ್ಟಿಲುಗಳನ್ನಾಗಿ ಮಾರ್ಪಡಿಸಿ, ನಿಮ್ಮನ್ನು ಜಯದ ಹಾದಿಯಲ್ಲಿ ನಡೆಸುವನು. ಹಾಗೂ ಆತನು ನಿಮ್ಮ ಮುಂದೆ ಹೋಗಿ ದಿಣ್ಣೆಗಳನ್ನು ಸಮಮಾಡಿ ನಿಮಗೆ ವಿರೋಧವಾಗಿ ಏಳುವ ಎಲ್ಲಾ ಅಡಚಣೆಗಳನ್ನು ತೆಗೆದು ಹಾಕುವನು.

**ನೆನಪಿಗೆ : 'ನನಗೆ ಪ್ರಾಪ್ತವಾಗಿರುವ ಸ್ವಾಸ್ತ್ಯವು ರಮಣೀಯವಾದದ್ದು; ಅದು ನನಗೆ ಸಂತೃಪ್ತಿಕರವಾಗಿದೆ' (ಕೀರ್ತ 16:6).**

**ಡಿಸೆಂಬರ್ 29**

## ನೆಲೆಗೊಳಿಸುವನು!

**ಬೆಳಗ್ಗೆ : ಜೆಕ 9,10,11,12**
**ಸಂಜೆ : ಪ್ರಕ 20**

**‘ಕೃಪಾಪೂರ್ಣನಾದ ದೇವರು ತಾನೇ ನೀವು ಸ್ವಲ್ಪಕಾಲ ಬಾಧೆ ಪಟ್ಟ ಮೇಲೆ ನಿಮ್ಮನ್ನು ಯೋಗ್ಯಸ್ಥಿತಿಗೆ ತಂದು ನೆಲೆಗೊಳಿಸಿ ಬಲಪಡಿಸುವನು’ (1ಪೇತ್ರ 5:10).**

ಕರ್ತನು ನಿಮ್ಮನ್ನು ನೆಲೆಗೊಳಿಸಲು ಯಾವಾಗಲೂ ಸಿದ್ಧನಾಗಿರುವನು. ದಾವೀದನು, ಕರ್ತನ ವಾಗ್ದಾನವನ್ನು ಅಂಗೀಕರಿಸಿಕೊಂಡು, ಕರ್ತನ ಬಳಿ "ನಿರ್ದೋಷಿಯಾದ ನನ್ನನ್ನಾದರೋ ನೀನು ಉದ್ಧಾರ ಮಾಡಿ ನಿನ್ನ ಸನ್ನಿಧಿಯಲ್ಲಿ ಶಾಶ್ವತವಾಗಿ ನಿಲ್ಲಿಸುವಿ" ಎಂದು ಹೇಳುತ್ತಾನೆ (ಕೀರ್ತ 41:12).

ಇಂಗ್ಲೆಂಡ್ ದೇಶವನ್ನು ಆಳುತ್ತಿದ್ದ, "ರಾಬರ್ಟ್ ವುರಸ್" ಎಂಬ ಅರಸನನ್ನು ಶತ್ರುಗಳು ಸೋಲಿಸಿ ರಾಜ್ಯವನ್ನು ವಶಪಡಿಸಿಕೊಂಡರು. ಆದರೆ ಅವನು ಶತ್ರುಗಳ ವಿರೋಧವಾಗಿ ಹೋರಾಡುವ ತನ್ನ ಪ್ರಯತ್ನವನ್ನು ಕೈಬಿಡಲಿಲ್ಲ ಹದಿನೆಂಟು ಸಾರಿ ಮತ್ತೆ ಮತ್ತೆ ಅವರ ವಿರೋಧವಾಗಿ ಯುದ್ಧಮಾಡಿ ದೊಡ್ಡ ಸೋಲನ್ನು ಅನುಭವಿಸಿದನು. ಅವನ ವಿರೋಧಿಗಳು ಅವನನ್ನು ಕೊಲೆಮಾಡಬೇಕೆಂದು ಹಿಂಬಾಲಿಸಿದರು. ಆಗ ಅವನು ಓಡಿಹೋಗಿ ಒಂದು ಗವಿಯಲ್ಲಿ ಅಡಗಿಕೊಂಡನು. ಆಗ ಗವಿಯ ಬಾಗಿಲಿನ ಹೊರ ಭಾಗದಲ್ಲಿ ಒಂದು ಜೇಡರ ಹುಳ ಬಲೆ ನೇಯಲಾರಂಭಿಸಿತು. ಎಷ್ಟು ಪ್ರಯತ್ನ ಪಟ್ಟರೂ ಗವಿಯ ಬಾಗಿಲಿನ ಒಂದು ಕಡೆಯಿಂದ ಇನ್ನೊಂದು ಕಡೆಗೆ ದಾರ ನೇಯಲಾಗದೆ ಬೀಳುತ್ತಿತ್ತು. ಆದರೂ ಜೇಡ ತನ್ನ ಪ್ರಯತ್ನವನ್ನು ನಿಲ್ಲಿಸದೆ ಕೊನೆಗೂ ತನ್ನ ಪ್ರಯತ್ನದಲ್ಲಿ ಸಫಲಗೊಂಡು ಬಲೆಯನ್ನು ನೇಯ್ದು ಅದರೊಳಗೆ ಕುಳಿತಿತು. ಇದನ್ನು ನೋಡುತ್ತಿದ್ದ ರಾಬರ್ಟ್ ವುರಸ್‌ಗೆ ನಂಬಿಕೆ, ಧೈರ್ಯ ಉಂಟಾಯಿತು. ಕರ್ತನು ನಿಶ್ಚಯವಾಗಿ ಸಿಂಹಾಸನದಲ್ಲಿ ಮತ್ತೆ ಕುಳ್ಳಿರಿಸಿ ನೆಲೆಗೊಳಿಸುವನು, ಎಂಬ ನಂಬಿಕೆ ಉಂಟಾಯಿತು. ಅವನನ್ನು ಅಟ್ಟಿಸಿಕೊಂಡು ಬಂದವರು ಗುಹೆಯ ಬಳಿಗೆ ಬಂದರು. ಗುಹೆಯ ಬಾಗಿಲಿನಲ್ಲಿ ಕಟ್ಟಿದ್ದ ಜೇಡರ ಬಲೆಯನ್ನು ನೋಡಿ, ಇದರೊಳಗೆ ಒಬ್ಬನು ಹೇಗೆ ಹೋದಾನು? ಬೇರೆ ಕಡೆ ಹುಡುಕೋಣವೆಂದು ಹೇಳಿ ಹೊರಟು ಹೋದರು. ಮತ್ತೊಮ್ಮೆ ಆ ರಾಜನು ತನ್ನ ಸಂಗಡಿಗರನ್ನು ಧೈರ್ಯಪಡಿಸಿ. ಕೊನೆಗೂ ಜಯವನ್ನು ಗಳಿಸಿದನು. ಅಂದು ಇಸ್ರಾಯೇಲ್ಯರು ಯೆರಿಕೊ ಕೋಟೆಯನ್ನು ಜಯಿಸಲು ಏಳುದಿನ ಕಾಯಬೇಕಾಯಿತು.

ದೇವಮಕ್ಕಳೇ, ಕರ್ತನು ನಿಮ್ಮನ್ನು ಯಾವ ಕಾರ್ಯಕ್ಕಾಗಿ ಕರೆದಿರುವನೋ, ಅದರಲ್ಲಿ ನಿಮ್ಮನ್ನು ನಿಶ್ಚಯವಾಗಿ ನೆಲೆಗೊಳಿಸುವನು. ಅದಕ್ಕಾಗಿ ಪ್ರಯತ್ನಪಡಿರಿ. "ಕರ್ತನು ನನ್ನನ್ನು ಕರೆದ ಕರೆಯಲ್ಲಿ ನಾನು ನೆಲೆಯಾಗಿರಬೇಕು. ಸೇವೆಯಲ್ಲಿ ನಾನು ನೆಲೆಗೊಳ್ಳಬೇಕು. ಅಂತ್ಯದವರೆಗೆ ಧೃತಿಗೆಡದೆ ಹೋರಾಡಬೇಕು. ಮಧ್ಯದಲ್ಲೇ ಬಿಟ್ಟು ಬಿಡುವದಿಲ್ಲ, ಮನಗುಂದಿ ಹೋಗುವದಿಲ್ಲ" ಎಂದು ತೀರ್ಮಾನ ಮಾಡಿರಿ.

**ನೆನಪಿಗೆ : ‘ನಿಮ್ಮ ನಂಬಿಕೆಗೆ ಉಂಟಾಗುವ ಪರಿಶೋಧನೆಯು ತಾಳ್ಮೆಯನ್ನುಂಟು ಮಾಡುವದೆಂದು ತಿಳಿದು ನೀವು ನಾನಾ ವಿಧವಾದ ಕಷ್ಟಗಳಲ್ಲಿ ಬಿದ್ದಿರುವಾಗ ಅದನ್ನು ಕೇವಲ ಆನಂದಕರವಾದದ್ದೆಂದು ಎಣಿಸಿರಿ’ (ಯಾಕೋ 1:2,3).**



**ಡಿಸೆಂಬರ್ 30**

## ಭಾರವಾದ ಸಂಕಟ!

**ಬೆಳಗ್ಗೆ : ಜೆಕ 13,14**
**ಸಂಜೆ : ಪ್ರಕ 21**

**‘ನಾವು ಬಲವನ್ನು ಮೀರಿದಂಥ ಅತ್ಯಧಿಕವಾದ ಭಾರದಿಂದ ಕುಗ್ಗಿ ಹೋಗಿ ಜೀವವುಳಿಯುವ ಮಾರ್ಗವನ್ನು ಕಾಣದವರಾದೆವು’ (2ಕೊರಿ 1:8).**

ಯಾವದೇ ಪರಿಸ್ಥಿತಿಯಲ್ಲಿಯೂ, ನಿಮ್ಮ ಪ್ರಯತ್ನವನ್ನು ಕೈ ಬಿಡಬೇಡಿರಿ, ಕೈಬಿಡದ ಕರ್ತನು, ನಿಮ್ಮನ್ನು ಕೈಹಿಡಿದಿರುವದರಿಂದ, ನಿಮ್ಮ ಓಟ ಜಯಭರಿತವಾಗಿ ಅಂತ್ಯಗೊಳ್ಳುವದು. ಬಲದಿಂದಲ್ಲ ಪರಾಕ್ರಮದಿಂದಲ್ಲ ನನ್ನ ಆತ್ಮನಿಂದಲೇ, ಆಗುವದು ಎಂದು ಸೇನಾಧೀಶ್ವರನಾದ ಕರ್ತನು ಹೇಳುವನು" (ಜೆಕ 4:6). ಆದ್ದರಿಂದ "ನೀವು ದೇವರಾತ್ಮನ ಮೂಲಕ ಆಂತರ್ಯದಲ್ಲಿ ವಿಶೇಷ ಬಲವನ್ನು ಹೊಂದಿರಿ’ (ಎಫೆ 3:16).

1987 ಆಗಸ್ಟ್ 16ನೇ ತಾರೀಖು ಅಮೆರಿಕಾದಿಂದ ಹೊರಟ ಒಂದು ವಿಮಾನ ಸ್ವಲ್ಪ ಸಮಯದಲ್ಲಿಯೇ ಅಪಘಾತಕ್ಕೊಳಗಾಗಿ, ಧರೆಗೆ ಉರುಳಿ ಬಿದ್ದಿತು. ನಾಲ್ಕು ವರುಷದ ಒಂದು ಮಗುವಿನ ಹೊರತು ಅದರಲ್ಲಿ ಪ್ರಯಾಣ ಮಾಡುತ್ತಿದ್ದ 150 ಮಂದಿ ಪಯಣಿಗರು ಮೃತ್ಯುವಿಗೊಳಗಾದರು. ಆ ಮಗುವಿನ ತಾಯಿ ಅಪಘಾತದ ಸಮಯದಲ್ಲಿ ಆ ಮಗುವಿನ ಮುಂದೆ ಮಂಡಿಯೂರಿ ಬಿಗಿಯಾಗಿ ಹಿಡಿದು ತಬ್ಬಿಕೊಂಡಿದ್ದರಿಂದ, ತಾಯಿ ಸತ್ತರೂ, ಮಗು ಕಾಪಾಡಲ್ಪಟ್ಟಿತು. ಈ ರೀತಿಯಾಗಿಯೇ, ಕರ್ತನೂ, ತನ್ನಲ್ಲಿರುವ ಪ್ರೀತಿಯಿಂದ, ನಿಮ್ಮನ್ನು ಕಾಪಾಡುವಂತೆ, ಕಲ್ವಾರಿ ಶಿಲುಬೆಯಲ್ಲಿ ತನ್ನ ಪ್ರಾಣವನ್ನು ಲೆಕ್ಕಿಸದೆ, ಸಂತೋಷದಿಂದ ತನ್ನನ್ನು ಒಪ್ಪಿಸಿಕೊಟ್ಟನು. ತನ್ನ ಪ್ರೀತಿಯ ರೆಕ್ಕೆಯೊಳಗೆ ಮುಚ್ಚಿಕೊಂಡನು. ಪರಾತ್ಪರನ ಮರೆಹೊಕ್ಕಿರುವವನು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತನಾಗಿರುವನು (ಕೀರ್ತ 91:1). ಕರ್ತನು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ತಡಮಾಡುತ್ತಾನೆಂಬದಾಗಿ ಕೆಲವರು ಅರ್ಥ ಮಾಡಿಕೊಳ್ಳುವ ಪ್ರಕಾರ ಆತನು ತಡಮಾಡುವವನಲ್ಲ, ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೆ, ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದು. ನಿಮ್ಮ ವಿಷಯದಲ್ಲಿ ದೀರ್ಘಶಾಂತಿಯುಳ್ಳವನಾಗಿದ್ದಾನೆ (2ಪೇತ್ರ 3:9) ಎಂದು ದೇವರ ವಾಕ್ಯ ಹೇಳುತ್ತದೆ.

ದೇವಮಕ್ಕಳೇ, ನಿಮ್ಮ ನಂಬಿಕೆಯನ್ನು ಅಲುಗಿಸುವಂಥ ಶೋಧನೆಗಳು, ನಿಮ್ಮ ಜೀವಿತದಲ್ಲಿ ಬರುವಾಗ ಬೇಸರಗೊಳ್ಳದಿರಿ. ಕರ್ತನಲ್ಲಿ ನೀವಿಟ್ಟಿರುವ ನಂಬಿಕೆ ಬಲಗೊಳ್ಳುವಂತೆ ದೇವರಾತ್ಮನ ಸಹಾಯವನ್ನು ಬಯಸಿ ಕರ್ತನಲ್ಲಿ ಬಲಹೊಂದಿರಿ ಯಾರ್‍ಯಾರು ತಮ್ಮ ಭಾರವನ್ನೆಲ್ಲಾ ಕರ್ತನ ಮೇಲೆ ಹಾಕಿ ವಿಶ್ರಾಂತಿ ಹೊಂದುವರೋ ಅವರು ಆತುರ ಪಡುವುದೇ ಇಲ್ಲ "ಭರವಸವಿಡುವವನು ಆತುರ ಪಡನು" (ಯೆಶಾ 28:16).

**ನೆನಪಿಗೆ : ‘ಸಾಯುತ್ತೇವೆಂಬ ನಿಶ್ಚಯ ನಮಗೆ ಉಂಟಾಯಿತು; ನಾವು ನಮ್ಮಲ್ಲಿ ಭರವಸವಿಟ್ಟುಕೊಳ್ಳದೆ, ಸತ್ತವರನ್ನು ಎಬ್ಬಿಸುವ ದೇವರಲ್ಲಿಯೇ ಭರವಸವಿಡುವವರಾಗ ಬೇಕೆಂದು ಹೀಗಾಯಿತು’ (2ಕೊರಿ 1:9).**